
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 34 | ಆಗಸ್ಟ್ 19-25, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಪಂಜರದಲ್ಲಿ ಕಾಶ್ಮೀರ



ನಾವು ಕಾರ್ಮಿಕರು ದೇಶವನ್ನು ಕಟ್ಟುತ್ತೇವೆ ಕಾಪಾಡುತ್ತೇವೆ. ಇಂದು, ಎಂದೆಂದಿಗೂ







ಸಂತ್ರಸ್ತರ ಪಾಲಿಗೆ ಕಟುಕನಿಗಿಂತ ಕಡೆಯಾದವರು

ದಮನಿತರಿಗೆ ದೊರೆಯದ 47ರ ಸ್ವಾತಂತ್ರ್ಯ



ಪ್ರವಾಹ-ಪೀಡಿತ ರಾಜ್ಯಗಳಿಗೆ ತುರ್ತಾಗಿ ಪರಿಹಾರ ಒದಗಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

"ನೈಸರ್ಗಿಕ ವಿಪತ್ತು, ಸಾವು-ನೋವುಗಳ ಸಮಯದಲ್ಲಿ ರಾಜಕೀಯ ಪಕ್ಷಪಾತ ಸರಿಯಲ್ಲ"

ದೇಶದ ವಿವಿಧ ಭಾಗಗಳಲ್ಲಿ ಪ್ರವಾಹಗಳಿಂದಾಗಿ ಪ್ರಾಣಹಾನಿಗಳು, ಆಸ್ತಿಗಳು ಮತ್ತು ಜಾನುವಾರುಗಳ ನಾಶವಾಗಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ.

ಕೇರಳ, ಸರಿಯಾಗಿ ಒಂದು ವರ್ಷದ ಹಿಂದೆ ಪ್ರವಾಹದಿಂದಾಗಿ ಭಾರೀ ವಿನಾಶವನ್ನು ಕಂಡ ರಾಜ್ಯ, ಮತ್ತೆ ಅತೀ ಹೆಚ್ಚು ಬಾಧಿತವಾಗಿದೆ. ಇದುವರೆಗೆ ಸಾವುಗಳ ಸಂಖ್ಯೆ 72ನ್ನು ತಲುಪಿದೆ, ರಕ್ಷಣಾ ಕಾರ್ಯಾಚರಣೆಗಳಲ್ಲಿ ಮತ್ತಷ್ಟು ಹೆಣಗಳು ಸಿಕ್ಕಿವೆ. ಸುಮಾರು 3ಲಕ್ಷ ಜನಗಳನ್ನು ಸ್ಥಳಾಂತರಗೊಳಿಸಿ ರಾಜ್ಯಾದ್ಯಂತ 1639 ಪರಿಹಾರ ಶಿಬಿರಗಳಲ್ಲಿ ನೆಲೆಗೊಳಿಸಲಾಗಿದೆ. ರಾಜ್ಯದ ಎಲ್ ಡಿ ಎಫ್ ಸರಕಾರ ಮತ್ತೊಮ್ಮೆ ದಕ್ಷತೆಯಿಂದ ಭಾರೀ ಆಪತ್ತನ್ನು ಎದುರಿಸುತ್ತಿದೆ.

ಮಹಾರಾಷ್ಟ್ರದಲ್ಲಿ 40 ಪ್ರಾಣಹಾನಿಯಾಗಿದೆ, ಕರ್ನಾಟಕದಲ್ಲಿ 32 ಮತ್ತು ಗುಜರಾತ್ 24 ಮಂದಿ ಪ್ರಾಣ ಕಳಕೊಂಡಿದ್ದಾರೆ. ತುಂಗಭದ್ರಾ, ಕೃಷ್ಣಾ ಆಂಧ್ರ ಪ್ರದೇಶ/ತೆಲಂಗಾಣದಲ್ಲಿ, ಅವುಗಳ ಉಪನದಿಗಳು ಉಕ್ಕಿ ಹರಿಯುತ್ತಿವೆ, ಅಪಾರ ನಾಶ-ವಿನಾಶಗಳನ್ನು ಮಾಡುತ್ತಲೇ ಇವೆ.

ಗೃಹಮಂತ್ರಿಗಳು ಪ್ರವಾಹದ ವೈಮಾನಿಕ ಸರ್ವೆ ನಡೆಸಲು ಮಹಾರಾಷ್ಟ್ರ, ಕರ್ನಾಟಕದಂತಹ ಬಿಜೆಪಿ ಆಳ್ವಿಕೆಯ ರಾಜ್ಯಗಳಿಗೆ ಮಾತ್ರ ಹೋಗಿದ್ದಾರೆ. ಅತಿ ಹೆಚ್ಚು ಬಾಧಿತವಾದ ರಾಜ್ಯ ಕೇರಳದಲ್ಲಿ ಸರ್ವೆಗೆ ಅವರು ಉದ್ದೇಶಪೂರ್ವಕವಾಗಿಯೇ ಹೋಗಿಲ್ಲ ಎಂದು ಕಾಣುತ್ತಿದೆ. ಆರೆಸ್ಸೆಸ್-ಬಿಜೆಪಿಯೊಂದಿಗೆ ಸಂಬಂಧ ಇರುವ ಕೆಲವು ಸಂಘಟನೆಗಳು ಕೇರಳ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದಾನ ಮಾಡಬೇಡಿ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ಮಾಡುತ್ತಿವೆ.

ನೈಸರ್ಗಿಕ ವಿಪತ್ತುಗಳ ಮತ್ತು ದುರದೃಷ್ಟವಶಾತ್ ಜನಗಳು ಸಾಯುತ್ತಿರುವ ಸಮಯದಲ್ಲಿ ರಾಜಕೀಯ ಪಕ್ಷಪಾತವನ್ನಂತೂ ಯಾರೂ ನಿರೀಕ್ಷಿಸುವುದಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಕೇಂದ್ರ ಸರಕಾರ ವಿಪತ್ತನ್ನು ಎದುರಿಸಲು ರಾಜ್ಯ ಸರಕಾರಗಳಿಗೆ ಅಗತ್ಯವಾದ ಸಕಲ ನೆರವನ್ನು ಒದಗಿಸಬೇಕು ಎಂದು ಕರೆ ನೀಡಿದೆ.

ಕಾಶ್ಮೀರಿ ಮಹಿಳೆಯರ ಬಗ್ಗೆ ಬಿಜೆಪಿ ಮುಖಂಡರ ಹೇಯ ಟಿಪ್ಪಣಿಗಳು-ಎಐಡಿಡಬ್ಲ್ಯುಎ ಖಂಡನೆ

ದುಷ್ಟತಂತ್ರಗಳೊಂದಿಗೆ ಮನುವಾದಿ ಮನೋಭೂಮಿಕೆಯನ್ನೂ ಬಯಲಿಗೆಳೆವ ಹೇಳಿಕೆಗಳು

ಹರ್ಯಾಣಾದ ಮುಖ್ಯಮಂತ್ರಿ ಎಂ.ಎಲ್. ಖಟ್ಟರ್ "ಕಾಶ್ಮೀರಕ್ಕೆ ದಾರಿ ನಿಚ್ಚಳಗೊಂಡಿದೆ, ನಾವಿನ್ನು ಕಾಶ್ಮೀರದಿಂದ ಹುಡುಗಿಯರನ್ನು ತರಬಹುದು ಎಂದು ಜನ ಈಗೀಗ ಹೇಳಲಾರಂಭಿಸಿದ್ದಾರೆ" ಎಂದು ಹೇಳಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಖಂಡಿಸಿದೆ. ಮದುವೆಗಾಗಿ ಹೆಣ್ಣುಮಕ್ಕಳನ್ನು ತರಬಹುದು ಎಂಬ ಹೇಳಿಕೆಯೇ ನೀಚತನದ್ದು, ಸಾಲದ್ದಕ್ಕೆ ರಾಜ್ಯದಲ್ಲಿ 'ಬೇಟಿ ಬಚಾವೊ, ಬೇಟಿ ಪಢಾವೊ' ಪ್ರಚಾರಾಂದೋಲನಕ್ಕೆ ಸಂಬಂಧಪಟ್ಟ ಒಂದು ಕಾರ್ಯಕ್ರಮದಲ್ಲಿ ಇದನ್ನು ಹೇಳಿದ್ದಾರೆ ಎಂಬುದು ಇನ್ನಷ್ಟು ಹತಾಶೆಯನ್ನುಂಟು ಮಾಡುವ ಸಂಗತಿ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಇನ್ನೊಬ್ಬ ಬಿಜೆಪಿ ಮುಖಂಡರು, ರಾಜ್ಯಸಭಾ ಸದಸ್ಯರೂ ಆಗಿರುವ ವಿಜಯ್ ಗೋಯೆಲ್ ತಮ್ಮ ಮನೆಯ ಮುಂದೆ ಕಾಶ್ಮೀರಿ ವೇಷಭೂಷಣಗಳಲ್ಲಿರುವ ಹುಡುಗಿಯೊಬ್ಬಳ ಫೋಟೋದೊಂದಿಗೆ "ಧಾರಾ 370 ಕಾ ಜಾನಾ/ ತೇರಾ ಮುಸ್ಕರಾನಾ" (ವಿಧಿ 370 ಹೋಯ್ತು ನಿನ್ನ ಮುಖದಲ್ಲಿ ನಗು ಬಂತು) ಎಂಬ ಟಿಪ್ಪಣಿಯಿರುವ ಪೋಸ್ಟರನ್ನು ಹಾಕಿಕೊಂಡಿದ್ದಾರೆ.

ಇದೇನೂ 370ನೇ ಕಲವನ್ನು ಕಾನೂನುಬಾಹಿರವಾಗಿ ಮತ್ತು ಅಸಂವಿಧಾನಿಕವಾಗಿ ರದ್ದುಗೊಳಿಸಿದ ನಂತರ ಕಾಶ್ಮೀರಿ ಮಹಿಳೆಯರ ಮೇಲೆ ಗುರಿಯಿಟ್ಟು, ಅವರನ್ನು ಒಂದು ವಸ್ತುವಾಗಿ ಮಾಡಿರುವ ಮೊದಲ ಹೇಳಿಕೆಯೇನೂ ಅಲ್ಲ. ಉದಾಹರಣೆಗೆ, ಉತ್ತರ ಪ್ರದೇಶದ ಒಬ್ಬ ಬಿಜೆಪಿ ಶಾಸಕ, ವಿಕ್ರಮ್ ಸೈನಿ,, ಈ ಕಲಮನ್ನು ರದ್ದು ಮಾಡಿದ ಸ್ವಲ್ಪವೇ ಸಮಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ, ವಿಶೇಷವಾಗಿ ಅವಿವಾಹಿತರಿಗೆ ಇದರಿಂದ ಬಹಳ ಸಂತೋಷವಾಗಿದೆ, ಅವರಿಗಿನ್ನು "ಬಿಳಿ' ಕಾಶ್ಮೀರಿ ಹುಡುಗಿಯರು ಸಿಗುವುದು ಮತ್ತು ಜಮೀನು, ವಿಶೇಷವಾಗಿ ದಲ್ ಸರೋವರದ ಬಳಿಯಲ್ಲೇ ಸಿಗಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಪುರುಷಪ್ರಾಧಾನ್ಯತೆಯ ದಾಳಿಯ ನಗ್ನ ಪ್ರದರ್ಶನ ವೈರಲ್ ಆಗಿ ಕಾಶ್ಮೀರಿ ಮಹಿಳೆಯರ ವಿರುದ್ಧ ಅಸಹ್ಯಕಾರೀ ಹೇಳಿಕೆಗಳ ಪ್ರವಾಹವೇ ಹರಿಯಲು ಉತ್ತೇಜನೆ ದೊರೆತಿದೆ. ಈ ಸನ್ನಿವೇಶವನ್ನು ಸಂಘ ಪರಿವಾರ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಗುರಿಯಿಡುವ ಸಾರ್ವಜನಿಕ ಭಾವನೆಗಳನ್ನು, ವಿಶೇಷವಾಗಿ ಈ ಸಮುದಾಯಗಳ ಮಹಿಳೆಯರ ಮೇಲೆ ದಾಳಿಯ ಮೂಲಕ ಉದ್ರೇಕಿಸಲು ಬಳಸಿಕೊಂಡಿದೆ ಎಂದು ಎಐಡಿಡಬ್ಲ್ಯುಎ ಆಕ್ರೋಶವನ್ನು ವ್ಯಕ್ತಪಡಿಸಿದೆ.

ಈ ಮೊದಲು ಬಿಜೆಪಿ ಮಹಿಳಾ ವಿಭಾಗದ ಒಬ್ಬ ಮಹಿಳಾ ಮುಖಂಡರು ಈ ಸಮುದಾಯಕ್ಕೆ ಪಾಠ ಕಲಿಸಲು ಅವರ ಮಹಿಳೆಯರ ಮಾನಭಂಗ ಮಾಡಬೇಕು ಎಂದು ಹೇಳಿಕೆ ನೀಡಿದ್ದು, ಕಥುವಾ ಪ್ರಕರಣದಲ್ಲಿ ಬಲಾತ್ಕಾರಿಗಳು ಮತ್ತು ಕೊಲೆಗಡುಕರಿಗೆ ಬಿಜೆಪಿ ಮುಖಂಡರು ಮತ್ತು ವಕೀಲರುಗಳ ಬಹಿರಂಗ ರಕ್ಷಣೆ, ಮತ್ತು ಈ ಎಲ್ಲ ಸಂದರ್ಭಗಳಲ್ಲಿ, ಈಗ ಕಾಶ್ಮೀರಿ ಮಹಿಳೆಯರ ಕುರಿತ ನಾಚಿಕೆಹೀನ ಹೇಳಿಕೆಗಳನ್ನು ಕೊಡುತ್ತಿರುವಾಗಲೂ ಪ್ರಧಾನ ಮಂತ್ರಿ



ನರೇಂದ್ರ ಮೋದಿ ಮತ್ತು ಗೃಹಮಂತ್ರಿ ಅಮಿತ್ ಷಾ ರವರ ಕಿವಿಗಡಚಿಕ್ಕುವ ಮೌನ, ಇವೆಲ್ಲವೂ ಆರೆಸ್ಸೆಸ್-ಬಿಜೆಪಿಯ ಪ್ರತಿಗಾಮಿ, ಪುರುಷಪ್ರಧಾನ, ಕೋಮುವಾದಿ ಮನುವಾದಿ ಮನೋಭಾವವನ್ನು ಸ್ಪಷ್ಟವಾಗಿ ಸೂಚಿಸುತ್ತಿವೆ.

ಇಂತಹ ಮಹಿಳಾ-ವಿರೋಧಿ ಹೇಳಿಕೆಗಳನ್ನು ನೀಡಿರುವ ಹರ್ಯಾಣ ಮುಖ್ಯಮಂತ್ರಿ ಎಂ ಎಲ್ ಖಟ್ಟರ್, ಮತ್ತು ವಿವಿಧ ರಾಜ್ಯಗಳ ಬಿಜೆಪಿ ಶಾಸಕರು, ಮುಖಂಡರು, ಪದಾಧಿಕಾರಿಗಳ ವಿರುದ್ಧ ಬಲವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತು ಮಹಿಳಾ ಸಂಘಟನೆಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿಯ ದುಷ್ಟ ತಂತ್ರಗಳನ್ನು ಒಂದಾಗಿ ವಿರೋಧಿಸಬೇಕು ಮತ್ತು ಬಯಲಿಗೆಳೆಯಬೇಕು ಎಂದು ಕೇಳಿಕೊಂಡಿದೆ.

ಶ್ರೀನಗರಕ್ಕೆ ಪ್ರವೇಶ ನಿರಾಕರಣೆ: ರಾಷ್ಟ್ರಪತಿಗಳಿಗೆ ಸೀತಾರಾಮ್ ಯೆಚುರಿ ಪ್ರತಿಭಟನಾ ಪತ್ರ

"ತಮ್ಮ ಹೆಸರಿನ ಆಳ್ವಿಕೆಯ ಅಡಿಯಲ್ಲಿ ಮಾನವ ಹಕ್ಕುಗಳ ನಿರಾಕರಣೆಯಾಗುತ್ತಿರುವ ಗಂಭೀರ ವಿಷಯದಲ್ಲಿ ಮಧ್ಯಪ್ರವೇಶಿಸಿ"



ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಆಗಸ್ಟ 9ರಂದು ತಮಗೆ ಶ್ರೀನಗರದಲ್ಲಿ ಪ್ರವೇಶವನ್ನು ನಿರಾಕರಿಸಿರುವುದನ್ನು ಪ್ರತಿಭಟಿಸಿ ಆಗಸ್ಟ 10 ರಂದು ಭಾರತದ ರಾಷ್ಟ್ರಪತಿಗಳಿಗೆ ಪತ್ರ ಬರೆದು ತಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದಾರೆ. ಈಗ ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರೀಯ ಆಳ್ವಿಕೆ ಇರುವುದರಿಂದ ಮತ್ತು ಅದು ಭಾರತದ ರಾಷ್ಟ್ರಪತಿಗಳ ಹೆಸರಲ್ಲಿ ನಡೆಯುತ್ತಿರುವುದರಿಂದ ಈ ಪ್ರತವನ್ನು ಬರೆಯುತ್ತಿರುವುದಾಗಿ ಹೇಳಿರುವ ಯೆಚುರಿಯವರು ಶ್ರೀನಗರ ವಿಮಾನ ನಿಲ್ದಾಣದಲ್ಲಿ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲದ ತಮ್ಮ ಪ್ರತಿಭಟನೆಯ ವೇಳೆಯಲ್ಲಿ ಜನಗಳ ನಡುವೆ ವ್ಯಾಪಕವಾದ ಅಸಂತೃಪ್ತಿ ಇದೆ ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ನಿರಾಕರಿಸಿರುವುದರ ಕುರಿತು ದೊಡ್ಡ ಸಂಖ್ಯೆಯಲ್ಲಿ ದೂರುಗಳಿವೆ ಎಂದು ತಿಳಿದು ಬಂದಿದೆ, ಕೆಲವು ದೇಶಿ ಹಾಗೂ ವಿದೇಶಿ ಸುದ್ದಿ ಸಂಸ್ಥೆಗಳು, ಜನಗಳ ಪ್ರತಿಭಟನೆಗಳು ಮತ್ತು ಅವರ ವಿರುದ್ಧ ಪೋಲೀಸ್ ಹಿಂಸಾಚಾರವನ್ನು ವರದಿ ಮಾಡುತ್ತಿದ್ದು, "ಇದು ನೀವು ಪರಿಶೀಲಿಸಬೇಕಾದ ಮತ್ತು ಮಧ್ಯಪ್ರವೇಶಿಸಬೇಕಾದ ಒಂದು ಗಂಭೀರ ವಿಷಯವಾಗಿದೆ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ರಾಷ್ಟ್ರಪತಿಗಳು ಭಾರತದ ಸಂವಿಧಾನದ ಪಾಲಕರಾಗಿರುವುದರಿಂದ, ಭಾರತದ ಸಂವಿಧಾನ ಎಲ್ಲ ನಾಗರಿಕರಿಗೆ ಖಾತ್ರಿಪಡಿಸಿರುವ ಅವರ ಮೂಲಭೂತ ಹಕ್ಕುಗಳನ್ನು ಚಲಾಯಿಸಲು ಅನುಮತಿಯಿರುವಂತೆ ನೋಡಿಕೊಳ್ಳಬೇಕಾಗಿ ಅವರನ್ನು ಈ ಪತ್ರದಲ್ಲಿ ಸೀತಾರಾಮ್ ಯೆಚುರಿ ಆಗ್ರಹಿಸಿದ್ದಾರೆ. ಅವರ ಪತ್ರದ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಮಾನ್ಯ ರಾಷ್ಟ್ರಪತಿಯವರೇ,

ನಾನು 9 ಆಗಸ್ಟ್ ಬೆಳಿಗ್ಗೆ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಇಳಿದಾಗ ನನಗಾಗಿರುವ ಅನುಭವದ ಕುರಿತು ತಮಗೆ ಪತ್ರ ಬರೆಯುತ್ತಿದ್ದೇನೆ. ಜಮ್ಮು ಮತ್ತು ಕಾಶ್ಮೀರ ತಮ್ಮ, ಭಾರತದ ರಾಷ್ಟ್ರಪತಿಯ, ಅಧಿಕಾರದ ಅಡಿಯಲ್ಲಿ ಕೇಂದ್ರೀಯ ಆಡಳಿತಕ್ಕೆ ಒಳಪಟ್ಟಿರುವುದರಿಂದಾಗಿ ನಾನು ತಮಗೆ ಈ ಪತ್ರ ಬರೆಯುತ್ತಿದ್ದೇನೆ.

ನಾನು ವಿಮಾನದಿಂದ ಹೊರಬರುತ್ತಿದ್ದಂತೆಯೇ, ಪೋಲೀಸರು ನನ್ನನ್ನು ಸುತ್ತುವರೆದರು ಮತ್ತು ಒಂದು ಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಹಿರಿಯ ಪೋಲೀಸ್ ಅಧಿಕಾರಿ ನನ್ನನ್ನು ವಿಮಾನ ನಿಲ್ದಾಣದಿಂದ ಹೊರಹೋಗಲು ಬಿಡಬಾರದು ಎಂದು ತನಗೆ ಆದೇಶ ಬಂದಿದೆ, ನಾನು ಆದಷ್ಟು ಬೇಗನೇ ಸಿಗುವ ವಿಮಾನದಿಂದ ದಿಲ್ಲಿಗೆ ಹಿಂದಿರುಗಬೇಕು ಎಂದು ತಿಳಿಸಿದರು, ಇದಕ್ಕೆ ತಾವುಗಳು ವ್ಯವಸ್ಥೆ ಮಾಡುವುದಾಗಿಯೂ ಹೇಳಿದರು. ನನ್ನಲ್ಲಿ ಅದೇ ದಿನ ಸಾಯಂಕಾಲ ದಿಲ್ಲಿಗೆ ಮರಳುವ ರಿಟರ್ನ್ ಟಿಕೆಟ್ ಇತ್ತು. ನಾನು ಈಗಾಗಲೇ ಬುಕ್ ಮಾಡಿರುವುದರಿಂದ ಆ ಟಿಕೆಟ್ ಮೇಲೆಯೇ ಹಿಂದಿರುಗುವುದಾಗಿ ಹೇಳಿದೆ.

ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನನ್ನನ್ನು ಪೋಲೀಸ್ ಕಸ್ಟಡಿಯಲ್ಲಿ ಇಡಲಾಯಿತು. ಕಾಮ್ರೇಡ್ ಡಿ. ರಾಜ, ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಕೂಡ ನನ್ನ ಜತೆಗಿದ್ದರು.

ನಾನು ಆದೇಶವನ್ನು ನೋಡಬೇಕು ಎಂದು ಆಗ್ರಹಿಸಿದಾಗ, ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟ್ ರನ್ನು ಕರೆಸಲಾಯಿತು. ಅವರ ಬಳಿ ನಾವು ಶ್ರೀನಗರಕ್ಕೆ ಭೇಟಿ ನೀಡುತ್ತಿರುವುದು ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯನ್ನು ಉಂಟು ಮಾಡಬಹುದು ಮತ್ತು ಅದರಿಂದಾಗಿ ನಾವು ವಿಮಾನ ನಿಲ್ದಾಣವನ್ನು ಬಿಡುವುದನ್ನು ನಿಷೇಧಿಸಲಾಗಿದೆ ಎಂಬ ಆದೇಶವಿತ್ತು.

ಇದು ವಿಚಿತ್ರವಾಗಿತ್ತು. ನಾನು ಮಾನ್ಯ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಿಗೆ 8ನೇ ತಾರೀಕಿನಂದು 9ರಂದು ಮಹಮ್ಮದ್ ಯುಸುಫ್ ತರಿಗಾಮಿ, ಸಿಪಿಐ(ಎಂ) ನ ಕೇಂದ್ರ ಸಮಿತಿ ಸದಸ್ಯರು ಮತ್ತು ಜಮ್ಮು ಮತ್ತು ಕಾಶ್ಮೀರದ ನಾಲ್ಕು ಬಾರಿ ಚುನಾಯಿತರಾದ ಶಾಸಕರು, ಇವರನ್ನು ಕಾಣಲು ಶ್ರೀನಗರಕ್ಕೆ ಭೇಟಿ ನೀಡುತ್ತಿರುವುದಾಗಿ ತಿಳಿಸಿದ್ದೆ. ಅವರ ಆರೋಗ್ಯ ಚೆನ್ನಾಗಿಲ್ಲ, ಅವರಿಗೆ ಕೆಲವು ಔಷಧಿಗಳನ್ನು ನಾನು ಒಯ್ಯುತ್ತಿದ್ದೆ.

ಒಂದು ರಾಷ್ಟ್ರೀಯ ರಾಜಕೀಯ ಪಕ್ಷವಾದ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ನನಗೆ ನನ್ನ ಪಕ್ಷದ ಸದಸ್ಯರನ್ನು ಮತ್ತು ನನ್ನ ಪಕ್ಷದ ಮುಖಂಡರನ್ನು, ವಿಶೇಷವಾಗಿ ಅವರಿಗೆ ಆರೋಗ್ಯ ಸಮಸ್ಯೆಗಳಿದ್ದಾಗ, ಭೇಟಿಯಾಗುವ ಹಕ್ಕು ಇದೆ ಎಂದು ತಿಳಿದಿದ್ದರೂ, ನನಗೆ ನನ್ನ ಮೂಲ ಪ್ರಜಾಪ್ರಭುತ್ವ ಹಕ್ಕನ್ನು ನಿರಾಕರಿಸಲಾಗಿದೆ.

ನಮ್ಮ ಪಕ್ಷದ ಸದಸ್ಯರನ್ನು ಭೇಟಿಯಾಗಲು ಅನುಮತಿ ನಿರಾಕರಿಸಿದ್ದಕ್ಕೆ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲದ ನಮ್ಮ ಪ್ರತಿಭಟನೆಯ ವೇಳೆಯಲ್ಲಿ ಜನಗಳ ನಡುವೆ ವ್ಯಾಪಕವಾದ ಅಸಂತೃಪ್ತಿ ಇದೆ ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ನಿರಾಕರಿಸಿರುವುದರ ಕುರಿತು ದೊಡ್ಡ ಸಂಖ್ಯೆಯಲ್ಲಿ ದೂರುಗಳಿವೆ ಎಂದು ನನಗೆ ತಿಳಿದು ಬಂತು. ಕೆಲವು ಸುದ್ದಿ ಸಂಸ್ಥೆಗಳು, ದೇಶಿ ಹಾಗೂ ವಿದೇಶಿ, ಜನಗಳ ಪ್ರತಿಭಟನೆಗಳು ಮತ್ತು ಅವರ ವಿರುದ್ಧ ಪೋಲೀಸ್ ಹಿಂಸಾಚಾರವನ್ನು ವರದಿ ಮಾಡುತ್ತಿವೆ. ಇದು ನೀವು ಪರಿಶೀಲಿಸಬೇಕಾದ ಮತ್ತು ಮಧ್ಯಪ್ರವೇಶಿಸಬೇಕಾದ ಒಂದು ಗಂಭೀರ ವಿಷಯವಾಗಿದೆ.

ತಾವು ಭಾರತದ ಸಂವಿಧಾನದ ಪಾಲಕರಾಗಿರುವುದರಿಂದ, ಭಾರತದ ಸಂವಿಧಾನ ಎಲ್ಲ ನಾಗರಿಕರಿಗೆ ಖಾತ್ರಿಪಡಿಸಿರುವ ಅವರ ಮೂಲಭೂತ ಹಕ್ಕುಗಳನ್ನು ಚಲಾಯಿಸಲು ಅನುಮತಿಯಿರುವಂತೆ ನೋಡಿಕೊಳ್ಳಬೇಕಾಗಿ ನಾನು ತಮ್ಮನ್ನು ಆಗ್ರಹಿಸುತ್ತೇನೆ.

ನನಗೆ, ತಮ್ಮ ಅಧಿಕಾರದ ಅಡಿಯಲ್ಲಿ ಪ್ರಸಕ್ತ ಕೇಂದ್ರೀಯ ಆಳ್ವಿಕೆಯು ಕಾರ್ಯ ನಿರ್ವಹಿಸುವಾಗ ನನ್ನ ಪ್ರಾಥಮಿಕ ಪ್ರಜಾಪ್ರಭುತ್ವ ಹಕ್ಕನ್ನು ನಿರಾಕರಿಸಲಾಗಿದೆ. ನನ್ನ ಪ್ರಜಾಪ್ರಭುತ್ವ ಹಕ್ಕಿನ ನಿರಾಕರಣೆಗೆ ನನ್ನ ಬಲವಾದ ಪ್ರತಿಭಟನೆಯನ್ನು ದಾಖಲಿಸಲು ನಾನು ನಿಮಗೆ ಬರೆಯುತ್ತಿದ್ದೇನೆ.

ನಾನು ಮಾನ್ಯ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಿಗೆ 8 ರಂದು ಬರೆದ ಪತ್ರದ ನಕಲನ್ನು ಜತೆಗೆ ಲಗತ್ತಿಸಿದ್ದೇನೆ.

ಗೌರವಗಳೊಂದಿಗೆ,
ನಿಮ್ಮ ವಿಶ್ವಾಸಿ
ಸೀತಾರಾಮ್ ಯೆಚುರಿ
ಪ್ರಧಾನ ಕಾರ್ಯದರ್ಶಿ

ಸಂಪಾದಕೀಯ

ಕಟುಕನಿಗಿಂತ ಕಡೆಯಾದವರು !

ಕಟುಕನೊಬ್ಬ ತನ್ನ ವೃತ್ತಿಧರ್ಮದಲ್ಲಿ ತೊಡಗಿದ್ದಾಗ, ತಾನು ಸಾಯಿಸಲು ಹೊರಟ ಪ್ರಾಣಿಯ ಬಾಯಿಗೆ ಮೊದಲು ಸ್ವಲ್ಪ ನೀರನ್ನು ಹಾಕುತ್ತಾನೆ, ಸಾವಿನ ನಿರೀಕ್ಷೆಯಲ್ಲಿರುವ ಒಬ್ಬ ವ್ಯಕ್ತಿಯ ಆಪ್ತರು ಕೊನೆಯ ಕ್ಷಣಗಳಲ್ಲಿ ಆತನ ಬಾಯೊಳಗೆ ನೀರಿನ ಹನಿಗಳನ್ನು ಹಾಕುತ್ತಾರೆ. ನಮ್ಮ ದೇಶಕ್ಕೆ ಒಂದು ಸರ್ಕಾರ ಪ್ರಾಪ್ತವಾಗಿದೆ. ಅದು ಬಾರೀ ಜನಾದೇಶದೊಂದಿಗೆ ಎರಡನೇ ಬಾರಿ ಅಧಿಕಾರಕ್ಕೆ ಬಂದಿದೆ. ಅದಕ್ಕೆ ಬಾರೀ ಬಹುಮತ ಕೊಟ್ಟಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದ ಒಟ್ಟು 28 ಲೋಕಸಭಾ ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳನ್ನು ಗೆಲ್ಲಿಸಿಕೊಟ್ಟ ಕರ್ನಾಟಕದ ಜನ ಹಿಂದೆಂದೂ ಕಂಡರಿಯದ ಭಯಂಕರ ಜಲ ದುರಂತಕ್ಕೆ ಸಿಲುಕಿ, ನೆರವಿಗಾಗಿ ಮೊರೆ ಇಡುತ್ತಿದ್ದಾರೆ. ಆದರೆ, ಕಟುಕ ತೋರುವಷ್ಟು ಅನುಕಂಪವನ್ನು ಸಹ ಈ ಸರ್ಕಾರ ತೋರದಿರುವುದು ದೊಡ್ಡ ದುರಂತವಾಗಿದೆ !

ಕರ್ನಾಟಕದ ಅರ್ಧದಷ್ಟು ಭೂಪಟವೇ ಬದಲಾಗಿದೆ. ಗದ್ದೆಗಳಿದ್ದಲ್ಲಿ ನದಿಗಳು ಹರಿಯುತ್ತಿವೆ. ಮನೆಗಳು ಇದ್ದಲ್ಲಿ ಪ್ರಪಾತಗಳು ಏರ್ಪಟ್ಟಿವೆ. ಸೇತುವೆಗಳು ನಾಪತ್ತೆಯಾಗಿವೆ. ರಸ್ತೆಗಳು ಸೀಳಿಹೋಗಿವೆ. ನೂರಾರು ಮಂದಿ, ಮುದುಕರು, ಮಹಿಳೆಯರು, ಮಕ್ಕಳು ಶವಗಳಾಗಿ ಪತ್ತೆಯಾಗಿದ್ದಾರೆ. ಅದೆಷ್ಟೋ ಜನ ಹಾಗೂ ಜಾನುವಾರುಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ, ಅಥವ ಕುಸಿದ ಮಣ್ಣಿನ ಅಡ್ಡಿಯಲ್ಲಿ ಹೂತುಹೋಗಿವೆ. ರಾಜ್ಯದ 18 ಜಿಲ್ಲೆಗಳ 100ಕ್ಕೂ ಹೆಚ್ಚು ತಾಲೂಕುಗಳು ಭೀಕರ ಪ್ರವಾಹದ ತೆಕ್ಕೆಗೆ ಸಿಲುಕಿಕೊಂಡಿವೆ. 2000ಕ್ಕೂ ಹೆಚ್ಚು ಗ್ರಾಮಗಳು ಜಲಾವೃತಗೊಂಡಿವೆ. ಸಂತ್ರಸ್ತರ ಸಂಖ್ಯೆ 5ಲಕ್ಷಕ್ಕೂ ಮೀರಿದೆ. 6ಲಕ್ಷ ಹೆಕ್ಟೇರ್‌ಗಿಂತ ಅಧಿಕ ಬೆಳೆಹಾನಿಯಾಗಿದೆ.

ಎಲ್ಲವನ್ನು ಕಳೆದುಕೊಂಡು, ಊಟ್ಟಬಟ್ಟೆಯಲ್ಲಿರುವ ಸಂತ್ರಸ್ತರಿಗೆ ರಾಜ್ಯದ ಮೂಲೆ ಮೂಲೆಗಳಿಂದ ವಸ್ತುರೂಪದಲ್ಲಿ, ಹಣದ ರೂಪದಲ್ಲಿ ಅಪಾರ ನೆರವು ಹರಿದು ಬರುತ್ತಿರುವುದು ಕರ್ನಾಟಕದ ಜನತೆಯ ಹೃದಯವಂತಿಕೆಯ ದ್ಯೋತಕವಾಗಿದೆ. ಎಲ್ಲ ವಿಭಾಗದ ಜನ ನೆರವು ನೀಡುತ್ತಿದ್ದಾರೆ, ಸಂಗ್ರಹಿಸಿ ಪೂರೈಸುತ್ತಿದ್ದಾರೆ. ಕಾರ್ಮಿಕರು, ಸರ್ಕಾರಿ ಅಧಿಕಾರಿಗಳು, ಮಧ್ಯಮ ವರ್ಗದ ನೌಕರರು, ಧಾನ್ಯ ಬೆಳೆದ ರೈತರು, ವರ್ತಕರು, ನ್ಯಾಯವಾದಿಗಳು, ವಿದ್ಯಾರ್ಥಿಗಳು, ಯುವಜನ ಹಾಗೂ ಮಹಿಳಾ ಸಂಘಟನೆಗಳು, ಮಠಾಧಿಪತಿಗಳು, ಕನ್ನಡಪರ ಸಂಘಟನೆಗಳು, ದಲಿತ ಸಂಘಟನೆಗಳು, ಸಾಂಸ್ಕೃತಿಕ ಸಂಘಟನೆಗಳು, ರಾಜಕೀಯ ಪಕ್ಷಗಳು, ಎಡ ಮತ್ತು ಬಲಪಂಥೀಯ ಸಂಘಟನೆಗಳು, ಎಲ್ಲರೂ ಜಾತಿ ಮತ ಬೇಧವಿಲ್ಲದೆ, ಉದಾರವಾಗಿ ನೆರವು ನೀಡುತ್ತಿದ್ದಾರೆ. ಸಾರ್ವಜನಿಕರಿಂದ ಸಂಗ್ರಹಿಸಿ ಕಳುಹಿಸುತ್ತಿದ್ದಾರೆ. ಟ್ರಕ್‌ಗಟ್ಟಲೆ ಪರಿಹಾರ ಸಾಮಗ್ರಿಗಳನ್ನು ಬೇಡಿಕೆ ಇರುವ ಪ್ರದೇಶಗಳಿಗೆ, ಪರಿಹಾರ ಕೇಂದ್ರಗಳಿಗೆ ರವಾನಿಸುತ್ತಿದ್ದಾರೆ. ದವಸ ದಾನ್ಯ, ಹೊಸ ಬಟ್ಟೆಬರೆ, ಹೊದಿಕೆಗಳು, ಪಾತ್ರೆಗಳೂ, ಸಕ್ಕರೆ, ಬೇಳೆ, ಎಣ್ಣೆ, ಉಪ್ಪು, ಸಾಬೂನು, ಮಿನರಲ್ ನೀರು, ಔಷಧಿಗಳು ಮುಂತಾದ ದಿನಸಿ ಹಾಗೂ ಅಗತ್ಯವಸ್ತುಗಳನ್ನು ಅಪಾರ ಪ್ರಮಾಣದಲ್ಲಿ ಸಂಗ್ರಹಿಸಿ ವಿತರಿಸಲಾಗುತ್ತಿದೆ. ತಮ್ಮ ಜೀವದ ಹಂಗು ತೊರೆದು, ನೀರಿನಲ್ಲಿ ಮುಳುಗುತ್ತಿದ್ದವರನ್ನು ಕಾಪಾಡಲು ಹೆಣಗಾಡಿದ ಯೋಧರು, ಇತರ ಈಜುಗಾರರು ಅತಿ ಹೆಚ್ಚು ಅಭಿನಂದನಾರ್ಹರು. ಪ್ರವಾಹದಿಂದ ಪಾರಾಗಿ ಬದುಕುಳಿದವರಿಗೆ ಭವಿಷ್ಯದ ಚಿಂತೆ ತೀವ್ರವಾಗಿ ಕಾಡುತ್ತಿದೆ. "ಭಯಪಡಬೇಡಿ, ಚಿಂತೆ ಮಾಡಬೇಡಿ, ನಾವು ನಿಮ್ಮ ಜತೆ ಇದ್ದೇವೆ" ಎಂದು ಹೇಳಿ ಧೈರ್ಯ ತುಂಬಬೇಕಾದವರು ಮಾತನಾಡದಿರುವುದು ಅವರನ್ನು ಸಹಜವಾಗಿ ಚಿಂತಾಕ್ರಾಂತರನ್ನಾಗಿಸಿದೆ. ಕೇಂದ್ರದ ಗೃಹಮಂತ್ರಿ ಅಮಿತ್ ಷಾ ಬಂದರು, ವೈಮಾನಿಕ ವೀಕ್ಷಣೆ ಮಾಡಿದರು. ಯಾವ ಭರವಸೆಯನ್ನೂ ನೀಡದೆ ಹೊರಟು ಹೋದರು. ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಬಂದರು, ನೋಡಿದರು ಮತ್ತು ಹೊರಟು ಹೋದರು. ಮಾತಿನ ಮಲ್ಲ, ಮೋದಿಯವರು ಮಾತ್ರ ಇದುವರೆಗೂ ಬರಲಿಲ್ಲ, ನೋಡಲಿಲ್ಲ, ಏನೂ ಹೇಳಲಿಲ್ಲ, ಚುನಾವಣಾ ಸಮಯದಲ್ಲಿ ಎಷ್ಟೊಂದು ಸಲ ಕರ್ನಾಟಕಕ್ಕೆ ಅವರ ಆಗಮನವಾಗಿತ್ತು. ಆಗ ಎಷ್ಟೊಂದು ಮಾತುಗಳು ಎಷ್ಟೊಂದು ಭರವಸೆಗಳು! ಅವರಿಗೆ ಮತದಾನ ಮಾಡಿದ ಕರ್ನಾಟಕದ ಜನ ಸಂಕಷ್ಟದಲ್ಲಿರುವಾಗ ಪ್ರಧಾನಿ ಮೋದಿ ಕರ್ನಾಟಕಕ್ಕೆ ಏಕೆ ಬರುತ್ತಿಲ್ಲ. ಇದು ಕರ್ನಾಟಕದ ಜನರ ಮನದಾಳದ ಪ್ರಶ್ನೆ. "ನಾನು ನಿಮ್ಮೊಂದಿಗೆ ಇದ್ದೇನೆ" ಎಂದು ಒಂದು ಟ್ವೀಟ್ ಆದರೂ ಮಾಡಬಹುದಿತ್ತಲ್ಲ? ಕೆಂಪು ಕೋಟೆಯ ಮೇಲೆ ಧ್ವಜಾರೋಹಣ ಮಾಡಿದ ನಂತರದ ಅವರ ದೀರ್ಘ ಬಾಷಣದಲ್ಲಿ ಅಪ್ಪಿತಪ್ಪಿಯೂ ಪ್ರಸ್ತಾಪ ಮಾಡಲಿಲ್ಲ. ಸಾಯುವವನ ಬಾಯೊಳಗೆ ನೀರಿನ ಹನಿಗಳನ್ನು ಹಾಕುವಂತೆ ಅನುದಾನದ ಒಂದು ಸಣ್ಣ ಕಂತನ್ನೂ ಇದುವರೆಗೆ ಬಿಡುಗಡೆ ಮಾಡದಿರುವುದು ಅಕ್ಷಮ್ಯ.

ಇದೊಂದು 'ರಾಷ್ಟ್ರೀಯ ದುರಂತ' ಎಂದು ಘೋಷಣೆ ಮಾಡಿ ಎಂದು ಕರ್ನಾಟಕದ ಸಂತ್ರಸ್ತರು ಮೊರೆಯಿಡುತ್ತಿದ್ದಾರೆ. ಇತರ ಪೀಡಿತ ರಾಜ್ಯಗಳಿಗೂ ಇದು ಅನ್ವಯ ಆಗುತ್ತದೆ ಪ್ರತಿಯೊಂದು ಸಂತ್ರಸ್ತ ರಾಜ್ಯಕ್ಕೂ ವಿಶೇಷ ಪ್ಯಾಕೇಜ್ ಒದಗಿಸಬೇಕಾಗುತ್ತದೆ. ಪ್ರಧಾನಿ ಮೋದಿಯವರು ಈ ರಾಜ್ಯಗಳ ನೆರವಿಗೆ ಧಾವಿಸುವ ಬದಲು ರಾಜಕೀಯ ಬೆರೆಸಲು ಹೊರಟಂತೆ ಕಾಣುತ್ತದೆ. ಮೋದಿ ಮತ್ತು ಶಾ ಜೋಡಿಗೆ ಕಾಶ್ಮೀರ ಒಂದು ನೆಪವಾಗಿ ಬಳಸಿಕೊಳ್ಳಲು ಅವಕಾಶ ಸಿಕ್ಕಿದೆ. ಕಾಶ್ಮೀರ ಪ್ರಶ್ನೆ ಇತ್ಯರ್ಥವಾಯಿತು ಎಂದು ಬಿಂಬಿಸುವ ಸಂಭ್ರಮಾಚರಣೆಯಲ್ಲಿ ಅವರು ತೊಡಗಿದ್ದಾರೆ ಕಾಶ್ಮೀರದಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ ಲಕ್ಷಾಂತರ ಯೋಧರನ್ನು ತಂದು ನಿಲ್ಲಿಸಿ ಕಾಶ್ಮೀರವನ್ನು ಪ್ರತ್ಯೇಕ ಜೈಲ್ ಆಗಿ ಪರಿವರ್ತಿಸಿ ಎಲ್ಲವೂ ಶಾಂತವಾಗಿದೆ ಎಂದು ವಿಶ್ವಕ್ಕೆ ಸಂದೇಶ ನೀಡುತ್ತಿದ್ದಾರೆ. ಇವರು ಕಾಶ್ಮೀರದಲ್ಲಿ ಮಾಡಲು ಹೊರಟಿರುವುದು ಸ್ಮಶಾನ ಶಾಂತಿಯನ್ನು ನೆನಪಿಸುತ್ತದೆ. ಇದರ ನೇರ ಪ್ರಭಾವ ಸಂತ್ರಸ್ತ ರಾಜ್ಯಗಳ ಮೇಲಾಗುತ್ತದೆ.

ಕರ್ನಾಟಕದಲ್ಲಿಯೂ ಬಿಜೆಪಿ ಪಕ್ಷದ ಸರ್ಕಾರ ಬಂದು ಬಿಟ್ಟಿದೆ. ಇದುವರೆಗೂ ಸಚಿವ ಸಂಪುಟದ ವಿಸ್ತರಣೆ ಆಗಿಲ್ಲ. ಅದಕ್ಕೂ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಸ್ವಾತಂತ್ರ್ಯವಿಲ್ಲ, ಯಡಿಯೂರಪ್ಪನವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಓಡಾಡುತ್ತಿದ್ದಾರೆ. ಸಂತ್ರಸ್ತರು ಕೇಳುವ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸುವ ಸ್ವಭಾವ ಅವರಿಗಿಲ್ಲ. ಸಿಟ್ಟು ಬರುತ್ತದೆ. ನೀವು ಕೇಳಿದಷ್ಟು ಹಣ ನೀಡಲು ನಮಗೆ ನೋಟು ಪ್ರಿಂಟ್ ಮಾಡಲಾಗುತ್ತಾ? ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ಅತೃಪ್ತ ಶಾಸಕರನ್ನು ವಿಮಾನದಲ್ಲಿ ಕರೆದುಕೊಂಡುಹೋಗಿ ಪಂಚತಾರಾ ಹೋಟೆಲುಗಳಲ್ಲಿ ವಾಸ್ತವ್ಯ ಹೂಡಲು ಬಿಜೆಪಿ ನೋಟು ಪ್ರಿಂಟ್ ಮಾಡಿಕೊಂಡಿತ್ತಾ? ಎಂದು ಕರ್ನಾಟಕದ ಜನರು ಟ್ವೀಟ್ ಮಾಡುತ್ತಾರೆ. ಸ್ವಕ್ಷೇತ್ರ ಇರುವ ಶಿವಮೊಗ್ಗ ಜಿಲ್ಲೆಗೆ 50 ಕೋಟಿ ರೂ. ಅನುದಾನ ಘೋಷಣೆ ಮಾಡುವಾಗ ಯಡಿಯೂರಪ್ಪನವರು ನೋಟು ಪ್ರಿಂಟ್ ಮಾಡಿಕೊಂಡು ಹೋಗಿದ್ದರೆ ಎಂದು ಇನ್ನೂ ಕೆಲವರು ಕೇಳುತ್ತಿದ್ದಾರೆ. ಕೇಂದ್ರದಲ್ಲಿ ಆಯಿತು ರಾಜ್ಯದಲ್ಲಿ ಆಯಿತು ಇಂತಹ ಸರ್ಕಾರ ಬಂದದ್ದೇ ಒಂದು ರಾಷ್ಟ್ರೀಯ ದುರಂತ ಎಂದು ಯಾರಾದರೂ ಟ್ವೀಟ್ ಮಾಡಿದರೆ ಆಶ್ಚರ್ಯವೇನಿಲ್ಲ.

ವಿರಾಪೂರು ಗ್ರಾಮದ ವಿದ್ಯಾರ್ಥಿ-ಯುವಜನರಿಂದ ನೆರೆ ಸಂತ್ರಸ್ತರಿಗೆ ದವಸ-ಧಾನ್ಯ, ಸಂಗ್ರಹ

ಲಿಂಗಸ್ಗೂರು ತಾಲೂಕಿನ ನೆರೆ ಪೀಡಿತ ಸಂತ್ರಸ್ತರಿಗಾಗಿ ವಿರಾಪೂರ ಗ್ರಾಮದಲ್ಲಿ ವಿದ್ಯಾರ್ಥಿ-ಯುವಜನರಿಂದ ಆಹಾರ ಧಾನ್ಯ ಸಂಗ್ರಹ ಮಾಡಲಾಯಿತು.





ತಾಲೂಕಿನ ಕಡದರಗಡ್ಡಿ, ಯಳಗುಂದಿ, ಹಂಚಿನಾಳ, ಯರಗೋಡಿ, ಜಲದುರ್ಗ ಗ್ರಾಮಗಳು ಸೇರಿ ನಾಲ್ಕಾರು ದೊಡ್ಡಿಗಳ ಜನ ಪ್ರವಾಹದ ಪ್ರಹಾರಕ್ಕೆ ಸಿಲುಕಿ ತತ್ತರಿಸಿ ಹೋಗಿದ್ದಾರೆ. ಮನೆಮಠಗಳನ್ನು ಕಳೆದುಕೊಂಡು ಜನರ ಬದುಕು ಬೀದಿಪಾಲಾಗಿದೆ. ಸಂತ್ರಸ್ತರ ನೆರವಿಗೆ ಸಾಕಷ್ಟು ಪ್ರಮಾಣದಲ್ಲಿ ಮಾನವೀಯ ನೆಲೆಗಟ್ಟಿನಲ್ಲಿ ದಾನಿಗಳು ದೇಣಿಗೆ, ದಾನ ನೀಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲೆಯಾದ್ಯಾಂತ ದೇಣಿಗೆ ಸಂಗ್ರಹಿಸುವ ಕಾರ್ಯ ನಡೆದಿದ್ದು, ವಿರಾಪೂರು ಗ್ರಾಮದಿಂದಲ್ಲೂ ಆಹಾರ ಧಾನ್ಯ ಸಂಗ್ರಹಿಸಿ ರವಾನೆ ಮಾಡಲಾಗುತ್ತಿದೆ.

ಗ್ರಾಮದಲ್ಲಿ ಸುಮಾರು 23 ಚೀಲ ದವಸ-ಧಾನ್ಯ ಹಾಗೂ 8 ಸಾವಿರ ಹಣ ಸಂಗ್ರಹವಾಗಿದೆ.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ ವಿರಾಪೂರ, ಎಸ್‌ಎಫ್‌ಐ ಮುಖಂಡರಾದ ಅಮರೇಗೌಡ, ಅಭಿಷೇಕ್, ಬಸಲಿಂಗ, ಮಹೇಶ್, ಯುವ ಮುಖಂಡರಾದ, ಬಸವರಾಜ್, ಹುಚ್ಚರೆಡ್ಡಿ, ಮಲ್ಲಿಕಾರ್ಜುನ್ ಹಿರೇಮಠ್, ಹನುಮಂತ್ರಾಯ, ಕಳಕಪ್ಪ, ಬಾಷಮಿಯಾ, ಶಿವಪುತ್ರ ಬಸಾಪೂರು, ವೆಂಕಟೇಶ್, ಸಲೀಮ್, ರಮೇಶ್ ಕಪಗಲ್ ಮತ್ತಿತರರು ಉಪಸ್ಥಿತರಿದ್ದರು.

ಬಿ.ವಿ. ಕಕ್ಕಿಲ್ಲಾಯ ಶತಾಬ್ದಿ ವಿಚಾರ ಸಂಕಿರಣ

ವರದಿ: ವಾ. ಉ.

ಬೇವಿಂಜೆ ವಿಷ್ಣು ಕಕ್ಕಿಲ್ಲಾಯ (1919–2012) ರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ಏಕೀಕರಣ ಚಳುವಳಿಯ ನಾಯಕರಾಗಿದ್ದವರು. ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಕರ್ನಾಟಕದಲ್ಲಿ ಕಟ್ಟಿ ಬೆಳೆಸಿದ ಪ್ರಮುಖರಲ್ಲೊಬ್ಬರು. 2 ವರ್ಷ ಮದ್ರಾಸು ಪ್ರಾಂತದಿಂದ ರಾಜ್ಯ ಸಭೆಯ ಸದಸ್ಯರಾಗಿದ್ದವರು. 2 ಅವಧಿಗಳಲ್ಲಿ ಕರ್ನಾಟಕ ವಿಧಾನ ಸಭೆಯ ಸದಸ್ಯರೂ ಆಗಿದ್ದು, ಕರ್ನಾಟಕ ಭೂಸುಧಾರಣಾ ಶಾಸನ ರಚನೆಯಲ್ಲೂ ಸಕ್ರಿಯ ಪಾತ್ರ ವಹಿಸಿದವರು. ಪ್ರಖರ ಚಿಂತಕರು ಮತ್ತು ಹಲವಾರು ಗ್ರಂಥಗಳ ಲೇಖಕರೂ ಅನುವಾದಕರೂ ಆಗಿದ್ದರು.

ಕಾಸರಗೋಡಿನ ಸಮೀಪದ ಜಮೀನುದಾರ ಕುಟುಂಬದಲ್ಲಿ ಜನಿಸಿದ ಬಿ.ವಿ.ಕಕ್ಕಿಲ್ಲಾಯರು 1940 ವೇಳೆಗೆ ಮಂಗಳೂರಿನಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿರುವಾಗ ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತರಾಗಿ ಪಕ್ಷದ ಸದಸ್ಯರಾಗಿ ವಿದ್ಯಾರ್ಥಿ ಚಳುವಳಿ ಸ್ವಾತಂತ್ರ್ಯ ಹೋರಾಟ, ಕಾರ್ಮಿಕ ಚಳುವಳಿಗಳಲ್ಲಿ ತೊಡಗಿ ಕಮ್ಯೂನಿಸ್ಟ್ ಚಳುವಳಿಯನ್ನು ದಕ್ಷಿಣ ಕನ್ನಡದಿಂದ ಕರ್ನಾಟಕದಾದ್ಯಂತ ವಿಸ್ತರಿಸಲು ಶ್ರಮಿಸಿದರು; ಜೊತೆಗೆ ರೈತ ಚಳುವಳಿಯನ್ನೂ ಕಟ್ಟಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಬಂಧನಕ್ಕೆ ಒಳಗಾಗಿದ್ದ ಕಕ್ಕಿಲ್ಲಾಯರೂ, ಸ್ವಾತಂತ್ರ್ಯಾ ನಂತರದ ರಾಜಕೀಯ ಹೋರಾಟಗಳ ಸಂದರ್ಭದಲ್ಲೂ ಬಂಧನಕ್ಕೊಳಗಾಗಿದ್ದಾರೆ. ಗೋವಾ ವಿಮೋಚನಾ ಹೋರಾಟದಲ್ಲೂ ಭಾಗವಹಿಸಿದ್ದರು.

ಕಳೆದ ವಾರ ಆಗಸ್ಟ್ 10 ಮತ್ತು 11 ರಂದು ನಾಲ್ಕು ಸಂಘಟನೆಗಳು ಜತೆಗೂಡಿ ಮಂಗಳೂರಿನಲ್ಲಿ ಬಿ.ವಿ.ಕಕ್ಕಿಲ್ಲಾಯ ಶತಾಬ್ದಿ ಆಚರಣೆಯ ಭಾಗವಾಗಿ ಎರಡು ದಿನಗಳ ವಿಚಾರ ಸಂಕಿರಣ ಏರ್ಪಡಿಸಿದ್ದು, ಧಾರಾಕಾರ ಸುರಿದ ಮಳೆಯ ಮಧ್ಯೆಯೂ ದೊಡ್ಡ ಸಂಖ್ಯೆಯ ಶ್ರೋತೃಗಳು ಭಾಗವಹಿಸಿದ್ದರು. ಯುವಜನಾಂಗದ ಆಕರ್ಷಣೆಯಾಗಿರುವ ವಿದ್ಯಾರ್ಥಿ ನಾಯಕ ಡಾ.ಕನ್ನಯ್ಯ ಕುಮಾರ್ ಮತ್ತು ಇತ್ತೀಚೆಗೆ ಸಂಗೀತ ಲೋಕವನ್ನು ತಮ್ಮ ಪ್ರಖರ ಚಿಂತನೆಗಳಿಂದ ತರಾಟೆಗೆ ತೆಗೆದುಕೊಂಡಿದ್ದ ಖ್ಯಾತ ಕರ್ನಾಟಕ ಸಂಗೀತದ ಗಾಯಕ ಟಿ.ಎಂ.ಕೃಷ್ಣ ಅವರ ಮಂಡನೆಗಳು ಹಾಗೂ ಅವರೊಂದಿಗಿನ ಸಂವಾದ ವಿಚಾರಗೋಷ್ಠಿಗಳನ್ನು ಉನ್ನತ ಮಟ್ಟಕ್ಕೇರಿಸಿತು.

"ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ದುಡಿಯುವ ವರ್ಗದ ಚಳುವಳಿಗಳ ಪಾತ್ರ" ಕುರಿತಾಗಿ ಎಐಟಿಯುಸಿ ಹಿರಿಯ ನಾಯಕಿ ಅಮರ್‌ಜಿತ್ ಕೌರ್ ಮಾತನಾಡುವ ಮೂಲಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು.

ಅಗ್ಗದ ಕಾರ್ಮಿಕರನ್ನಾಗಿ ಯುವಕರ ಪರಿವರ್ತನೆ: ಡಾ. ಕನ್ನಯ್ಯ ಕುಮಾರ್

ಡಾ. ಕನ್ನಯ್ಯ ಕುಮಾರ್ "ಕವಲುದಾರಿಯಲ್ಲಿ ಭಾರತದ ಯುವಜನರು" ಕುರಿತಾಗಿ ವಿಚಾರ ಮಂಡಿಸಿದರು.

'ದೇಶದಲ್ಲಿ ಉದ್ಯೋಗಾವಕಾಶಗಳ ಕೊರತೆ ತೀವ್ರವಾಗುತ್ತಿದೆ. ಯಾವ ಕ್ಷೇತ್ರದಲ್ಲೂ ಉದ್ಯೋಗದ ಭರವಸೆ ಉಳಿದಿಲ್ಲ. ಯುವಕರನ್ನು ಅಗ್ಗದ ಕಾರ್ಮಿಕರಾಗಿ ರೂಪಿಸುವುದಕ್ಕೆ ಸೀಮಿತವಾಗಿ ಶಿಕ್ಷಣ ದೊರಕುತ್ತಿದೆ. ಎಂಜಿನಿಯರಿಂಗ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಈ ರೀತಿಯ ಪರಿಸ್ಥಿತಿಯನ್ನು ಸೃಷ್ಟಿಸುತ್ತಿರುವ ಆಡಳಿತ ವ್ಯವಸ್ಥೆಯು, ಭಾವನಾತ್ಮಕ ವಿಷಯಗಳ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿದೆ.

"ಯುವ ಸಮೂಹವನ್ನು ರಾಜಕೀಯವಾಗಿ ಎಚ್ಚರಿಸುವಲ್ಲಿ ಚಳುವಳಿಗಳು ಮತ್ತು ರಾಜಕೀಯ ಪಕ್ಷಗಳು ವಿಫಲವಾಗಿವೆ. ಜಾಗೃತಿಯ ಕೊರತೆಯ ಲಾಭವನ್ನು ಬಿಜೆಪಿ ಪಡೆಯುತ್ತಿದೆ. ತಪ್ಪು ಮಾಹಿತಿ ಮತ್ತು ಅಪಪ್ರಚಾರವನ್ನೇ ನಂಬದ ಯುವಜನರು ನರೇಂದ್ರ ಮೋದಿಗೆ ಜೈಕಾರ ಹಾಕುತ್ತಿದ್ದಾರೆ.

'ದೇಶದಲ್ಲಿ 70 ವರ್ಷಗಳಲ್ಲಿ ಏನೂ ಆಗಿಲ್ಲ ಎಂದು ಬಿಂಬಿಸಲು ಬಿಜೆಪಿ ಯತ್ನಿಸುತ್ತಿದೆ. ನಿಜವೆಂದರೆ ಏಳು ದಶಕಗಳಲ್ಲಿ ಇಲ್ಲಿ ಪ್ರಜಾಪ್ರಭುತ್ವ ಬಲಗೊಂಡಿದೆ. ದೇಶ ಹಲವು ಕ್ಷೇತ್ರಗಳಲ್ಲಿ ಸಾಕಷ್ಟು ಮುಂದಕ್ಕೆ ಹೋಗಿದೆ. ಆದರೆ ಕೆಲವು ಕ್ಷೇತ್ರಗಳಲ್ಲಿ ಹಿಂದುಳಿದಿದೆ ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕು.

'ಬಿಜೆಪಿ ಪ್ರಜಾಪ್ರಭುತ್ವವನ್ನು ನಿರ್ಮೂಲನೆ ಮಾಡಬಹುದು ಎಂಬ ಆತಂಕ ಇರುವುದು ಸಹಜ. ಆ ಪಕ್ಷ ಆರಂಭದಿಂದಲೂ ಅನುಸರಿಸಿಕೊಂಡು ಬಂದ ನೀತಿ ಮತ್ತು ಒಪ್ಪಿಕೊಂಡ ಸಿದ್ಧಾಂತಗಳು ಇಂತಹ ಆತಂಕಕ್ಕೆ ಕಾರಣ. ಆದರೆ ಇನ್ನೂ ಹತ್ತು ವರ್ಷ ಬಿಜೆಪಿ ಅಧಿಕಾರದಲ್ಲಿದ್ದರೂ ಪ್ರಜಾಪ್ರಭುತ್ವವನ್ನು ನಾಶ ಮಾಡಲು ಸಾಧ್ಯವಿಲ್ಲ. ಜನರು ಹತಾಶರಾಗುವ ಅಗತ್ಯವಿಲ್ಲ.

'ದೇಶಭಕ್ತಿಯ ಹೆಸರಿನಲ್ಲಿ ಅಂಧ ಭಕ್ತಿ ಮಾಡುತ್ತಿರುವ ಜನರು ದೇಶ ದ್ರೋಹದ ಕೆಲಸ ಮಾಡುತ್ತಿದ್ದಾರೆ. ದೇಶದ ಮೇಲೆ ಪ್ರೀತಿ ಇದ್ದರೆ, ಅಶಕ್ತರಲ್ಲಿ ಪ್ರಶ್ನೆ ಎತ್ತುವುದಿಲ್ಲ, ಬದಲಾಗಿ ಬಲಾಢ್ಯರಲ್ಲಿ ಪ್ರಶ್ನೆ ಎತ್ತಬೇಕಿದೆ. ಪ್ರಜಾಪ್ರಭುತ್ವವೆಂದರೆ ಎಡಪಕ್ಷಕ್ಕೆ ಪ್ರಶ್ನೆ ಕೇಳುವುದಲ್ಲ, ಬದಲಾಗಿ ಸರಕಾರವನ್ನು ಪ್ರಶ್ನಿಸಬೇಕಿರುವುದು. ಈ ಪ್ರಕ್ರಿಯೆ ನಮ್ಮ ಮನೆಯಲ್ಲಿ ಆರಂಭವಾಗಬೇಕಿದೆ. ನಮ್ಮ ಶಿಕ್ಷಣ ಸಂಸ್ಥೆ, ಉದ್ಯೋಗ ಸ್ಥಳಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಈ ಪ್ರಜಾಪ್ರಭುತ್ವದ ನಡವಳಿಕೆಗಳನ್ನು ಕಲಿಸಬೇಕಾಗಿದೆ' ಎಂದು ಡಾ.ಕನ್ನಯ್ಯಕುಮಾರ್ ವಿವರಿಸಿದರು.

ಸಂವಿಧಾನಕ್ಕೆ ಜೈ ಅನ್ನಿ – ವಿದ್ಯಾರ್ಥಿನಿಯ ಸವಾಲಿಗೆ ಕನ್ನಯ್ಯ ಪ್ರತ್ಯುತ್ತರ

ಕಾರ್ಯಕ್ರಮದ ಸಂವಾದದಲ್ಲಿ ವಿದ್ಯಾರ್ಥಿನಿಯೊಬ್ಬಳು ಜೈ ಶ್ರೀರಾಮ್ ಎನ್ನುತ್ತಾ, ನೀವೇಕೆ ದೇಶವೆಲ್ಲ ಒಂದೇ ಎಂಬ ಪರಿಕಲ್ಪನೆಯಲ್ಲಿ ಏಕೆ ಮಾತನಾಡುವುದಿಲ್ಲ ಮತ್ತು ಏಕೆ ಜೈಶ್ರೀರಾಮ್ ಎನ್ನುವುದಿಲ್ಲ ಎಂದು ಪ್ರಶ್ನಿಸಿದಳು. ನಾನು ಜೈ ಸೀತಾರಾಮ್ ಎನ್ನುತ್ತೇನೆ. ನಾನು ತಂದೆ ತಾಯಿ ಇಬ್ಬರನ್ನೂ ಪ್ರೀತಿಸುತ್ತೇನೆ, ಕೇವಲ ತಂದೆಯನ್ನು ಮಾತ್ರವಲ್ಲ, ನಿಮಗೆ ಸ್ವಾತಂತ್ರ್ಯವಿದೆ. ನೀವು ಬೇಕಾದ್ದು ಮಾತನಾಡಲು ಸ್ವಾತಂತ್ರ್ಯ ಕೊಟ್ಟದ್ದು ಸಂವಿಧಾನ. ಸಂವಿಧಾನಕ್ಕೆ ಜೈ ಎನ್ನಿ ಎಂದು ಉತ್ತರಿಸಿದರು.

ಭಾರತದಲ್ಲಿ ಮುನ್ನೂರಕ್ಕೂ ಮೀರಿ ರಾಮಾಯಣಗಳಿವೆ. ಭಾರತದ ವಿಶೇಷಿತ ವೈವಿಧ್ಯವಿದೆ. ನನ್ನಂತೆ ನೀವು ಪಿಎಚ್‌ಡಿಗಾಗಿ ರಾಮಾಯಣಗಳ ಅಧ್ಯಯನ ಎತ್ತಿಕೊಳ್ಳಿ ಎಂದು ಉತ್ತರಿಸಿದ ಕನ್ನಯ್ಯ, 'ದೇಶದ ಮೇಲಿನ ಪ್ರೀತಿ ಎಂದರೆ ಅದು ತೋರಿಕೆಯ ವಸ್ತು ಅಲ್ಲ' ಎಂದರು.

ಪ್ರಜಾಸತ್ತಾತ್ಮಕ ಕ್ರಾಂತಿ ಮತ್ತು ದಮನಿತರ ಹೋರಾಟಗಳು

ರಾಷ್ಟ್ರೀಯ ಪ್ರಜಾಸತ್ತಾತ್ಮ ಕ್ರಾಂತಿ ಎಂಬ ವಿಚಾರದ ಮಂಡನೆ ಕಳಲೆ ಪಾರ್ಥಸಾರಥಿ ಮಾಡಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ದಿನೇಶ್ ಅಮೀನ್ ಮಟ್ಟು ಮಾತನಾಡಿದ್ದು, ಅವರು ಹಲವು ವರ್ಷಗಳಿಂದ ಹೇಳುತ್ತಿದ್ದ ಜನಪ್ರಿಯ ಮಾತುಗಳೇ ಆಗಿದ್ದವು. ಎಡಪಕ್ಷಗಳಿಗೆ ಅಂಬೇಡ್ಕರ್‌ರಂತಹ ನಾಯಕರು ಸಿಗಬೇಕಿತ್ತು. ಇಲ್ಲವೇ ಅಂಬೇಡ್ಕರ್ ಅವರೇ ಎಡಪಕ್ಷಗಳ ನಾಯಕರಾಗಬೇಕಿತ್ತು ಎಂಬ ಆಗದ–ಹೋಗದ ವಿಚಾರಗಳನ್ನು ರಂಜಕ ಭಾಷೆಯಲ್ಲಿ ದಿನೇಶ್ ಅಮೀನ್ ಮಂಡಿಸಿದರು. ಜಾತಿ ಭಾರತದ ಸಮಾಜ ವ್ಯವಸ್ಥೆಯ ಅನಿವಾರ್ಯ ಅಂಗವಾಗಿದ್ದು, ಜಾತಿ ಶೋಷಣೆಯನ್ನು ಬಹಳ ಕಾಲ ಕಮ್ಯೂನಿಸ್ಟರು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಅವರು ಪುನರುಚ್ಚರಿಸಿದರು.

ಖ್ಯಾತ ಚಿಂತಕ ಪ್ರೊ.ಆನಂದ ತೇಲ್ತುಂಬ್ಡೆ, 'ಭಾರತದಲ್ಲಿ ದಮನಿತರ ಹೋರಾಟ ಎಂದರೆ ಅದು ವರ್ಗ ಸಂಘರ್ಷ ಮತ್ತು ಜಾತಿ ತಾರತಮ್ಯದ ವಿರುದ್ಧದ ಹೋರಾಟವಾಗಿದೆ. ಕಾಲ್‌ಮಾರ್ಕ್ಸ್ ಹಾಗೂ ಅಂಬೇಡ್ಕರ್‌ರವರ ಅಂತಿಮ ಗುರಿ ಶೋಷಣೆ ಮುಕ್ತ ಮಾನವೀಯ ಸಮಾಜವಾಗಿತ್ತು. ಅದೇ ರೀತಿ ಬುದ್ಧನ ಬೋಧನೆಯೂ ಶೋಷಣೆ ಮುಕ್ತ ಸಮಾಜದ ತತ್ವದ ಪ್ರತಿಪಾದನೆಯಾಗಿದೆ. ಆದರೆ ಅವರ ವಿಚಾರಗಳನ್ನು ಪ್ರತಿಪಾದಿಸಿದ ರೀತಿ, ದಾರಿ ಮಾತ್ರ ಭಿನ್ನವಾಗಿದೆ.

'ದಮನಿತರ ಪರವಾಗಿ ಹೋರಾಡುವ ಸಂಘಟನೆಗಳು ಮಾನವೀಯತೆಯ ಘನತೆಯನ್ನು ಎತ್ತಿ ಹಿಡಿಯುವ, ವರ್ಗ ಮತ್ತು ಜಾತಿಯ ಅಸಮಾನತೆಯನ್ನು ಮೀರುವ ಸಮಾಜವನ್ನು ಕಟ್ಟಲು ಸಂಘಟಿತರಾಗಬೇಕಾಗಿದೆ' ಎಂದು ವಿವರಿಸಿದರು. ತೇಲ್ತುಂಬ್ಡೆಯವರ ಮಾತುಗಳಿಗೆ ಡಾ.ಕನ್ನಯ್ಯ ಕುಮಾರ್ ಪ್ರತಿಕ್ರಯಿಸಿ 'ಜೈ ಭೀಮ್, ಲಾಲ್ ಸಲಾಮ್' ಘೋಷಣೆಗಳನ್ನು ತಾವು ಜೆಎನ್‌ಯುನಲ್ಲಿ ಹಾಕಬೇಕಾಗಿ ಬಂದ ವಿಶಿಷ್ಟ ಸಂದರ್ಭವನ್ನು ವಿವರಿಸಿದರು. ವಿವಿಧ ನೆಲೆಯ ದಮನಿತ ಶೋಷಿತರು ಒಟ್ಟಾಗಿ ಹೋರಾಟ ಕಟ್ಟುವಾಗ ನಿರ್ಮಾಣವಾಗುವ ಸಂದರ್ಭಗಳೇ ಹೊಸ ಘೋಷಣೆಗಳನ್ನು ಸೃಷ್ಟಿಸಿ ಹಾಕುತ್ತವೆ; ಅವು ಖಾಯಂ ಇರಬಹುದು ಇಲ್ಲದೆಯೇ ಇರಬಹುದು ಎಂದವರು ವಿವರಿಸಿದರು.

ಕಮ್ಯೂನಿಸ್ಟ್ ಪಕ್ಷಗಳು ಐಕ್ಯತೆ ಮುಖ್ಯ; ಸಿದ್ಧನಗೌಡ ಪಾಟೀಲ್

ಎರಡನೇ ದಿನ ಕಾರ್ಯಕ್ರಮದಲ್ಲಿ ಮೊದಲ ಉಪನ್ಯಾಸವಾಗಿ 'ಬಿ.ವಿ.ಕಕ್ಕಿಲ್ಲಾಯ ವ್ಯಕ್ತಿ ವೈಶಿಷ್ಟ್ಯ'ದ ಬಗ್ಗೆ ಡಾ. ಸಿದ್ಧನಗೌಡ ಪಾಟೀಲ್ ಮಾತನಾಡಿದರು.

'ಬಿ.ವಿ. ಕಕ್ಕಿಲ್ಲಾಯರಿಗೆ ಕಮ್ಯೂನಿಸ್ಟ್ ಪಕ್ಷವು ಎರಡಾದುದರ ಬಗ್ಗೆ ತೀವ್ರ ಬೇಸರವಿತ್ತು. ಅಂತೆಯೇ ಕಾಸರಗೋಡು ಕರ್ನಾಟಕದಲ್ಲಿ ಸೇರಿಕೆಯಾಗದ ಬಗ್ಗೆಯೂ ಕೂಡಾ. ಅವರ ಕೊನೆಯ ದಿನಗಳಲ್ಲಿ ಕರಾವಳಿ ಕರ್ನಾಟಕದಲ್ಲಿ ಬೆಳೆದು ಬಂದ ಕೋಮುವಾದದ ಬಗ್ಗೆಯೂ ವಿಷಾದವಿತ್ತು.

'ಹುಟ್ಟಿನಿಂದ ಮೇಲುವರ್ಗ ಹಾಗೂ ಮೇಲುಜಾತಿಗೆ ಸೇರಿದವರು ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಾಗುವಾಗ ಡಿಕ್ಲಾಸಿಫೈ ಆಗುವುದು ಬಹಳ ಕಷ್ಟದ ಕೆಲಸ. ಇದರ ಪ್ರಥಮ ಹೆಜ್ಜೆಯಾಗಿ ವಿದ್ಯಾರ್ಥಿಯಾಗಿ ಬಂದಿದ್ದ ಕಕ್ಕಿಲ್ಲಾಯ ತಮ್ಮ ಜುಟ್ಟು ಮತ್ತು ಜನಿವಾರವನ್ನು ಆ ಕಾಲದಲ್ಲೇ ತ್ಯಜಿಸಿದ್ದರು. ತನ್ನನ್ನು ತಾನು ಗೆಲ್ಲುವ ಸಂಯಮವೇ ನೈಜ ಕಮ್ಯೂನಿಸ್ಟ್ ಬದ್ಧತೆ; ಎಂದು ಸಿದ್ಧನಗೌಡ ಪಾಟೀಲ್ ತಿಳಿಸಿದರು.

ಕರ್ನಾಟಕದಲ್ಲಿ ಭೂಸುಧಾರಣೆ: ಎಲ್ಲಿಂದ ಎಲ್ಲಿಗೆ?

ಡಾ. ಚಂದ್ರ ಪೂಜಾರಿಯವರು ಕರ್ನಾಟಕದಲ್ಲಿ ಹಾಗೂ ದಕ್ಷಿಣ ಕನ್ನಡದಲ್ಲಿ ಭೂಸುಧಾರಣಾ ಶಾಸನಗಳ ಜಾರಿಯ ಹಿಂದೆ ಮತ್ತು ಸುಧಾರಣೆಯ ಆನಂತರ ಆಗಿರುವ ಭೂಹಂಚಿಕೆಯ ಸಂಗತಿಗಳನ್ನು ಅಂಕಿ ಅಂಶಗಳೊಂದಿಗೆ ವಿವರಿಸಿದರು.

'ಭೂಸುಧಾರಣೆಗಾಗಿ ನಡೆಸಿದ ಹೋರಾಟದಲ್ಲಿ ಕಮ್ಯೂನಿಸ್ಟರು ಪ್ರಮುಖ ಪಾತ್ರವಹಿಸಿದ್ದರು. ಭೂಸುಧಾರಣೆಯ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಪ್ರಮುಖ ಪಾತ್ರ ವಹಿಸಿದೆ. ಆದರೆ ಈ ಕಾಯ್ದೆಯ ಫಲಾನುಭವಿಗಳ ಕುಟುಂಬಸ್ಥರು ಇಂದು ಈ ಪಕ್ಷಗಳ ಜೊತೆಗಿಲ್ಲ.

'ದ.ಕ. ಜಿಲ್ಲೆಯಲ್ಲಿ 1 ಲಕ್ಷಕ್ಕೂ ಅಧಿಕ ಮಂದಿ ಭೂಸುಧಾರಣೆ ಕಾಯ್ದೆಯ ಪ್ರಯೋಜನ ಪಡೆದಿದ್ದರು. ಅದರಲ್ಲೂ ಬಿಲ್ಲವರು ಅತ್ಯಧಿಕ ಸಂಖ್ಯೆಯ ಫಲಾನುಭವಿಗಳಾಗಿದ್ದರು. ಕಾಯ್ದೆಯ ಬಳಿಕ ಬಿಲ್ಲವರು ರಾಜಕೀಯವಾಗಿಯೂ ಸ್ಥಾನಮಾನ ಪಡೆದುಕೊಂಡರು. ಅಂದರೆ ಕಾಂಗ್ರೆಸ್ ಪಕ್ಷದ ಮೂಲಕ ಸಂಸದರಾಗಿ, ಶಾಸಕರಾಗಿ ಗುರುತಿಸಲ್ಪಟ್ಟರು. ಆ ಬಳಿಕ ಬೆಳೆದು ಬಂದಿದ್ದ ಕೋಮುರಾಜಕರಣವನ್ನು ಎದುರಿಸುವಲ್ಲಿ ಕಾಂಗ್ರೆಸ್ ಪಕ್ಷವೂ ವಿಫಲವಾಯಿತು. ಎಡಪಕ್ಷಗಳೂ ಬಿಜೆಪಿಯನ್ನು ಎದುರಿಸುವ ಸ್ಥಿತಿಯಲ್ಲಿಲ್ಲ' ಎಂದು ಡಾ.ಚಂದ್ರ ಪೂಜಾರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕರಾವಳಿಯಲ್ಲಿ ಭೂಮಿ ಹೋರಾಟ ನಡೆದಿಲ್ಲ ಎಂಬ ಮಾತಿಗೆ ಸಭಿಕರ ಸವಾಲು

ಡಾ. ಚಂದ್ರ ಪೂಜಾರಿ ಅವರು ಮಾತನಾಡಿದ ಬಳಿಕ ಮಾತನಾಡಿದ ದಿನೇಶ್ ಅಮೀನ್ ಮಟ್ಟು, 'ಕರಾವಳಿಯಲ್ಲಿ ಭೂಸುಧಾರಣೆಗೆ ಸಂಬಂಧಿಸಿ ದೊಡ್ಡ ಮಟ್ಟದ ಹೋರಾಟ ಅಥವಾ ಚಳುವಳಿಯೂ ನಡೆದಿಲ್ಲ. ಭೂಸುಧಾರಣಾ ಕಾಯ್ದೆ ಜಾರಿಗೆ ಕಾರಣರಾದ ಮುಖ್ಯಮಂತ್ರಿ ದೇವರಾಜು ಅರಸು ಅವರ ಪಾತ್ರವನ್ನು ಅಂದಿನ ಇಲ್ಲಿನ ಕಾಂಗ್ರೆಸ್ ನಾಯಕರು ಜನತೆಗೆ ಮರೆಮಾಚಿದರು. ವಾಸ್ತವ ಸ್ಥಿತಿಯನ್ನು ಕಾಂಗ್ರೆಸ್ ನಾಯಕರು ಯುವ ಪೀಳಿಗೆಯ ಮುಂದೆ ಅದಾಗಲೇ ಇಟ್ಟಿದ್ದರೆ, ಇಂದು ಈ ಕಾಯ್ದೆಯ ಫಲಾನುಭವಿಗಳ ಮಕ್ಕಳು ಕೇಸರಿ ಪಟ್ಟಿಕಟ್ಟಿಕೊಳ್ಳುತ್ತಿರಲಿಲ್ಲ' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕರಾವಳಿಯಲ್ಲಿ ಭೂಸುಧಾರಣೆಗಾಗಿ ದೊಡ್ಡ ಚಳುವಳಿಗಳು ನಡೆದಿಲ್ಲ ಎಂಬ ದಿನೇಶ್ ಅಮೀನ್ ಮಟ್ಟು ಅವರ ಮಾತಿಗೆ ಯುವ ನಾಯಕ ಮುನೀರ್ ಕಾಟಿಪಳ್ಳ, ಪ್ರಾಂತ ರೈತ ಸಂಘದ ಮುಖಂಡ ಯಾದವ ಶೆಟ್ಟಿ ಸವಾಲೆಸೆದರು. ಬಿ.ವಿ. ಕಕ್ಕಿಲ್ಲಾಯರೊಂದಿಗೆ ಎ. ಕೃಷ್ಣ ಶೆಟ್ಟಿ, ಎಂ.ಎಚ್. ಕೃಷ್ಣಪ್ಪರಂಥ ನಾಯಕರು ಮಿಲಿಟೆಂಟ್ ಆದ ರೈತ ಹೋರಾಟವನ್ನು ಭೂಸುಧಾರಣಾ ಕಾನೂನು ಘೋಷಣೆಯಾಗುವರೆಗೂ ಜೀವಂತವಾಗಿಟ್ಟಿದ್ದರೆಂಬುದನ್ನು ಮಟ್ಟು ಅವರು ಬೇಕೆಂದೇ ಅವಗಣಿಸುತ್ತಿದ್ದಾರೆಯೇ ಎಂಬ ಅನುಮಾನ ವ್ಯಕ್ತಪಡಿಸಿದರು. ಪಿ.ವಿ. ಲೋಕೇಶ್ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡದಲ್ಲಿ ತತ್ತ್ವಶಾಸ್ತ್ರ, ಇತಿಹಾಸ ಮತ್ತು ಅರ್ಥಶಾಸ್ತ್ರದ ಬರಹಗಳು:

ತತ್ತ್ವಶಾಸ್ತ್ರ ಬರವಣಿಗೆಯ ಬಗ್ಗೆ ಡಾ.ಟಿ.ಎಸ್. ವೇಣುಗೋಪಾಲ್, ಇತಿಹಾಸ ಬರವಣಿಗೆಯ ಬಗ್ಗೆ ಡಾ. ತಂಬಂಡ ವಿಜಯ ಪೂಣಚ್ಚ, ಅರ್ಥಶಾಸ್ತ್ರ ಬರವಣಿಗೆಯ ಬಗ್ಗೆ ಕಳಲೆ ಪಾರ್ಥಸಾರಥಿ ವಿಚಾರ ಮಂಡಿಸಿದರು. ಹಿರಿಯ ಚಿಂತಕ ಹಾಗೂ ಲೇಖಕ ಡಾ.ಜಿ. ರಾಮಕೃಷ್ಣ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇದೊಂದು ಅಕಾಡೆಮಿಕ್ ಗೋಷ್ಠಿಯಂತಿತ್ತು.

ಕಲೆ–ಸಂಸ್ಕೃತಿಯಲ್ಲೂ ತಾರತಮ್ಯ: ಸಂಗೀತಕಾರ ಟಿ.ಎಂ. ಕೃಷ್ಣ

'ಕಲೆಯ ಮರು ನಿರೂಪಣೆ' ಎಂಬ ಅಂತಿಮ ಗೋಷ್ಠಿಯಲ್ಲಿ ಭಾಗವಹಿಸಿದ ಖ್ಯಾತ ➔







ಕಾರ್ಮಿಕರ ಬದುಕು ಅತಂತ್ರ – ಮಹಾಂತೇಶ್

ಚಿಕ್ಕಬಳ್ಳಾಪುರ ಪತ್ರಕರ್ತರ ಭವನದಲ್ಲಿ ಭಾನುವಾರ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾ ಶಾಖೆ ವತಿಯಿಂದ (ಸಿಡಬ್ಲ್ಯೂಎಫ್ಐ) ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಕಾರ್ಮಿಕ ಸಮಾವೇಶ ಉದ್ಘಾಟಿಸಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹಾಂತೇಶ್ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾಗತೀಕರಣ ಹಾಗೂ ಉದಾರೀಕರಣ ನೀತಿಗಳ ಭಾಗವಾಗಿ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಕಾರ್ಮಿಕ ವಿರೋಧಿ ಕಾಯ್ದೆಗಳಿಂದ ದೇಶದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರ ಬದುಕು ಅತಂತ್ರವಾಗಿದೆ ಎಂದು ಟೀಕಿಸಿದರು ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ಸೂಕ್ತ ರಕ್ಷಣೆ ಇಲ್ಲದಂತಾಗಿದೆ ಎಂದರು.

ರೈತರು ಕಾರ್ಮಿಕರಾಗುತ್ತಿದ್ದಾರೆ:

ದೇಶದಲ್ಲಿ ಈಗ ಉದ್ಯೋಗ ಅವಕಾಶಗಳನ್ನು ಒದಗಿಸುವ ಕೃಷಿ ರಂಗ ದಿವಾಳಿಯಾಗಿ ಕೃಷಿ ಭೂಮಿ ರಿಯಲ್ ಎಸ್ಟೇಟ್‌ಗಳಿಗೆ ಹೆಚ್ಚು ಬಳಕೆಯಾಗುತ್ತಿರುವುದರಿಂದ ಕೃಷಿ ಭೂಮಿ ಕಣ್ಮರೆಯಾಗುತ್ತಿದ್ದು ಇದರಿಂದ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಕಾರ್ಮಿಕರ ಸಂಖ್ಯೆ ಅಧಿಕವಾಗುತ್ತಿದೆ ಎಂದರು.

ನಗರ ಪ್ರದೇಶಗಳು ವಿಸ್ತರಣೆಯಾಗಿ ಹಳ್ಳಿಗಳು ಇಲ್ಲವಾಗುತ್ತಿವೆ. ರೈತರು ಬೆಳೆಯುವ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆ ಸಿಗುತ್ತಿಲ್ಲ. ಇದರಿಂದ ರೈತರು ಕಾರ್ಮಿಕರಾಗುತ್ತಾ ನಗರಗಳಿಗೆ ಕೆಲಸ ಹುಡುಕಿ ವಲಸೆ ಬರುವಂತಾಗಿದೆ ಎಂದರು.

ಅರ್ಹರಿಗೆ ಸವಲತ್ತು ಸಿಗುತ್ತಿಲ್ಲ:

ರಾಜ್ಯದ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 8 ಸಾವಿರ ಕೋಟಿ ಕಲ್ಯಾಣ ನಿಧಿ ಕಾರ್ಮಿಕರಿಗಾಗಿ ಬಳಕೆಯಾಗದೆ ಕೊಳೆಯುತ್ತಿದೆ. ಅರ್ಹ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿದರು.

ಸಂಘದ ಜಿಲ್ಲಾ ಸಂಚಾಲಕ ಎಂ.ಪಿ. ಮುನಿವೆಂಕಟಪ್ಪ ಮಾತನಾಡಿ, ಬರದಿಂದ ತತ್ತರಿಸಿರುವ ಜಿಲ್ಲೆಯಲ್ಲಿ ರೈತಾಪಿ ಕೂಲಿ ಕಾರ್ಮಿಕರು ಇಂದು ಅಸಂಘಟಿತರಾಗಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಇವರನ್ನು ಸಂಘಟಿತರನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿರುವ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರನ್ನು ಸಂಘಟಿಸಲಾಗುತ್ತಿದೆ ಎಂದರು.

ಕಾರ್ಮಿಕರ ಭವಿಷ್ಯದ ಬಗ್ಗೆ ಚಿಂತನೆ ಇಲ್ಲ:

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ಸಿದ್ದಗಂಗಪ್ಪ ಮಾತನಾಡಿ, ಸಮಾಜದಲ್ಲಿ ಶ್ರಮಪಟ್ಟು ಕೆಲಸ ಮಾಡುವ ಕಾರ್ಮಿಕರಿಗೆ ಇಂದು ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ. ಸರ್ಕಾರಗಳು ಕಾರ್ಮಿಕ ವಿರೋಧಿ, ಕಾಯ್ದೆಗಳನ್ನು ರೂಪಿಸಿ ಕಾರ್ಮಿಕರನ್ನು ಬೀದಿಪಾಲು ಮಾಡುತ್ತಿವೆ ಎಂದರು.

ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಭವಿಷ್ಯದ ಬಗ್ಗೆ ಸರ್ಕಾರಗಳಿಗೆ ಚಿಂತನೆ ಇಲ್ಲ. ತಮ್ಮ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಕಾರ್ಮಿಕರೇ ಸಂಘಟಿತರಾಗಬೇಕು. ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಕಟ್ಟಡ ಹಾಗೂ ಇತರೆ ನಿರ್ಮಾಣ ಕೂಲಿ ಕಾರ್ಮಿಕರಿದ್ದು, ಎಲ್ಲರನ್ನು ಸಂಘಟಿಸಿ ಶೀಘ್ರದಲ್ಲಿಯೇ ಜಿಲ್ಲಾ ಸಂಘಟನಾ ಸಮಾವೇಶ ನಡೆಸಲಾಗುವುದು ಎಂದು ತಿಳಿಸಿದರು.

ವೇದಿಕೆಯಲ್ಲಿ ಸಂಘದ ಖಜಾಂಚಿ ಬಿ.ಎನ್. ಮುನಿಕೃಷ್ಣಪ್ಪ, ಚಿಕ್ಕಬಳ್ಳಾಪುರದ ಎಸ್. ಲಕ್ಷ್ಮಯ್ಯ, ಚಿಂತಾಮಣಿ ಮುನಿವೆಂಕಟರೆಡ್ಡಿ, ಲಕ್ಷ್ಮೀನಾರಾಯಣ್, ಕೋಡಿಹಳ್ಳಿ ವೆಂಕಟೇಶಪ್ಪ, ಗೌರಿಬಿದನೂರು ಗಂಗಾಧರಪ್ಪ, ನೆಲ್ಲಪ್ಪ, ಗೋಪಾಲ್, ಜನವಾದಿ ಮಹಿಳಾ ಸಂಘಟನೆಯ ಬಾಗೇಪಲ್ಲಿ ಬಿ. ಸಾವಿತ್ರಮ್ಮ, ರಘುರಾಮರೆಡ್ಡಿ, ಬಾಲಾಜಿ, ಮುನಿಚಂದ್ರ, ಶಿಡ್ಲಘಟ್ಟದ ಸುದರ್ಶನ, ಲಕ್ಷ್ಮಣ್, ಜಯರಾಮ್ ಸೇರಿದಂತೆ ಜಿಲ್ಲೆಯ ಆರು ತಾಲ್ಲೂಕುಗಳಿಂದ ಆಗಮಿಸಿದ್ದ ನೂರಾರು ಕಟ್ಟಡ ನಿರ್ಮಾಣ ಕಾರ್ಮಿಕರು ಸಮಾವೇಶದಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ಜಿಲ್ಲಾ ಸಂಚಾಲನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

"ದೇಶದ ನಿಜವಾದ ವಾರಸುದಾರರು ಕಟ್ಟಡ ಹಾಗೂ ಇತರೆ ನಿರ್ಮಾಣದ ಕಾರ್ಮಿಕರು. ದೇಶದ ಭವಿಷ್ಯ ಅದರ ಆಳಿವು ಉಳಿವು ನಿಂತಿರುವುದು ಕಾರ್ಮಿಕರ ಮೇಲೆ. ಆದರೆ ಇಂದು ಕಾರ್ಮಿಕರನ್ನು ಎಲ್ಲಾ ಹಂತದಲ್ಲಿ ಶೋಷಣೆ ಮಾಡುವ ಪ್ರವೃತ್ತಿ ಹೆಚ್ಚಾಗಿದೆ. ವೇತನ, ಕೆಲಸದ ಭದ್ರತೆ ಇಲ್ಲದೇ ಕಾರ್ಮಿಕರನ್ನು ಹೆಚ್ಚು ಶೋಷಣೆ ಮಾಡಲಾಗುತ್ತಿದೆ. ದೇಶದಲ್ಲಿ ಕೃಷಿ ಭೂಮಿ ಕಡಿಮೆಯಾದಂತೆ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ."

– ಮಹಾಂತೇಶ್,
ಪ್ರಧಾನ ಕಾರ್ಯದರ್ಶಿ, ಸಿಡಬ್ಲ್ಯೂಎಫ್ಐ

ಮಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕಳೆದ ಅವಧಿಯಲ್ಲಿ ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯಿಂದಾಗಿ ಕೋಟ್ಯಾಂತರ ಕಟ್ಟಡ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಿದ ನರೇಂದ್ರ ಮೋದಿ ನೇತೃತ್ವದ ಸರಕಾರ ಈಗ ಸಾಮಾಜಿಕ ಸುರಕ್ಷತಾ ಮಸೂದೆ ಜಾರಿಯಿಂದ ಕಟ್ಟಡ ಕಾರ್ಮಿಕರ ಸೌಲಭ್ಯಗಳನ್ನು ಕಸಿಯಲು ಹೊರಟಿದೆ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಹೇಳಿದರು.

ಕೇಂದ್ರ ಸರಕಾರವು ಉದ್ದೇಶಿತ ಸಾಮಾಜಿಕ ಸುರಕ್ಷತಾ ಕಲ್ಯಾಣ ಮಸೂದೆಯನ್ನು 2018ನ್ನು ತತ್‌ಕ್ಷಣ ಕೈಬಿಡಬೇಕು, ಕಟ್ಟಡ ಕಾರ್ಮಿಕರ ಕಾನೂನು, ಬದುಕನ್ನು ರಕ್ಷಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಸಿಐಟಿಯು ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರಿಂದ ಆಗಸ್ಟ್ 12 ರಂದು ದ.ಕ.ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಆಯೋಜಿಸಿದ್ದ ಪ್ರತಿಭಟನೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಮುಖಂಡ ಯೋಗೀಶ್ ಜಪ್ಪಿನಮೊಗರು, ಕೆ.ಪಿ. ಜೋನಿ, ಸಿಐಟಿಯು ಜಿಲ್ಲಾ ನಾಯಕ ಸದಾಶಿವದಾಸ್ ಮಾತನಾಡಿದರು. ಯು.ಬಿ. ಲೋಕಯ್ಯ, ಪದ್ಮಾವತಿ ಶೆಟ್ಟಿ, ಜಯಂತ ನಾಯಕ್, ರವಿಚಂದ್ರ ಕೊಂಚಾಡಿ, ಜನಾರ್ಧನ ಕುತ್ತಾರ್, ಚಂದ್ರಹಾಸ್ ಪಿಲಾರ್, ವಸಂತಿ ಕುಪ್ಪೆಪದವು, ಶಂಕರ ವಾಲ್ಪಾಡಿ, ನಾಗರಾಜ್ ಸುಳ್ಯ ಮೊದಲಾದವರು ಭಾಗವಹಿಸಿದ್ದರು.



ದೇವಲ್ಕುಂದ ಫಿಶ್ ಫ್ಯಾಕ್ಟರಿ ಕಾರ್ಮಿಕರು ಅಸ್ವಸ್ಥ: ಸಿಐಟಿಯು ನಿಯೋಗ ಭೇಟಿ

ಕುಂದಾಪುರ ದೇವಲ್ಕುಂದ ಗ್ರಾಮದ ಮಲ್ಪೆ ಫಿಶ್ ಮರೈನ್ ಫ್ಯಾಕ್ಟರಿಯಲ್ಲಿ ನಡೆದ ಅನಿಲ ಸೋರಿಕೆಯಿಂದ ಅಸ್ವಸ್ಥರಾದ ಕಾರ್ಮಿಕರನ್ನು ಆಸ್ಪತ್ರೆಯಲ್ಲಿ ಸಿಐಟಿಯು ನಿಯೋಗ ಭೇಟಿ ಮಾಡಿತು. ಕಾರ್ಮಿಕರ ಆರೋಗ್ಯ ವಿಚಾರಿಸಿದ ನಿಯೋಗ ಆಸ್ಪತ್ರೆಯ ಖರ್ಚು ವೆಚ್ಚಗಳು ಫ್ಯಾಕ್ಟರಿ ಆಡಳಿತ ಭರಿಸುತ್ತಿರುವ ಮಾಹಿತಿಗಳನ್ನು ಸಂಬಂಧ ಪಟ್ಟವರಿಂದ ಪಡೆಯಲಾಯಿತು. ನಿಯೋಗದಲ್ಲಿ ಸಿಐಟಿಯು ಮುಖಂಡರಾದ ಬಾಲಕೃಷ್ಣಶೆಟ್ಟಿ ಎಚ್. ನರಸಿಂಹ, ಸುರೇಶ್ ಕಲ್ಲಾಗರ ಇದ್ದರು.



➔ ಸಂಗೀತಕಾರ ಹಾಗೂ ಕಲಾಚಿಂತಕ ಟಿ.ಎ.ಕೃಷ್ಣ,

'ಜಮ್ಮು ಕಾಶ್ಮೀರದ ವಿಚಾರದಲ್ಲಿ ಸಿಟ್ಟಿನ ಏಕರೂಪೀಕರಣವನ್ನು ನಾವು ಕಾಣುತ್ತಿದ್ದೇವೆ. ದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆ ಇತ್ತೇ ಹೊರತು ಸಾಂಸ್ಕೃತಿಕ ಪ್ರಜಾಪ್ರಭುತ್ವ ಎಲ್ಲಿತ್ತು? ಕಲೆ ಮತ್ತು ಸಂಸ್ಕೃತಿಯು ಪ್ರಜಾಪ್ರಭುತ್ವದ ಸಂವಾದ ಮತ್ತು ಜಾತ್ಯಾತೀತ ಮೌಲ್ಯಗಳೊಂದಿಗೆ ತೆರೆದುಕೊಂಡಾಗ ಮಾತ್ರ ಉಳಿದು ಬೆಳೆಯಲು ಸಾಧ್ಯ. ವೈರುಧ್ಯತೆ ಇದ್ದಾಗಲೇ ಸೌಂದರ್ಯ ಇರಲು ಸಾಧ್ಯ. ಏಕರೂಪತೆ ಬೇಸರ ಉಂಟು ಮಾಡುತ್ತದೆ.

'ಕರ್ನಾಟಕ ಮತ್ತು ಹಿಂದೂಸ್ಥಾನಿ ಗಾಯನಗಳೆರಡರಲ್ಲೂ ಬ್ರಾಹ್ಮಣ್ಯ ಇದೆ. ಒಂದು ಧಾರ್ಮಿಕ, ಇನ್ನೊಂದು ಆಧ್ಯಾತ್ಮಿಕ, ಮೇಲ್ವರ್ಗದ ಕಲೆಗಳು ಶಾಸ್ತ್ರೀಯ ಎನಿಸಲ್ಪಟ್ಟರೆ, ತಳವರ್ಗಗಳ ಕಲೆಗಳು 'ಕಲೆ' ಎಂಬ ಮಾನ್ಯತೆಯನ್ನೂ ಪಡೆಯಲಿಲ್ಲ. ಸೌಂದರ್ಯ, ಪರಿಶುದ್ಧತೆ, ಆಸ್ವಾದನೆ ಮತ್ತು ನೋಟದಲ್ಲೂ ಬ್ರಾಹ್ಮಣ್ಯ ಹಾಗೂ ತಾರತಮ್ಯವಿದೆ. ಕಲೆಯಲ್ಲಿ ದೈಹಿಕ ಶ್ರಮವೂ ಜ್ಞಾನವೇ. ಅದನ್ನು ನಿರಾಕರಿಸುವುದು ಮೇಲ್ವರ್ಗದ ಹುನ್ನಾರವಾಗಿದೆ.

'ಭರತನಾಟ್ಯವು ದೇವದಾಸಿ ಸಮುದಾಯದ ಕಲೆಯಾಗಿತ್ತು. ಆ ಸಮುದಾಯ ಮಾಡುತ್ತಿದ್ದ ವೃತ್ತಿ ಬಗ್ಗೆಯೂ ಸಮಾಜಕ್ಕೆ ಗೊತ್ತಿದೆ. ಕಲೆಯನ್ನು ಪಾರು ಮಾಡುವ ಹೆಸರಿನಲ್ಲಿ ಮೇಲ್ವರ್ಗವು ನಾಟ್ಯವನ್ನು ಸ್ವೀಕರಿಸಿತು. ಆದರೆ ಆ ಕಲೆಯನ್ನು ಕೊಟ್ಟ ಸಮಾಜದ ಬಗ್ಗೆ ಅವರು ಚಿಂತಿಸಿದ್ದಾರೆಯೇ? ಇದೇ ಬ್ರಾಹ್ಮಣ್ಯ.

'ಸಮಾಜವನ್ನು ಆರ್ಥಿಕತೆಗಿಂತ ಹೆಚ್ಚಾಗಿ ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳು ನಿರ್ದೇಶಿಸುತ್ತವೆ. ಜಾತಿ ಮತ್ತು ಕಲೆಯು ಸಮಾನತೆಗಾಗಿ ಹೋರಾಡುವ ಯುದ್ಧ ಭೂಮಿಯಾಗಿದೆ. ಜಾತೀಯತೆ ವಿರುದ್ಧದ ಹೋರಾಟಕ್ಕೆ ಕಲೆ ಉತ್ತಮ ಸಾಧನ. ನಮ್ಮ ಬಣ್ಣ, ಭಾಷೆ, ಬಳಸುವ ಬಣ್ಣದಲ್ಲೂ ಜಾತಿಯನ್ನು ಗುರುತಿಸುತ್ತಾರೆ.' ಎಂದು ಟಿ.ಎಂ.ಕೃಷ್ಣ ವಿವರಿಸಿದರು. ಹಲವಾರು ಪ್ರಶ್ನೆಗಳು ಸಭಿಕರಿಂದ ಅವರಿಗೆ ಬಂದಾಗ, ಎಲ್ಲದಕ್ಕೂ ಬಿಡಿ ಬಿಡಿಯಾಗಿಯೇ ಅವರು ಉತ್ತರಿಸಿದರು.

ಖ್ಯಾತ ಲೇಖಕಿ ಹಾಗೂ ಸ್ತ್ರೀವಾದಿ ಕಲಾಚಿಂತಕಿ ನೂರ್ ಜಹೀರ್ ಅವರು 'ಲಿಂಗ ತಾರತಮ್ಯಗಳಾಚೆ' ಎಂಬ ವಿಷಯದ ಕುರಿತು 'ಇಪ್ಟಾ'ದ ರಂಗಭೂಮಿ ಇತಿಹಾಸದ ಹಿನ್ನೆಲೆಯಲ್ಲಿ ವಿವರಗಳನ್ನು ನೀಡಿದರು.

ಜಾತಿ ಮತ ಮೀರಿದ ಕರ್ನಾಟಕ ಸಂಗೀತ ಕಚೇರಿ

ಟಿ.ಎಂ. ಕೃಷ್ಣ ಅವರ ಸಂಗೀತ ಕಚೇರಿ ಒಂದೆಡೆ ಉತ್ಕೃಷ್ಟ ಸಂಗೀತವನ್ನು ಉಣಬಡಿಸಿದರೆ, ಇನ್ನೊಂದೆಡೆ ಅವರ ಜಾತಿಮತಗಳಾಚೆಯೂ ಕರ್ನಾಟಕಿ ಸಂಗೀತ ಇರಬಲ್ಲುದೆಂಬುದನ್ನು ಸಾಬೀತುಪಡಿಸಿತು. ಯೇಸುವಿನ ಪ್ರಾರ್ಥನೆಯೊಂದಿಗೆ ಆರಂಭವಾದ ಕೃತಿ, ಕನಕದಾಸರ, 'ಕುಲಕುಲಕುಲವೆನ್ನುತಿಹರು', ಬಸವಣ್ಣನ 'ಉಳ್ಳವರು ಶಿವಾಲಯವ ಮಾಡುವರು' ವಚನದಿಂದ ಸಾಗಿ, ತಮಿಳಿನ ಅಲ್ಲಾಹು ನಾಮಸಂಕೀರ್ತನೆಯಿಂದ ಮುಂದುವರಿದು ಬಂಗಾಳಿ ಲೋಕಸಂಗೀತದಿಂದ ಕೊನೆಗೊಂಡಿತು.

2 ದಿನಗಳ ವಿಚಾರಗೋಷ್ಠಿಗಳ ಸಮಾರೋಪ ಸಮಾರಂಭದಲ್ಲಿ ಸಿಪಿಐ ಮುಖಂಡರಾದ ಜನಾರ್ಧನ, ವಿ. ಕುಕ್ಯಾನ್, ಬಿ.ಕೆ. ಕೃಷ್ಣಪ್ಪ, ಬಾಬು ಜಿ, ಕಾಂಗ್ರೆಸ್ ಮುಖಂಡರಾದ ಪಿ.ವಿ. ಮೋಹನ್ ಮತ್ತು ಕಾರ್ಯಕ್ರಮಗಳ ಪ್ರಮುಖ ನಿರ್ವಾಹಕರಾದ ಡಾ.ಬಿ.ಶ್ರೀನಿವಾಸ ಕಕ್ಕಿಲ್ಲಾಯ ಭಾಗವಹಿಸಿದ್ದರು. ■

ದಮನಿತರಿಗೆ ದೊರೆಯದ ಸ್ವಾತಂತ್ರ್ಯ 47 ರ ಸ್ವಾತಂತ್ರ್ಯ

73ನೇ ಸ್ವಾತಂತ್ರ್ಯ ದಿನಾಚರಣೆ ಮುಕ್ತಾಯವಾಗಿದೆ. ಕಾಶ್ಮೀರಿ ಜನತೆಯ ಸ್ವಾತಂತ್ರ್ಯ ಹರಣ ಆರಂಭವಾಗಿದೆ. ಅಲ್ಲಿಯ ಜನಾಂಗೀಯ ದೌರ್ಜನ್ಯ ಹಿಟ್ಲರ್‌ನನ್ನು ನೆನಪಿಸುತ್ತದೆ. ಕೆಂಪು ಕೋಟೆಯ ಮೇಲಿನಿಂದ ಮೋದಿಯವರು ಮಾಡಿದ 92 ನಿಮಿಷಗಳ ದೀರ್ಘ ಭಾಷಣದಲ್ಲಿ 4 ರಾಜ್ಯಗಳಲ್ಲಿ ಭೀಕರ ಪ್ರವಾಹಕ್ಕೆ ಸಿಲುಕಿ ಎಲ್ಲವನ್ನು ಕಳೆದುಕೊಂಡು ಕಣ್ಣೀರಿಡುತ್ತಿರುವ ಸಂತ್ರಸ್ತರ ಪ್ರಸ್ತಾಪ ಇರಲಿಲ್ಲ. ಸರಿಯಾದ ಸಾಕ್ಷಿ ಪುರಾವೆಗಳಿದ್ದಿಲ್ಲ ಎಂಬ ಕಾರಣಕ್ಕಾಗಿ ಗುಂಪು ಹಲ್ಲೆಗೊಳಗಾಗಿ ಸಾವನ್ನಪ್ಪಿದ ಪೆಹ್ಲು ಖಾನ್ ಹಂತಕರು ಖುಲಾಸೆಗೊಂಡಂತೆ ನ್ಯಾಯ ವಂಚಿತರಿಗೆ ನ್ಯಾಯ ದೊರಕಿಸುವ ಬಗ್ಗೆ ಮೋದಿ ಕನಿಷ್ಠ ಕಳವಳ ವ್ಯಕ್ತಪಡಿಸಲಿಲ್ಲ. ತನ್ನ ಹಿಂದಿನ ಮತ್ತು ಈಗಿನ ಆಡಳಿತಾವಧಿಯಲ್ಲಿ ದಲಿತ, ದಮನಿತರ ಮೇಲೆ ಹೆಚ್ಚುತ್ತಿರುವ ದಾಳಿ ದೌರ್ಜನ್ಯಗಳನ್ನು ತಡೆಗಟ್ಟುವ ಯಾವ ಯೋಜನೆಯನ್ನೂ ಘೋಷಿಸಲಿಲ್ಲ. ಯಾರಿಗೆ ಬಂತು? ಎಲ್ಲಿಗೆ ಬಂತು 47 ರ ಸ್ವಾತಂತ್ರ್ಯ!

ಕನ್ನಡಕ್ಕೆ : ನಾಗರಾಜ ನಂಜುಂಡಯ್ಯ



ಬಿಜೆಪಿ ನೇತೃತ್ವದ ಎನ್‌ಡಿಎ–2.0, ಸರ್ಕಾರವು ಮೇ 2019 ರಂದು ಅಧಿಕಾರಕ್ಕೆ ಬಂದ ನಂತರದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಜಾತಿ ತಾರತಮ್ಯಗಳು ತೀವ್ರವಾಗಿ ಹೆಚ್ಚಾಗಿವೆ. ಇದರ ವಿರುದ್ಧ ನಾವೆಲ್ಲರೂ ನಮ್ಮ ಆಕ್ರೋಶವನ್ನು ವ್ಯಕ್ತಪಡಿಸಬೇಕಾಗಿದೆ.

ಇದಕ್ಕೆ ಸಂಬಂಧಿಸಿದಂತೆ, ಇತ್ತೀಚೆಗೆ ಲೋಕ ಸಭೆಯಲ್ಲಿ ಮಂಡಿಸಲಾದ ವರದಿಯಲ್ಲಿ, ಕೇಂದ್ರ ಸರ್ಕಾರದ ಅಂಕಿ–ಅಂಶಗಳ ಪ್ರಕಾರ, 2019 ರ ಏಪ್ರಿಲ್ 1 ರಿಂದ 15 ರ ಜೂನ್ ನಡುವೆ ದಲಿತರ ಮೇಲೆ 99 ದೌರ್ಜನ್ಯಗಳ ಅಪರಾಧಗಳು ನಡೆದಿವೆ. ಜುಲೈ ನಲ್ಲಿಯೂ ಇಂತಹ ದೌರ್ಜನ್ಯಗಳ ಪ್ರಕರಣಗಳು ಮುಂದುವರಿದಿರುವುದನ್ನು ಕಂಡಿದ್ದೇವೆ.

ಕೆಲವು ಬರ್ಬರ ಘಟನೆಗಳು

ಮೇ–25: ಮಹಾರಾಷ್ಟ್ರ ರಾಜ್ಯದ ಮುಂಬಯಿ ನಗರದಲ್ಲಿರುವ 'ನಾಯರ್' ಆಸ್ಪತ್ರೆ ಯಲ್ಲಿ ಕೆಲಸ ಮಾಡುತ್ತಿದ್ದ ಪರಿಶಿಷ್ಟ ಪಂಗಡದ (ಎಸ್.ಟಿ), ಯುವ ಡಾಕ್ಟರ್ ಪಾಯಲ್ ತದ್ವಿ, ಅದೇ ಆಸ್ಪತ್ರೆಯ 3 ಹಿರಿಯ ಮಹಿಳಾ ವೈದ್ಯರು ಕೊಡುತ್ತಿದ್ದ ಜಾತಿ ತಾರತಮ್ಯದ ಕಿರುಕುಳದಿಂದಾಗಿ ಆತ್ಮಹತ್ಯೆಗೆ ಶರಣಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಮೊದ ಮೊದಲು ಇದೊಂದು, ಸಾಧರಣ ಆತ್ಮಹತ್ಯೆಯ ಪ್ರಕರಣವೆಂದು ಪೋಲೀಸ್‌ರು ಪರಿಗಣಿಸಿ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನ ಮಾಡಿದ್ದಾರೆ.

ಸಾರ್ವಜನಿಕ ರ ಆಕ್ರೋಶ ಮತ್ತು ಪ್ರತಿಭಟನೆಯ ನಂತರ, ಹಾಗೂ ಪಾಯಲ್ ಬರೆದಿಟ್ಟಿದ್ದ ಆತ್ಮಹತ್ಯೆ ಪತ್ರದ ಪೋಟೋ ಗ್ರಾಪ್– ನ ಛಾಯಾಚಿತ್ರ ಗಳನ್ನು ವಿಚಾರಣೆ ಸಂದರ್ಭದಲ್ಲಿ ಪರಿಶೀಲನೆ ಮಾಡಿದಾಗ ಕಂಡು ಬಂದ ವರದಿಯಂತೆ, ಸಾವಿಗೀಡಾದ ಡಾಕ್ಟರ್ ಪಾಯಲ್ ತದ್ವಿ, ಬುಡಕಟ್ಟು ಸಮುದಾಯಕ್ಕೆ ಸೇರಿದವಳಾದ್ದರಿಂದ, 3 ಮಂದಿ ಹಿರಿಯ ಮಹಿಳಾ ಸಹೋದ್ಯೋಗಿ ವೈದ್ಯರು, ಪಾಯಲ್‌ಳನ್ನು ಅನೇಕ ರೀತಿಯಲ್ಲಿ– ಜಾತಿ ತಾರತಮ್ಯದ ಹೆಸರಿನಲ್ಲಿ ಕಿರುಕುಳ ನೀಡುತ್ತಿದ್ದರು. ಇವಳಿಗೆ, ಹೆರಿಗೆ ಮಾಡಿಸಲು ಅಥವಾ ಮೇಲ್ಜಾತಿಯ ರೋಗಿಗಳನ್ನು ಪರೀಕ್ಷಿಸಲು ಸಹಾ, ಬಿಡುತ್ತಿರುಲಿಲ್ಲ ಜೊತೆಗೆ ನೀನು ಬುಡಕಟ್ಟು ಜನಾಂಗಕ್ಕೆ ಸೇರಿದ ಅಸ್ಪೃಶ್ಯೆ ಎಂದೆಲ್ಲಾ ಅವಮಾನಕರ ರೀತಿಯಲ್ಲಿ ನಡೆಸಿಕೊಂಡಿರುವುದು ತಿಳಿದು ಬಂದಿದೆ. ಇದೀಗ ಎಸ್.ಸಿ /ಎಸ್.ಟಿ ದೌರ್ಜನ್ಯ ಕಾಯಿದೆ ಅಡಿಯಲ್ಲಿ ಈ ಪ್ರಕರಣವನ್ನು ದಾಖಲಾತಿ ಮಾಡಲಾಗಿದೆ.

ಮೇ 26: ಆಂದ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿ, ಒಬ್ಬ ದಲಿತ ಬಾಲಕನನ್ನು, ಮಾವಿನ ಹಣ್ಣು ಕದ್ದ ಎಂಬ ಆರೋಪದ ಮೇಲೆ, ಅವನನ್ನು ಥಳಿಸಿ, ಕೊಲೆಗೈಯ್ಯಲಾಗಿದೆ. ಅವನು ಸತ್ತ ನಂತರ, ಆ ದೇಹವನ್ನು ಮರಕ್ಕೆ ನೇತು ಹಾಕಿ, ಆತ್ಮಹತ್ಯೆ ಎಂದು ಕೊಲೆಯನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಲಾಗಿದೆ. ಸಾರ್ವಜನಿಕ ಮತ್ತು ದಲಿತ ಸಂಘಟನೆಗಳ ಆಂದೋಲನದ ನಂತರ ಜಾತಿ ತಾರತಮ್ಯದ ಕೊಲೆ ಎಂದು ಪೋಲಿಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ.

ಜೂನ್ 03: ಪದವೀಧರ ದಲಿತ ಯುವಕ ಎ.ಎಸ್. ಪ್ರತಾಪ್, ರವರು ಗುಂಡ್ಲುಪೇಟೆ ತಾಲ್ಲೂಕಿನ ಶ್ಯಾನಾಂಡ್ರ ಹಳ್ಳಿಯವನು. ಈ ಪ್ರತಿಭಾಂವತ ಯುವಕ ಐ.ಎ.ಎಸ್. ಮಾಡಬೇಕೆಂಬ ಹಂಬಲ ಹೊಂದ್ದಿದನು. ಜೂನ್ 3 ರ ರಾತ್ರಿ ಮೈಸೂರಿನಿಂದ–ಗುಂಡ್ಲುಪೇಟೆಯ ಬಳಿ ಇರುವ ತನ್ನ ಗ್ರಾಮಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದಾಗ, ದಾರಿ ಮಧ್ಯದಲ್ಲಿ, ರಾತ್ರಿ ಬೈಕ್ ಹಾಳಾಗಿ ಕೈ ಕೊಟ್ಟಿತ್ತು. ಆ ಸಮಯದಲ್ಲಿ ಅಲ್ಲಿಗೆ ಬಂದ ಕೆಲವು ಕಿಡಿಗೇಡಿಗಳು, ಬೈಕ್ಕನ್ನು ಕಿತ್ತುಕೊಂಡು ಪ್ರತಾಪ್‌ನನ್ನು ಚೆನ್ನಾಗಿ ಮನ ಬಂದಂತೆ ಥಳಿಸಿ ಪರಾರಿಯಾದರು. ಅಲ್ಲಿಂದ ನಡೆದುಕೊಂಡು ಬಂದು, ಪಕ್ಕದಲ್ಲೇ ಇದ್ದ ವೀರನಪುರ ಗ್ರಾಮದ ಶನೇಶ್ವರ ದೇವಸ್ಥಾನದ ಕಟೆಕಟೆ ಮೇಲೆ ಪ್ರತಾಪ್‌ನು ಮಲಗಿದ್ದನು. ಬೆಳ್ಳಿಗ್ಗೆ ಬಂದ ದೇವಸ್ಥಾನದ ಅರ್ಚಕ ಶಿವಪ್ಪ ಪ್ರತಾಪ್‌ನನ್ನು ವಿಚಾರಿಸಿದಾಗ, ಅವನು ಹೊಲೆಯನೆಂದು ಗೊತ್ತಾಯಿತು. ತಕ್ಷಣ ಪೂಜಾರಿ ತನ್ನ ಸಂಬಂಧಿಕರು ಮತ್ತು ಊರಿನ ಕೆಲವರನ್ನು ಕರೆದು, ಪ್ರತಾಪ್‌ನನ್ನು ಮತ್ತಷ್ಟು ಥಳಿಸಿ, ಅವನ ಬಟ್ಟೆಗಳನ್ನು ಬಿಚ್ಚಿಸಿ, ಬೆತ್ತಲೆ ಗೊಳಿಸಿ, ಮೈಸೂರು–ಊಟಿ ರಸ್ತೆಯಲ್ಲಿ ಸುಮಾರು 3–4 ಕಿ.ಮೀ ನಷ್ಟು ದೂರ ಬೆಳ್ಳಂ ಬೆಳಗ್ಗೆ ಬೆತ್ತಲೆ ಮೆರವಣಿಗೆ ಮಾಡಿಸಿದ ಅಮಾನವೀಯ ಘಟನೆ ನಡೆದಿದೆ.



ಅವನು ದಲಿತನೆಂದು ಗೊತ್ತಿರಲಿಲ್ಲ ಹಾಗೂ ಅವನೊಬ್ಬ ಮಾನಸಿಕ ರೋಗಿಯೆಂದು ಸುದ್ದಿ ಹಬ್ಬಿಸಿ ಪ್ರಕರಣವನ್ನು ತಿರುಚಲಾಗಿದೆ. ಸಾರ್ವಜನಿಕರು ಹಾಗೂ ದಲಿತ ಸಂಘಟನೆಗಳು ನಡೆಸಿದ ಹೋರಾಟದಿಂದಾಗಿ ಮುಖ್ಯ ಆರೋಪಿ ಪೂಜಾರಿ ಶಿವಪ್ಪ ಹಾಗೂ ಇನ್ನಿತರೆ ಐದು ಜನರನ್ನು ಈ ಪ್ರಕರಣದಲ್ಲಿ ಬಂದಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಡಿಹೆಚ್‌ಎಸ್ ವತಿಯಿಂದ ಪ್ರತಿಭಟನೆ ನಡೆಸಿ, ಆರೋಪಿಗಳ ಬಂಧನಕ್ಕೆ ಹಾಗೂ ನೊಂದ ಪ್ರತಾಪ್‌ಗೆ ಸೂಕ್ತ ಪರಿಹಾರ ನೀಡಲು ಆಗ್ರಹಿಸಲಾಯಿತು. ದೌರ್ಜನ್ಯ ಕಾಯಿದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲೆ ಮಾಡಲಾಗಿದೆ.

ಜೂನ್ 15: ಗುಜರಾತ್ ರಾಜ್ಯದ ವಡೋದರದಲ್ಲಿ 7 ಮಂದಿ ಸ್ಯಾನಿಟೇಷನ್ – ನೈರ್ಮಲ್ಯದ ಕಾರ್ಮಿಕರು ಹೋಟಲೊಂದರ ಒಳಚರಂಡಿ ಯಲ್ಲಿ ಕೆಳಗೆ ಇಳಿದು ಸ್ವಚ್ಛಗೊಳಿಸುವಾಗ ಉಸಿರು ಗಟ್ಟಿಸಿಕೊಂಡು ಸಾವನ್ನಪ್ಪಿದ್ದಾರೆ. ಈ ರೀತಿ ಗುಜರಾತ್ ನಲ್ಲಿ ದಲಿತರು ಹೆಚ್ಚು ಹೆಚ್ಚು ಕೊಲ್ಲಲ್ಪಡುತ್ತಿರುವುದು ಸರ್ವೆ ಸಾಮಾನ್ಯ ವಾಗಿದೆ.

ಜೂನ್ 21: ಉತ್ತರ ಪ್ರದೇಶದ, ಕಾನ್ಪುರ ದಲ್ಲಿ,ಇಬ್ಬರು ನೈರ್ಮಲ್ಯ ಕಾರ್ಮಿಕರು ನವಾಮಿ ಗಂಗಾ ಯೋಜನೆಯ ಭಾಗವಾಗಿ ಒಳಚರಂಡಿ ಸ್ವಚ್ಛ ಗೊಳಿಸುವಾಗ ಸಾವನ್ನಪ್ಪಿದ್ದಾರೆ.

ಜೂನ್ 25: ದಲಿತ ಸಮುದಾಯಕ್ಕೆ ಸೇರಿದ ಸಿಪಿಐ(ಎಂ) ಸದಸ್ಯನನ್ನು, ತ್ರಿಪುರ ರಾಜ್ಯದ ಸಿಪಾಹಿಜಲ್ಲಾ ಜಿಲ್ಲೆಯಲ್ಲಿ ಬಿಜೆಪಿ ಗೂಂಡಾಗಳು ಹೀನಾಯವಾಗಿ ಹತ್ಯೆ ಗೈದಿದ್ದಾರೆ.

ಜೂನ್ 26: ದಲಿತ ವ್ಯಕ್ತಿ ಮತ್ತು ಅವನ ಮೇಲ್ಜಾತಿಯ ಪತ್ನಿ ತಮ್ಮ ಮದುವೆಯಾದ ಮೂರು ವರ್ಷಗಳ ನಂತರ, ತಮಗೆ ಹುಟ್ಟಿದ ಮಗುವಿನ ಜನನದ ನಂತರ, ಸಂತೋಷವನ್ನು ಹಂಚಿಕೊಳ್ಳಲು, ತನ್ನ ತವರೂರಾದ, ಆಂದ್ರ ಪ್ರದೇಶದ ಚಿತ್ತೂರು ಜಿಲ್ಲೆಯ, ತನ್ನ ಸ್ಥಳಿಯ ಗ್ರಾಮಕ್ಕೆ ಮಗುವಿನೊಂದಿಗೆ ಬೇಟಿ ಕೊಟ್ಟಾಗ, ದಂಪತಿಗಳಿಬ್ಬರನ್ನು ಆಕೆಯ ಕುಟುಂಬದ ಸದಸ್ಯರು ಸೇರಿಕೊಂಡು ನಿರ್ದಯವಾಗಿ ಕೊಂದು ಹಾಕಿದ ಹೃದಯ ವಿದ್ರಾವಕ ಘಟನೆ ನಡೆದಿದೆ.



ಜೂನ್ 27: ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ಸೆಪ್ಟಿಕ್ ಟ್ಯಾಂಕ್ ಸ್ವಚ್ಛ ಗೊಳಿಸುವಾಗ, ಮೂರು ನೈರ್ಮಲ್ಯ ಕಾರ್ಮಿಕರು ತಮಿಳುನಾಡಿನಲ್ಲಿ ಮೃತ ಪಟ್ಟಿದ್ದಾರೆ. ಅದೇ ದಿನ, ಹರಿಯಾಣದ ರೋಹ್ಟಕ್ನಲ್ಲಿ ಸೆಪ್ಟಿಕ್ ಟ್ಯಾಂಕ್ ಸ್ವಚ್ಛ ಗೊಳಿಸುವಾಗ 4 ಕಾರ್ಮಿಕರು ಸಾವನ್ನಪ್ಪಿದ್ದಾರೆ.

ಜುಲೈ ತಿಂಗಳೊಂದರಲ್ಲೇ, ತಮಿಳುನಾಡು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 6 ಕ್ರೂರ ಹಾಗೂ ಹಿಂಸಾತ್ಮಕ ಮರ್ಯಾದಾ ಕೊಲೆಗಳು ನಡೆದಿರುವುದು ವರದಿಯಾಗಿದೆ. ಎಲ್ಲಾ ಕೊಲೆಗಳಲ್ಲೂ, ಹೆಣ್ಣು ಅಥವಾ ಗಂಡು ದಲಿತರಾಗಿರುವುದು, ಈ ಮರ್ಯಾದಾ ಕೊಲೆಗಳಿಗೆ ಮೂಲ ಕಾರಣವಾಗಿದೆ.

ಜುಲೈ 2: ತ್ರಿಪುರದ ಬುಡಕಟ್ಟು ಮುಖಂಡ ಬುದ್ಧ್ ಕುಮಾರ್ ಎಂಬುವನನ್ನು, ಹಸುವನ್ನು ಕದಿಯುತ್ತಿದ್ದ ಎಂಬ ಕಾರಣಕ್ಕಾಗಿ, ಕೋಮು ಜಾಗರೂಕ ಸಂಘಟನೆಗೆ ಕೊಡಲಾಗಿತ್ತು. ದೂರಿನ ಆಧಾರದ ಮೇರೆಗೆ, ಸಂಘ ಪರಿವಾರದ, ಗೋ ಸಂರಕ್ಷಣಾ– ಹಾಗೂ ಕೋಮು ಜಾಗರೂಕ ಗುಂಪುಗಳು ಮಾಬ್ ಲಿಂಚಿಂಗ್ ಅಂದರೆ, ಗುಂಪಿನ ಮೂಲಕ ಬುಡಕಟ್ಟು ಮುಖಂಡನನ್ನು ಕೊಂದು ಹಾಕಿದ ಘಟನೆ ನಡೆದಿದೆ.

ಜುಲೈ 4: ಅಂತರ್ಜಾತಿ ವಿವಾಹ ವಾಗಿದ್ದ ಕಾರಣಕ್ಕೆ ತನ್ನ ದಲಿತ ಮಗಳನ್ನೇ, ಹ್ಯಾಕ್ ಮಾಡಿ ಕೊಂದಿದ್ದು ನಾನೇ ಎಂದು ತಂದೆ ಒಪ್ಪಿಕೊಂಡ ಪ್ರಕರಣ, ತಮಿಳುನಾಡಿನ ತೂತುಕುಡಿ ಜಿಲ್ಲೆಯಲ್ಲಿ ನಡೆದಿದೆ.

ಜುಲೈ 5–6: ಮದ್ಯರಾತ್ರಿ ನಡೆದ ಘಟನೆ: ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯ ಯೂನಿಯನ್ ಬ್ಯಾಂಕ್ ಗ್ರಾಹಕ ಆರೈಕೆ ಸೇವಾ ಕೇಂದ್ರದಿಂದ ಲೇಖನ ಸಾಮಾಗ್ರಿಗಳನ್ನು ಕದಿಯುತ್ತಿದ್ದ ಕಿಡಿಗೇಡಿ ಗುಂಪೊಂದು, ಅವರನ್ನು ತಡೆಯಲು ಬಂದ 3 ದಲಿತ ಯುವಕರನ್ನು ಅಂದಿನ ರಾತ್ರಿಯೇ ಥಳಿಸಿ ಹಲ್ಲೆ ನಡೆಸಿದ್ದಾರೆ.

ಜುಲೈ 6–7: ರಾಜಸ್ಥಾನದ ಚುರು ಜಿಲ್ಲೆಯ ಪೊಲೀಸ್ ಠಾಣೆಯಲ್ಲಿ, ದಲಿತ ಯುವಕನನ್ನು ಹಿಂಸಿಸಿ ಕೊಲ್ಲಲ್ಲಾಗಿದೆ. ಠಾಣೆಗೆ ಬಂದಿದ್ದ ಹುಡುಗನ ಅತ್ತಿಗೆಯನ್ನು ಪೊಲೀಸ್‌ರು ಕ್ರೂರವಾಗಿ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ.

ಜುಲೈ 8: 38 ವರ್ಷದ ದಲಿತ ವಿದ್ಯಾವಂತ ಮಹಿಳೆ, ತನ್ನ ಪತಿಯೊಂದಿಗೆ ದ್ವಿ ಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದಾಗ, ಕೆಲವು ಮೇಲ್ಜಾತಿಯ ಪುಂಡರು, ಹಾದಿ ಮಧ್ಯದಲ್ಲಿ, ವಾಹನವನ್ನು ಅಡ್ಡಗಟ್ಟಿ, ಆ ದಲಿತ ಮಹಿಳೆಯನ್ನು ಎಳೆದೊಯ್ದು, ಸಾಮೂಹಿಕವಾಗಿ ಅತ್ಯಾಚಾರ ಮಾಡಿದ್ದಾರೆ. ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಲು ಪತಿಯು ಹೋದಾಗ, ಅತ್ಯಾಚಾರ ವೆಸಗಿದವರು ಪ್ರಭಾವಿ ವ್ಯಕ್ತಿಗಳಾಗಿದ್ದ ಕಾರಣ, ಅವರ ಮೇಲೆ ಪ್ರಕರಣ ದಾಖಲೆ ಮಾಡಿಕೊಳ್ಳದೆ, ಪೊಲೀಸ್ ನವರು, ದೂರು ಸಲ್ಲಿಸಲು ಬಂದ್ದಿದ್ದ ವ್ಯಕ್ತಿಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿ, ಯಾರದ್ದೊ ಅಪರಿಚಿತರ ಮೇಲೆ ದೂರು ದಾಖಲಿಸಿದ್ದಾರೆ. ಉತ್ತರ ಪ್ರದೇಶದ, ಮೈನ್ ಪುರಿ ಯಲ್ಲಿ ಈ ಘಟನೆ ಸಂಭವಿಸಿದೆ.

ಜುಲೈ 8: ಗುಜರಾತ್ ರಾಜ್ಯದ, ಅಹಮದಾಬಾದ್‌ನ, ವರ್ಮೋರ್ ಗ್ರಾಮದಲ್ಲಿ ಸಂಭವಿಸಿದ ಒಂದು ಘಟನೆ, ದಲಿತ ಹರೇಶ್ ಅಂತರ್ ಜಾತಿ ವಿವಾಹವಾಗಿದ್ದ, ತನ್ನ ಎರಡು ತಿಂಗಳ ಗರ್ಭಿಣಿ ಹೆಂಡತಿಯನ್ನು ಅವಳ ತವರಿನ ಮನೆಯಿಂದ, ತನ್ನ ಮನೆಗೆ ಕರೆತರಲು ಹೋಗಿದ್ದಾಗ, ಹೆಂಡತಿಯ ಅಣ್ಣ–ತಮ್ಮಂದಿರು ಹಾಗೂ ಸಂಬಂಧಿಕರು ಸೇರಿಕೊಂಡು ದಲಿತ ಹರೇಶ್‌ನನ್ನು ಹೊಡೆದು ಕೊಂದು ಹಾಕಿದ್ದಾರೆ. ಇವನೊಂದಿಗೆ, ಮಹಿಳಾ ಕಾನ್ ಸ್ಟೇಬಲ್ ಕೂಡಾ ಜೊತೆಗಿದ್ದರು, ಆದರೂ ಸಹಾ, ಇವನನ್ನು ಹತ್ಯೆಗೈಯ್ಯಲಾಗಿದೆ. ಪೊಲೀಸ್‌ರು ಇದ್ದರು ಸಹಾ ಇವನ್ನನ್ನು ಉಳಿಸಲು ಸಾಧ್ಯವಾಗಲಿಲ್ಲ.

ಜುಲೈ 10: ಉತ್ತರ ಪ್ರದೇಶದ, ಬರೇಲಿಯಾ ಕ್ಷೇತ್ರದ ಬಿಜೆಪಿಯ, ದಲಿತ ಶಾಸಕ ರಾಜೇಶ್ ಮಿಶ್ರ, ಈ ಶಾಸಕನ ಪುತ್ರಿ ಸಾಕ್ಷಿ ಮಿಶ್ರಾ, ಮೇಲ್ಜಾತಿಯ ಅಜಿತೇಶ್ ಕುಮಾರ್ ಎಂಬುವರನ್ನು ಪ್ರೀತಿಸಿ ಮದುವೆ ಯಾಗಿದ್ದಳು. ಇವರಿಬ್ಬರಿಗೂ ಶಾಸಕ ತಂದೆ ರಾಜೇಶ್ ಹಾಗೂ ಅವನ ಅನುಯಾಯಿ ಗುಂಡಾಗಳು ಜೀವ ಬೆದರಿಕೆ ಹಾಕಿದ್ದರು. ತಮಗೆ ಎದುರಾಗಿದ್ದ, ಜೀವ ಭಯವನ್ನು ಇವರಿಬ್ಬರು, ಸಾಮಾಜಿಕ ಮಾದ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಕೊನೆಗೆ ಈ ವಿಡಿಯೋ ವೈರಲ್ ಆದ ನಂತರ ಇವರು, ಅಲಹಾಬಾದ್ ಹೈಕೋರ್ಟ್‌ನ ಗಮನಕ್ಕೆ ತಂದರು. ತಂದೆ ಎಂ.ಎಲ್.ಎ.ಯಿಂದ ಇವರನ್ನು ರಕ್ಷಿಸಬೇಕೆಂದು ಕೋರ್ಟ್ ಆದೇಶ ಹೊರಡಿಸಿತು. ಎಮ್‌ಎಲ್‌ಎ ಗೆ ಮುಖಭಂಗ ಉಂಟಾಯಿತು. ಪ್ರಕರಣವನ್ನು ದಾಖಲು ಮಾಡಲಾಗಿದೆ.

ಜುಲೈ 13: ತಮಿಳುನಾಡಿನ, ತಿರುನೆಲ್ವೇಲಿಯಾ ಜಿಲ್ಲೆಯಲ್ಲಿರುವ, ದಲಿತ ಸಮುದಾಯಕ್ಕೆ ಸೇರಿದ್ದ ಡಿವೈಎಫ್‌ಐ ನ ನಾಯಕ ಅಶೋಕ್‌ನೆಂಬ ಯುವಕನನ್ನು, ಮೇಲ್ಜಾತಿಯ ಗೂಂಡಾಗಳು ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ. ಈ ಪ್ರದೇಶದ ಸುತ್ತಾ–ಮುತ್ತಾ ವಾಸ ಮಾಡುತ್ತಿರುವ ದಲಿತ ಸಮುದಾಯವನ್ನು ಇಲ್ಲಿನ ಪ್ರಬಲ ಮಾರಾವಾರ್ ಜಾತಿ ಜನರು ವಿಶೇಷವಾಗಿ ದಲಿತ ಮಹಿಳೆಯರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ಅಶೋಕ್ ಡಿವೈಎಫ್‌ಐ ಮೂಲಕ ಇದನ್ನು ವಿರೋಧಿಸುತ್ತಿದ್ದನು. ಈ ಹಿನ್ನೆಲೆಯಲ್ಲಿ ಇವನ ಮೇಲೆ ಹಿಂದೆಯೂ ಸಾಕಷ್ಟು ಸಲ ಹಲ್ಲೆ ನಡೆಸಲಾಗಿತ್ತು. ಒಮ್ಮೆ ಇವನ ತಾಯಿಯೊಂದಿಗೆ ಇವನ ಮೇಲೆ ಹಲ್ಲೆ ನಡೆಸಿ, ತೀವ್ರ ತರದಲ್ಲಿ ಗಾಯಗೊಳಿಸಲಾಗಿತ್ತು. ಆಗ ಇವನು ನೀಡಿದ್ದ ದೂರನ್ನು ಪೊಲೀಸ್‌ರು ಗಂಭೀರವಾಗಿ ಪರಿಗಣಿಸಿರಲಿಲ್ಲ. ದಲಿತ ಮಹಿಳೆಯರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರೂ ಸಹಾ ಪೊಲೀಸ್‌ರು ಏನು ಕ್ರಮ ತೆಗೆದುಕೊಳ್ಳದ ಕಾರಣ, ಪ್ರಬಲ ಜಾತಿಯ ಜನರಿಗೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಿದಂತಾಗಿ, ಕೊನೆಗೆ ದಲಿತ ಅಶೋಕ್‌ನನ್ನು ಕೊಂದು ಹಾಕಿದ್ದಾರೆ.

ಜುಲೈ 15: ಆಂದ್ರಪ್ರದೇಶದಲ್ಲಿ ಎಸ್.ಸಿ ಹಾಸ್ಟೆಲ್ ಒಂದರಲ್ಲಿ, ದಲಿತ ಯವ ವಿದ್ಯಾರ್ಥಿಯೊಬ್ಬಳು, ಎಲೆಕ್ಟ್ರಿಕ್ ಶಾರ್ಟ್ ಸರ್ಕ್ಯೂಟ್ ನಿಂದ ಕೊಲ್ಲಲ್ಪಟ್ಟಿದ್ದಾಳೆ. ಹಾಸ್ಟೆಲ್‌ನಲ್ಲಿ ನಿರ್ವಹಣಾ ಮತ್ತು ನಿರ್ಲಕ್ಷ್ಯದ ಕಳಪೆ

ಪುಟ 14 ಕ್ಕೆ



ಸ್ವಾತಂತ್ರ್ಯದ ಮೇಲೆ ಪ್ರಹಾರಗಳು



ಈ ಆಗಸ್ಟ್ 15ರಂದು ಮೋದಿ–ಷಾ ಜೋಡಿಯ ಕಾಶ್ಮೀರ ಅತ್ಯಾಚಾರದ ಸಂದೇಶ

ವ್ಯಂಗ್ಯ ಚಿತ್ರ: ಪ್ರಕಾಶ್ ಶೆಟ್ಟಿ, ಪ್ರಜಾವಾಣಿ



ಮೋದಿ ಸರಕಾರ ಭಾರತದೊಂದಿಗೆ "ಜಮ್ಮು ಮತ್ತು ಕಾಶ್ಮೀರವನ್ನು ಸಮಗ್ರೀಕರಿಸಿರುವುದು" ತಮ್ಮ ಮಹಾಸಾಧನೆ ಎಂದು ಡಂಗುರ ಹೊಡೆಯುತ್ತಿದ್ದರೆ, ಅತ್ತ ಕಾಶ್ಮೀರದ ಜನತೆ, ಭಾರತದ ಇತರರೊಂದಿಗೆ ಹೋಲಿಸಿದರೆ ಸ್ವಾತಂತ್ರ್ಯದ ಅರ್ಥವಾದರೂ ಏನು ಎಂದು ಆಶ್ಚರ್ಯಪಡುವಂತಹ ವೈದೃಶ್ಯ ಕಣ್ಣಿಗೆ ರಾಚುತ್ತಿದೆ. ಸ್ವಾತಂತ್ರ್ಯ ಮತ್ತು ಗಣತಂತ್ರ ಸಂವಿಧಾನದೊಂದಿಗೆ ಬಂದಿರುವ ಸ್ವಾತಂತ್ರ್ಯಗಳು ಅಪಾಯದಲ್ಲಿವೆ. ಇದೀಗ ಮೋದಿ–ಷಾ ದ್ವಯರು ನಡೆಸಿರುವ ಕಾಶ್ಮೀರ ಅತ್ಯಾಚಾರ ನೀಡುತ್ತಿರುವ ಸಂದೇಶ. ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲಿನ ಈ ಕ್ರೂರ ಪ್ರಹಾರವನ್ನು ಉಪೇಕ್ಷಿಸಿದರೆ ಅದರಿಂದ ದೇಶದ ಇತರ ಭಾಗಗಳಿಗೂ ಕೇಡು ಸಂಭವಿಸುತ್ತದೆ.

ಪ್ರಕಾಶ ಕಾರಟ್

ಈ ವರ್ಷ ಸ್ವಾತಂತ್ರ್ಯ ದಿನಾಚರಣೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಚಿಂದಿ ಮಾಡಿರುವ, ಬೃಹತ್ ಪ್ರಮಾಣದಲ್ಲಿ ಕಣಿವೆಯ ಜನಗಳಿಗೆ ಬೀಗ ಜಡಿದಿರುವ ಮಬ್ಬಿನಲ್ಲಿ ನಡೆಯುತ್ತಿದೆ. ಕೆಂಪುಕೋಟೆಯಲ್ಲಿ ಈ ಆಗಸ್ಟ್ 15ರಂದು ನರೇಂದ್ರ ಮೋದಿ ತ್ರಿವರ್ಣ ಧ್ವಜವನ್ನು ಆರೋಹಿಸುವಾಗ, ಅತ್ತ ಲಕ್ಷಾಂತರ ಕಾಶ್ಮೀರಿಗಳು ಸತತವಾಗಿ ಹನ್ನೊಂದನೇ ದಿನ ತಮ್ಮ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಸಂಚರಿಸುವ, ತಮಗೆ ಬೇಕಾದವರನ್ನು ಸಂಪರ್ಕಿಸುವ, ಬದುಕು ನಡೆಸಲು ಕೆಲಸ ಮಾಡುವ, ಶಾಲೆಗೆ ಹೋಗುವ, ಆರೋಗ್ಯಪಾಲನೆ ಮತ್ತು ಔಷಧಿಗಳನ್ನು ಪಡೆಯುವ ಅವರ ಹಕ್ಕನ್ನು ಕಳಚಿ ಹಾಕಲಾಗಿದೆ. ಇವೆಲ್ಲವೂ ಸ್ವತಂತ್ರ ಭಾರತದ ನಾಗರಿಕರಾಗಿ ಇರುವ ಮೂಲಭೂತ ಹಕ್ಕುಗಳು.

ನೂರಾರು ಕಾಶ್ಮೀರಿ ರಾಜಕಾರಣಿಗಳು ಮತ್ತು ಕಾರ್ಯಕರ್ತರುಗಳು ಜೈಲುಗಳಲ್ಲಿದ್ದಾರೆ ಅಥವ ಗುಪ್ತಸ್ಥಳಗಳಲ್ಲಿ ಸ್ಥಾನಬದ್ಧತೆಯಲ್ಲಿದ್ದಾರೆ. ಹಲವರನ್ನು ಹೊರಗೊಯ್ದು ಆಗ್ರಾ, ಬರೇಲಿ, ಲಕ್ನೌ ಮುಂತಾದೆಡೆಗಳಲ್ಲಿ ಜೈಲುಗಳಲ್ಲಿ ಇಡಲಾಗಿದೆ. ಅವರೆಲ್ಲಿದ್ದಾರೆ ಎಂಬುದು ಯಾರಿಗೂ ತಿಳಿದಿಲ್ಲ, ಅವರ ಕುಟುಂಬದವರು, ಸಂಬಂಧಿಕರು ಅವರನ್ನು ಭೇಟಿ ಮಾಡಲು ಸಾಧ್ಯವಿಲ್ಲವಾಗಿದೆ.

ಮೋದಿ ಸರಕಾರ ಭಾರತದೊಂದಿಗೆ "ಜಮ್ಮು ಮತ್ತು ಕಾಶ್ಮೀರವನ್ನು ಸಮಗ್ರೀಕರಿಸಿರುವುದು" ತಮ್ಮ ಮಹಾಸಾಧನೆ ಎಂದು ಡಂಗುರ ಹೊಡೆಯುತ್ತಿದ್ದರೆ, ಅತ್ತ ಕಾಶ್ಮೀರದ ಜನತೆ, ಭಾರತದ ಇತರರೊಂದಿಗೆ ಹೋಲಿಸಿದರೆ ಸ್ವಾತಂತ್ರ್ಯದ ಅರ್ಥವಾದರೂ ಏನು ಎಂದು ಆಶ್ಚರ್ಯ ಪಡುವಂತಹ ವೈದೃಶ್ಯ ಕಣ್ಣಿಗೆ ರಾಚುತ್ತಿದೆ.

ಕಾಶ್ಮೀರಿಗಳಿಗೆ ಎಂತಹ ಅವಮಾನ ಮಾಡಲಾಗಿದೆ ಎಂಬುದು ಅವರನ್ನು ರಾಜಕೀಯ ಹಕ್ಕುಗಳನ್ನು ಕಸಿದುಕೊಂಡಿರುವ ರೀತಿಯಲ್ಲಿ ವ್ಯಕ್ತವಾಗುತ್ತದೆ. ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶದ ಮಟ್ಟಕ್ಕೆ ಇಳಿಸಿದ ನಂತರ, ಹೊಸ ವಿಧಾನಸಭೆ ಪುದುಚೇರಿಯ ಮಾದರಿಯಲ್ಲಿ ಇರುತ್ತದೆ, ಉಪರಾಜ್ಯಪಾಲರೆಂಬವರು ಹೇಳಿದ್ದೇ ಆಳ್ವಿಕೆಯಾಗುತ್ತದೆ. ಈ ಮೊಟಕುಗೊಳಿಸಿದ ವಿಧಾನ ಸಭೆಯ ಸಂಯೋಜನೆ ಕೂಡ ಬದಲಾಗಲಿದೆ. ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆಯ ಮಸೂದೆ ಮತಕ್ಷೇತ್ರಗಳ ಮರುವಿಂಗಡಣೆಗೆ ಅವಕಾಶ ಕಲ್ಪಿಸಿದೆ. ಇದನ್ನು ಚುನಾವಣಾ ಆಯೋಗ ಮಾಡುತ್ತದೆ. ಹಿಂದಿನ ವಿಧಾನಸಭೆಯ ಬಲ ಜಮ್ಮು ಮತ್ತು ಕಾಶ್ಮೀರ ವಿಭಾಗಗಳಿಂದ 83 ಆಗಿತ್ತು. ಅದನ್ನು 90ಕ್ಕೆ ಏರಿಸಲಾಗುತ್ತದೆ. ಈ ಮರುವಿಂಗಡಣೆಯ ಕಸರತ್ತಿನಲ್ಲಿ ಜಮ್ಮು ಭಾಗದ ಸೀಟುಗಳ ಸಂಖ್ಯೆ ಏರಲಿದೆ. ಹಿಂದಿನ ವಿಧಾನಸಭೆಯಲ್ಲಿ ಅದು 37 ಇತ್ತು. ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸೀಟುಗಳನ್ನು ಪತ್ರ್ಯೇಕಿಸಿದಾಗ, ಕಾಶ್ಮೀರ ಕಣಿವೆಗೆ ಉಳಿಯುವ ಸೀಟುಗಳ ಸಂಖ್ಯೆಯಲ್ಲಿ (ಇದುವರೆಗೆ 46) ಕಡಿತವಾಗುತ್ತದೆ. ಈ ಮೂಲಕ ವಿಧಾನಸಭೆಯಲ್ಲಿ ಬಿಜೆಪಿಗೆ ಬಹುಮತದ ಆಶ್ವಾಸನೆ ಸಿಗುವಂತಾಗುತ್ತದೆ. ಉಪರಾಜ್ಯಪಾಲರು ಇಬ್ಬರು ಮಹಿಳಾ ಸದಸ್ಯರನ್ನು ನೇಮಿಸಲು ಅವಕಾಶ ಇರುವುದು ಅದನ್ನು ಇನ್ನಷ್ಟು ಖಾತ್ರಿಗೊಳಿಸುತ್ತದೆ.


ಇನ್ನೊಂದು ಕುಟಿಲ ನಡೆಯೆಂದರೆ, ಕಾಶ್ಮೀರ ಕಣಿವೆಯಲ್ಲಿ ಜನಸಂಖ್ಯಾ ಸಂಯೋಜನೆಯಲ್ಲಿ ಒಂದು ಬದಲಾವಣೆ ತರುವುದು. ಆರ್ಥಿಕ ಅಭಿವೃದ್ಧಿ ಮತ್ತು ಹೂಡಿಕೆಯ ಹೆಸರಲ್ಲಿ, ಜಮ್ಮು ಮತ್ತು ಕಾಶ್ಮೀರದ ಹೊರಗೆ ಇರುವ ಜನಗಳು ಕಣಿವೆ ಪ್ರದೇಶಕ್ಕೆ ಬಂದು ಭೂಮಿ ಖರೀದಿಸಲು ಮತ್ತು ನೆಲೆಸಲು ಉತ್ತೇಜನೆ ನೀಡಲಾಗುವುದು. ಅದಾಗಲೇ 2016ರಲ್ಲಿ ಪಿಡಿಪಿ–ಬಿಜೆಪಿ ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಮಾಜಿ ಯೋಧರನ್ನು ವಸತಿ ಕಾಲೊನಿಗಳಲ್ಲಿ ನೆಲೆಗೊಳಿಸುವ ಒಂದು ಪ್ರಸ್ತಾವ ಇತ್ತು. ಅದಕ್ಕೆ ಭೂಮಿ ನೀಡುವ ಮಾತೂ ಇತ್ತು. ಕಾಶ್ಮೀರದ ಜನಸಂಖ್ಯಾ ಸಂಯೋಜನೆಯನ್ನು ಬದಲಾಯಿಸುವುದು ಅಥವ ಕಾಶ್ಮೀರಿ ಜನಗಳ ಅಸ್ಮಿತೆಯನ್ನು ದುರ್ಬಲಗೊಳಿಸುವುದು ಇದರ ಗುರಿ.

ಬಹಳ ಕಾಲದಿಂದ ಕಾಶ್ಮೀರಿ ಜನಗಳ ನಾಗರಿಕ ಸ್ವಾತಂತ್ರ್ಯಗಳ ದಮನ ಮತ್ತು ಪ್ರಭುತ್ವದ ದಬ್ಬಾಳಿಕೆ ರೂಢಿಯಾಗಿ ಬಿಟ್ಟಿರುವ ದೇಶದ ಇತರ ಭಾಗಗಳ ಜನರಿಗೆ ಜಮ್ಮು ಮತ್ತು ಕಾಶ್ಮೀರದಲ್ಲಿನ ಸನ್ನಿವೇಶ ಹದಗೆಡುತ್ತಿರುವ ಸನ್ನಿವೇಶದ ಮತ್ತೊಂದು ಅಧ್ಯಾಯ ಮಾತ್ರ, ಅದನ್ನು ಕೇಂದ್ರ ಸರಕಾರ ದೃಢವಾಗಿ ನಿಭಾಯಿಸುತ್ತಿದೆ ಎಂದು ಕಾಣಬಹುದು.

ಆದರೆ ಹೀಗೆ ಭಾವಿಸುವುದು ಒಂದು ಪ್ರಮಾದವಾಗುತ್ತದೆ. ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲಿನ ಈ ಕ್ರೂರ ಪ್ರಹಾರವನ್ನು ಉಪೇಕ್ಷಿಸಿದರೆ ಅದರಿಂದ ದೇಶದ ಇತರ ಭಾಗಗಳಿಗೂ ಕೇಡು ಸಂಭವಿಸುತ್ತದೆ. ಸರ್ವಾಧಿಕಾರಶಾಹಿ ಆಳ್ವಿಕೆ ಯಾರನ್ನೂ ಬಿಡುವುದಿಲ್ಲ–ಭಿನ್ನ ಅಭಿಪ್ರಾಯ ಇರುವವರನ್ನು, ಪ್ರತಿಪಕ್ಷಗಳಲ್ಲಿ ಇರುವವರನ್ನು, ಮತ್ತು ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚಲಾಯಿಸುವ ಯಾರನ್ನೂ.

ಸ್ವಾತಂತ್ರ್ಯ ಮತ್ತು ಗಣತಂತ್ರ ಸಂವಿಧಾನದೊಂದಿಗೆ ಬಂದಿರುವ ಸ್ವಾತಂತ್ರ್ಯಗಳು ಅಪಾಯದಲ್ಲಿವೆ. ಇದೀಗ ಮೊದಿ–ಷಾ ದ್ವಯರು ನಡೆಸಿರುವ ಕಾಶ್ಮೀರ ಅತ್ಯಾಚಾರ ನೀಡುತ್ತಿರುವ ಸಂದೇಶ.

ಸ್ವಾತಂತ್ರ್ಯ ದಿನದಂದು, ಕಳೆದ ಐದು ವರ್ಷಗಳ ಸರ್ವಾಧಿಕಾರಶಾಹಿ ಆಳ್ವಿಕೆ ಸಂವಿಧಾನದ ಅಡಿಯಲ್ಲಿರುವ ಎಲ್ಲ ಸಂಸ್ಥೆಗಳನ್ನು ಶಿಥಿಲಗೊಳಿಸುವ ದಾರಿಯಲ್ಲಿ ಸಾಗಿದೆ ಎಂಬುದನ್ನು ವೀಕ್ಷಿಸುವುದು ಕೂಡ ಉಚಿತವಾಗಿದೆ. ಇದರ ಒಂದು ಸಣ್ಣ ಉದಾಹರಣೆಯೆಂದರೆ, ಸುಪ್ರಿಂ ಕೋರ್ಟಿನ ಮೂವರು ನ್ಯಾಯಾಧೀಶರ ಪೀಠ ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕರ ಸ್ವಾತಂತ್ರ್ಯಗಳ ಮತ್ತು ಮೂಲಭೂತ ಹಕ್ಕುಗಳ ವ್ಯಾಪಕ ಪ್ರಮಾಣದ ಉಲ್ಲಂಘನೆಗಳನ್ನು ನಿಲ್ಲಿಸಲು ಮಧ್ಯಪ್ರವೇಶಿಸಲು ನಿರಾಕರಿಸಿರುವುದು.



ವ್ಯಂಗ್ಯಚಿತ್ರ ಕೃಪೆ: ದಿ ಹಿಂದು

ಸರ್ವಾಧಿಕಾರಶಾಹಿ ಆಳ್ವಿಕೆ ಯಾರನ್ನೂ ಬಿಡುವುದಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ, ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಣೆಯನ್ನು, ಹೆಚ್ಚೆಚ್ಚು ಜನಗಳನ್ನು ಅಣಿನೆರೆಸುವ ಮೂಲಕ ಮತ್ತು ಐಕ್ಯ ಜನಾಂದೋಲನಗಳ ಮೂಲಕ ಸಾಧಿಸಬೇಕಾಗಿದೆ. ಆಗಸ್ಟ್ 15, ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಗ್ಗೂಡಿಸಿ ಈ ಸಾವು–ಬದುಕಿನ ಸಾಹಸಕಾರ್ಯವನ್ನು ಕೈಗೆತ್ತಿಕೊಳ್ಳುವ ದೃಢನಿರ್ಧಾರ ಮಾಡುವ ದಿನವಾಗಿದೆ.

ಅವರು ಮೊದಲು ಕಲಮು 370ಕ್ಕೆ
ಬಂದರು, ನಾನು ಮಾತಾಡಲಿಲ್ಲ
–ಏಕೆಂದರೆ ನಾನು ಕಾಶ್ಮೀರಿಯಾಗಿರಲಿಲ್ಲ



ವ್ಯಂಗ್ಯಚಿತ್ರ: ಆರ್.ಪ್ರಸಾದ್

ಇಂತಹ ಒಂದು ಸನ್ನಿವೇಶದಲ್ಲಿ, ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಜೀವನಾಧಾರದ ಹಕ್ಕೂ ಸೇರಿದಂತೆ ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಣೆಯನ್ನು, ಹೆಚ್ಚೆಚ್ಚು ಜನಗಳನ್ನು ಅಣಿನೆರೆಸುವ ಮೂಲಕ ಮತ್ತು ಐಕ್ಯ ಜನಾಂದೋಲನಗಳ ಮೂಲಕ ಸಾಧಿಸಬೇಕಾಗಿದೆ. ಆಗಸ್ಟ್ 15, ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಗ್ಗೂಡಿಸಿ ಈ ಸಾವು–ಬದುಕಿನ ಸಾಹಸಕಾರ್ಯವನ್ನು ಕೈಗೆತ್ತಿಕೊಳುವ್ವ ದೃಢನಿರ್ಧಾರ ಮಾಡುವ ದಿನವಾಗಿದೆ.

●

ಬಂದ್, ಬಂದ್, ಬಂದ್, ಜನಗಳ ಖುಶಿಯೂ ಬಂದ್– ಹೀಗೆಂದು ಆರಂಭವಾಗುತ್ತದೆ ಆಗಸ್ಟ್ 9ರಿಂದ ಐದು ದಿನಗಳ ಕಾಲ ಕಾಶ್ಮೀರ ಕಣಿವೆಗೆ ಸತ್ಯಶೋಧನೆಗೆ ಭೇಟಿ ನೀಡಿರುವ ಸೌಹಾರ್ದ ತಂಡ ದೇಶದ ಮುಂದಿಟ್ಟಿರುವ ವರದಿಯ ವೀಡಿಯೋ. ಕೇಂದ್ರ ಸರಕಾರ ಮಾತ್ರವಲ್ಲ, ನಮ್ಮ ದೇಶದ ಕಾರ್ಪೊರೇಟ್ ಮಾಧ್ಯಮಗಳು ಮರೆಮಾಚುತ್ತಿರುವ ನಿಜಸಂಗತಿಗಳನ್ನು ಈ ವರದಿ ಬಯಲಿಗೆ ತಂದಿದೆ. ಕಾಶ್ಮೀರ ಕಣಿವೆ ಈಗ ಮಿಲಿಟರಿ ಹತೋಟಿಯಲ್ಲಿರುವ ಸೆರೆಮನೆಯಂತಾಗಿದೆ. ತಂತಮ್ಮ ಮನೆಗಳಲ್ಲೇ ಬಂಧಿಗಳಾಗಿದ್ದೇವೆ ಎಂಬ ಸಿಡಿಮಿಡಿ, ತಳಮಳ ಜನಗಳಲ್ಲಿವೆ. ಇದು ಯಾವಾಗ ಬೇಕಾದರೂ ಭುಗಿಲೇಳಬಹುದು ಎಂದು ತಂಡದ ಸದಸ್ಯರಿಗೆ ಅನಿಸಿದೆ. ಈ ಬಗ್ಗೆ ಒಂದು ವರದಿ.





ತಂಡ ಸೊಪೋರ್‌ಗೆ ಹೋಗುವ ದಾರಿಯಲ್ಲಿ ಕಂಡ ದೃಶ್ಯಗಳು–ಆಗಸ್ಟ್ 11



“ಪಂಜರದಲ್ಲಿ ಕಾಶ್ಮೀರ”

ಸತ್ಯಶೋಧನಾ ಸೌಹಾರ್ದ ತಂಡದ ವರದಿ





ಪತ್ರಿಕಾಗೋಷ್ಠಿಯಲ್ಲಿ ಮೈಮುನಾ ಮೊಲ್ಲ, ಜೀನ್ ಡ್ರೀಝ್, ಕವಿತಾ ಕೃಷ್ಣನ್ ಮತ್ತು ವಿಮಲ್‌ಭಾಯಿ; ಮೇಲಿನ ಚಿತ್ರ: ತಂಡ ಆಸ್ಪತ್ರೆಯಲ್ಲಿ ಕಂಡ ಪೆಲೆಟ್ ಗನ್ ಸಂತ್ರಸ್ತ

ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರ ಸರಕಾರ ತಂದ ಇತ್ತೀಚಿನ ಬದಲಾವಣೆಗಳು, ಅಂದರೆ ಸಂವಿಧಾನದ ಕಲಮು 370 ಮತ್ತು 35ಎ ನ್ನು ರದ್ದು ಮಾಡಿರುವುದು, ಅದರ ವಿಶೇಷ ಸ್ಥಾನಮಾನವನ್ನು ತೆಗೆದಿರುವುದು ಮಾತ್ರವಲ್ಲ, ರಾಜ್ಯದ ಸ್ಥಾನಮಾನವನ್ನೂ ತೆಗೆದು ಕೇಂದ್ರಾಡಳಿತ ಪ್ರದೇಶದ ಮಟ್ಟಕ್ಕೆ ಇಳಿಸಿದ್ದು ಆ ಪ್ರದೇಶಗಳ ಒಳಿತಿಗಾಗಿಯೇ, ಇವು ಅವರಿಗೆ ಅಪಾರ ಪ್ರಯೋಜನಗಳನ್ನು ತರಲಿವೆ ಎಂದು ರಾಷ್ಟ್ರಪತಿಗಳು ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನದ ತನ್ನ ಭಾಷಣದಲ್ಲಿ ದೇಶಕ್ಕೆ ಹೇಳಿದ್ದಾರೆ. ಪ್ರಧಾನ ಮಂತ್ರಿಗಳಂತೂ ಈ ಎರಡು ಕಲಮುಗಳು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಬೇಡಿಗಳಾಗಿದ್ದವು, ಅವರ ಅಭಿವೃದ್ಧಿಗೆ ತೊಡರುಗಳಾಗಿದ್ದವು, ಅವನ್ನು ಕಳಚಿ ಹಾಕಲಾಗಿದೆ ಎಂದು ಹೇಳುತ್ತಲೇ ಇದ್ದಾರೆ. ಕೆಂಪುಕೋಟೆಯಿಂದ ಅದನ್ನು ಪುನರುಚ್ಚರಿಸಿದ್ದಾರೆ. ಇದೊಂದು ಐತಿಹಾಸಿಕವಾದ ಧೀರ ಕ್ರಮ ಎಂದು ಹಾಡಿಹೊಗಳುತ್ತಿರುವ ಕಾರ್ಪೊರೇಟ್ ಮಾಧ್ಯಮಗಳು ಜಮ್ಮು ಮತ್ತು ಕಾಶ್ಮೀರದ ಜನಗಳು ಇದನ್ನು ಹಾಗೆಯೇ ಸ್ವೀಕರಿಸುತ್ತಿದ್ದಾರೆ ಎಂದು ಸಾರುತ್ತಿವೆ.

ಆದರೆ ಜತೆಗೇ ಅಲ್ಲಿನ ಮೂವರು ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ ಭಾರತದ ಪರವಾಗಿರುವ ರಾಜಕೀಯ ಪಕ್ಷಗಳೂ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ಪ್ರಮುಖ ಕಾರ್ಯಕರ್ತರುಗಳು ಗೃಹಬಂಧನದಲ್ಲಿದ್ದಾರೆ ಅಥವ ಜೈಲುಗಳಲ್ಲಿದ್ದಾರೆ ಎಂಬ ವರದಿಗಳೂ ಇವೆ. ಆಗಸ್ಟ್ 9ರಂದು ಶ್ರೀನಗರದಲ್ಲಿ ಸೌರಾ ಎಂಬಲ್ಲಿ ಸುಮಾರು 10,000 ಜನರು ಭಾಗವಹಿಸಿದ್ದ ಪ್ರತಿಭಟನೆಯೂ ನಡೆದಿದೆ, ಹಲವಾರು ಮಂದಿ ಮತ್ತೆ ಪೆಲೆಟ್ ಗುಂಡುಗಳಿಗೆ ಬಲಿಯಾಗಿ ಆಸ್ಪತ್ರೆಗಳಲ್ಲಿದ್ದಾರೆ ಎಂದೂ ವರದಿಯಾಗಿದ್ದು, ಮೊದಲಿಗೆ ಅದನ್ನು ನಿರಾಕರಿಸಿದ ಸರಕಾರ ಆಮೇಲೆ ಪರೋಕ್ಷವಾಗಿ ಒಪ್ಪಿಕೊಳ್ಳುತ್ತಿದೆ.

ತಮ್ಮ ಪಕ್ಷಗಳ ಮುಖಂಡರ, ಕಾರ್ಯಕರ್ತರ ಸ್ಥಿತಿ–ಗತಿಗಳನ್ನು ತಿಳಿಯಲು ಶ್ರೀನಗರ ತಲುಪಿದ ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳ ಮುಖಂಡರಾದ, ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಸಿಪಿಐನ ಪ್ರಧಾನ ಕಾರ್ಯದರ್ಶಿ ಡಿ.ರಾಜ ಅವರನ್ನು ವಿಮಾನ ನಿಲ್ದಾಣದಿಂದ ಹೊರಹೋಗಲೂ ಬಿಡಲಿಲ್ಲ. ಅವರ ವಿಮಾನ ಶ್ರೀನಗರದಲ್ಲಿ ಇಳಯುತ್ತಿದ್ದಂತೆ ವಿಮಾನದ ಎಲ್ಲ ಕಿಟಕಿಗಳನ್ನು ಮುಚ್ಚುವಂತೆ ಹೇಳಲಾಯಿತಂತೆ. ಸೀತಾರಾಮ್ ಯೆಚುರಿಯವರು ಈ ರಾಜ್ಯದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿಲ್ಲ ಎಂಬ ಇನ್ನೂ ಬಹಳಷ್ಟು ಸಂಕೇತಗಳು ಕಾಣ ಬಂದವು ಎಂದು ನಂತರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಈ ಹಿನ್ನೆಲೆಯಲ್ಲಿ ಸತ್ಯಶೋಧನೆಗೆ ಆಗಸ್ಟ್ 9ರಿಂದ ಐದು ದಿನಗಳ ಕಾಲ ರಾಜ್ಯಕ್ಕೆ ಭೇಟಿ ನೀಡಿರುವ ಸೌಹಾರ್ದ ತಂಡದ ವರದಿಯಿಂದ ಈಗ ಇದು ಸಂಪೂರ್ಣ ನಿಜ ಎಂಬುದು ಸ್ಪಷ್ಟವಾಗಿದೆ. ಅರ್ಥಶಾಸ್ತ್ರಜ್ಞ ಜೀನ್ ಡ್ರೀಝ್, ಸಿಪಿಐ(ಎಂ–ಎಲ್) ಮುಖಂಡರಾದ ಕವಿತಾ ಕೃಷ್ಣನ್, ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಮುಖಂಡರಾದ ಮೈಮುನಾ ಮೊಲ್ಲ ಮತ್ತು ರಾಷ್ಟ್ರೀಯ ಜನತಾ ಆಂದೋಲನಗಳ ಮೈತ್ರಿಕೂಟ(ಎನ್‌ಎಪಿಎಂ) ಮುಖಂಡರಾದ ವಿಮಲ್ ಭಾಯಿ ಇದ್ದ ಈ ತಂಡ ಇದುವರೆಗೆ ವಿಶೇಷ ಸ್ಥಾನಮಾನ ಹೊಂದಿದೆ ಎನ್ನಲಾದ ಈ ರಾಜ್ಯದ ರಾಜಧಾನಿ ಶ್ರೀನಗರ ಮಾತ್ರವಲ್ಲ ಶೋಪಿಯಾ, ಅನಂತನಾಗ್ ಜಿಲ್ಲೆಗಳ ಹಲವೆಡೆಗಳಲ್ಲಿ ಸಂಚರಿಸಿ ಕಾರ್ಪೊರೇಟ್ ಮಾಧ್ಯಮಗಳು ಮತ್ತು ಕೇಂದ್ರ ಸರಕಾರದ ಮುಖಂಡರು ಹೇಳುತ್ತಿರುವಂತೆ ಇಲ್ಲಿಯ ಜನಗಳಿಗೆ ಖಂಡಿತವಾಗಿಯೂ ಸಂತೋಷವಾಗಿಲ್ಲ, ಬದಲಿಗೆ, ಅವರು ಭೇಟಿ ಮಾಡಿದ ಎಲ್ಲರೂ ಆಕ್ರೋಶ ವ್ಯಕ್ತಪಡಿಸಿದರು ಎಂದರು. ಇದಕ್ಕೆ ಒಂದೇ ಒಂದು ಅಪವಾದವೆಂದರೆ ಬಿಜೆಪಿಯ ಕಾಶ್ಮೀರ

ಪುಟ 12ಕ್ಕೆ

ಈದ್‌ನ ದಿನದಂದು ಸೌಹಾರ್ದ ತಂಡ ಕಂಡ ಅನಂತನಾಗ್ ಮತ್ತು ಜಗ್ಬಲ್‌ದಲ್ಲಿನ ನಿರ್ಜನ ಬೀದಿಗಳು





ಸೌಹಾರ್ದ ತಂಡ ಕಂಡದ್ದು

- ಭಾರತ ಸರಕಾರದ ನಿರ್ಧಾರಗಳು ಮತ್ತು ಅವನ್ನು ಜಾರಿ ಮಾಡುತ್ತಿರುವ ರೀತಿಯ ಬಗ್ಗೆ ಕಣಿವೆಯ ಸುಮಾರಾಗಿ ಎಲ್ಲೆಡೆಗಳಲ್ಲಿ ತೀವ್ರ ಸಿಟ್ಟು ಇದೆ. ಅವು ಅನೈತಿಕ, ಅಸಾಂವಿಧಾನಿಕ ಮತ್ತು ಕಾನೂನು ಬಾಹಿರವಾಗಿವೆ ಎಂಬ ಭಾವನೆ ಸಾರ್ವತ್ರಿಕವಾಗಿದೆ.
- ತಂಡ ಭೇಟಿ ನೀಡಿದ ಪ್ರತಿ ಸ್ಥಳದಲ್ಲೂ ಶಾಲಾಮಕ್ಕಳಿಂದ ಹಿಡಿದು ವಯಸ್ಸಾದವರ ವರೆಗೂ ಕಾಶ್ಮೀರ ವಿವಾದದ ಬಗ್ಗೆ ಬಹಳಷ್ಟು ತಿಳಿದುಕೊಂಡಿರುವುದು ಕಂಡು ಬಂತು. ಆದ್ದರಿಂದ ಭಾರತದ ಮಾಧ್ಯಮಗಳು ಈ ಇತಿಹಾಸವನ್ನು ಮರೆಮಾಚಿರುವ ಬಗ್ಗೆ ಸಿಟ್ಟೂ ಕಂಡು ಬಂತು.
- ಸರಕಾರ ಕೇವಲ ಸೆಕ್ಷನ್ 144 ಹಾಕಲಾಗಿದೆ, ಕರ್ಫ್ಯೂ ಹಾಕಿಲ್ಲ ಎನ್ನುತ್ತದೆ. ಆದರೆ ವಾಸ್ತವವಾಗಿ ಜನಗಳ ಸಿಟ್ಟನ್ನು ಹತೋಟಿಯಲ್ಲಿಡಲು ಸರಕಾರ ಕರ್ಫ್ಯೂನಂತಹ ಪರಿಸ್ಥಿತಿಗಳನ್ನು ಹೇರಿದೆ. ಟೆಲಿಫೋನ್, ಮೊಬೈಲ್, ಇಂಟರ್ನೆಟ್ ಸಂಪರ್ಕಗಳ ಮೇಲೆ ನಿರ್ಬಂಧ ಹೇರಿದೆ.
- ಸರಕಾರ, ಸೇನೆ, ಅಥವ ಪೋಲೀಸ್‌ನಿಂದ ಕಿರುಕುಳದ ಭಯದಲ್ಲಿ ಜನ ಜೀವಿಸುತ್ತಿದ್ದಾರೆ. ಈ ಬಗ್ಗೆ ಅನೌಪಚಾರಿಕ ಮಾತುಕತೆಗಳಲ್ಲಿ ಸಿಟ್ಟನ್ನು ವ್ಯಕ್ತಪಡಿಸಿದರೂ ಯಾರೂ ಕ್ಯಾಮರಾ ಮುಂದೆ ಮಾತಾಡಲು ಸಿದ್ಧರಿಲ್ಲದಂತಹ ಭಯದ ವಾತಾವರಣ ಸೃಷ್ಟಿಯಾಗಿದೆ.
- ಸರಕಾರ ಹೇರಿರುವ ನಿರ್ಬಂಧಗಳು, ವಿಶೇಷವಾಗಿ ಸಮೃದ್ಧಿ ಮತ್ತು ಸಂತೋಷದ ಅಚರಣೆಯಾದ ಬಕ್ರೀದ್ ಸಮಯದಲ್ಲೂ, ಆರ್ಥಿಕ ಜೀವನವನ್ನು ಕುಂಠಿತಗೊಳಿಸಿವೆ.
- ಕಾಶ್ಮೀರದಲ್ಲಿ ಪರಿಸ್ಥಿತಿ ತ್ವರಿತವಾಗಿ ಸಾಮಾನ್ಯಗೊಳ್ಳುತ್ತದೆ ಎಂಬ ಭಾರತೀಯ ಮಾಧ್ಯಮಗಳ ದಾವೆಗಳು ದಾರಿ ತಪ್ಪಿಸುವಂತವು. ಇವು ಶ್ರೀನಗರದ ಆಯ್ದ ಭದ್ರ ಗೂಡುಗಳಿಂದ ಹೊಮ್ಮಿರುವ ದಾವೆಗಳಷ್ಟೇ.
- ಈಗಿರುವ ಪರಿಸ್ಥಿತಿಯಲ್ಲಿ, ಯಾವುದೇ ರೀತಿಯ ಪ್ರತಿಭಟನೆಗಳಿಗೆ, ಅವು ಎಷ್ಟೇ ಶಾಂತಿಯುತವಾಗಿದ್ದರೂ, ಅವಕಾಶವಿಲ್ಲ. ಆದರೆ, ಇಂದಲ್ಲ, ನಾಳೆ ಸಾಮೂಹಿಕ ಪ್ರತಿಭಟನೆಗಳು ಭುಗಿಲೇಳುವುದು ಖಂಡಿತ. ಅವು ಶಾಂತಿಯುತವಾಗಿದ್ದರೂ ಸರಕಾರ ದಮನಚಕ್ರಕ್ಕೆ ಇಳಯುತ್ತದೆ ಎಂಬುದು ಸಾಮಾನ್ಯವಾಗಿ ಕೇಳಬಂದ ಜನಾಭಿಪ್ರಾಯ.

ಸಿಐಟಿಯು ಸಾಮಾನ್ಯ ಕೌನ್ಸಿಲ್ ಸಭೆ

'ನಾವು ಕಾರ್ಮಿಕರು, ರಾಷ್ಟ್ರವನ್ನು ನಿರ್ಮಿಸುತ್ತೇವೆ, ರಕ್ಷಿಸುತ್ತೇವೆ ಇಂದೂ, ಎಂದೆಂದಿಗೂ



ಇದು ಆಗಸ್ಟ್ 7–10, 2019 ರಂದು ಕರ್ನಾಟಕದ ಹಾಸನದಲ್ಲಿ ನಡೆದ ಸಿಐಟಿಯು ಸಾಮಾನ್ಯ ಮಂಡಳಿಯ ಘೋಷಣೆಯಾಗಿತ್ತು. ಸಾಮಾನ್ಯ ಮಂಡಳಿಯು ತನ್ನ ಎಲ್ಲಾ ಸಂಯೋಜಿತ ಸಂಘಗಳಿಗೆ ಮತ್ತು ಸಮಿತಿಗಳಿಗೆ ಈ ಘೋಷಣೆಯನ್ನು ಸ್ವಾತಂತ್ರ್ಯ ದಿನದ ಮುನ್ನಾದಿನದಂದು ಆಗಸ್ಟ್ 14 ರ ರಾತ್ರಿಯಿಡೀ 'ಜಾಗರಣ' ಸಮಯದಲ್ಲಿ ಪ್ರಮುಖವಾಗಿ ಪ್ರದರ್ಶಿಸುವಂತೆ ಕರೆ ನೀಡಿತ್ತು.

ಆ ಸಂದರ್ಭದಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ತಮ್ಮ ಪೂರ್ವಜರು ಕನಸು ಕಂಡಿದ್ದ ಭಾರತವನ್ನು ಸಾಧಿಸುವ ಹೋರಾಟವನ್ನು ಮುಂದುವರೆಸಲು ಹತ್ತಾರು



ಸಾವಿರ ಕಾರ್ಮಿಕರು 'ನಾನು ಕನಸು ಕಾಣುವ ಭಾರತ' ಎಂಬ ಪ್ರತಿಜ್ಞೆಯನ್ನು ಕೈಗೊಳ್ಳಲಿದ್ದಾರೆ.

ಸಿಐಟಿಯುನ ಸಾಮಾನ್ಯ ಮಂಡಳಿಯು ಕಾರ್ಮಿಕ ವಿರೋಧಿ, ಜನ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಮೋದಿ 2 ಸರ್ಕಾರಕ್ಕೆ ಎಲ್ಲಾ ರಂಗಗಳಲ್ಲಿ ಸವಾಲು ಹಾಕುವುದು ಮತ್ತು ಅದರ ದಮನಕಾರಿ ನೀತಿಗಳನ್ನು ಬಲವಂತವಾಗಿ ಹಿಮ್ಮೆಟ್ಟಿಸುವುದು ಸಮಯದ ಅಗತ್ಯವಾಗಿದೆ ಎಂದು ಪ್ರತಿಪಾದಿಸಿತು. ಕೇಂದ್ರ ಬಿಜೆಪಿ ಸರ್ಕಾರದ ನವ ಉದಾರವಾದಿ ಆಳ್ವಿಕೆ ವಿರುದ್ಧ, ಕೋಮು ವಿಭಜಕ ಕಾರ್ಯಸೂಚಿಯ ವಿರುದ್ಧ ಮತ್ತು ಅದರ ದಮನಕಾರಿ, ಸರ್ವಾಧಿಕಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಕಾರ್ಯಾಚರಣೆಗಳ ವಿರುದ್ಧ ಜಂಟಿ ಮತ್ತು ಸ್ವತಂತ್ರ ಹೋರಾಟಗಳನ್ನು ಹೆಚ್ಚಿಸಲು ಪರಿಸ್ಥಿತಿ ಒತ್ತಾಯಿಸುತ್ತದೆ.

ಸಾಮಾನ್ಯ ಮಂಡಳಿಯ ಸಂಪೂರ್ಣ ಅವಧಿಯಲ್ಲಿ ಯಾವುದೇ ನಿಲುಗಡೆ ಇಲ್ಲದೆ ಹಾಸನದಲ್ಲಿ ಸುರಿದ ನಿರಂತರ ಮಳೆಗೆ ಸದಸ್ಯರ ಹೋರಾಟದ ಮನೋಭಾವವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ. ಸಭೆಯ ಸುಗಮ ನಡವಳಿಕೆಗೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ಮಾಡಲು ಶ್ರಮಿಸಿದ ಸ್ವಯಂಸೇವಕರ ಉತ್ಸಾಹವು ಪ್ರತಿಕೂಲ ಹವಾಮಾನದಿಂದಾಗಿ ಕುಗ್ಗಲಿಲ್ಲ.

ಸಿಐಟಿಯುನ ಸಾಮಾನ್ಯ ಮಂಡಳಿಯು ಸೆಪ್ಟೆಂಬರ್ 5, 2019 ರಂದು ಅಖಿಲ ಭಾರತ ಕಿಸಾನ್ ಸಭೆಯಿಂದ ಕರೆನೀಡಲಾದ ಪ್ರದರ್ಶನಗಳಲ್ಲಿ ಸೌಹಾರ್ದ ಬೆಂಬಲ ನೀಡಲು ಮತ್ತು ಪೂರ್ಣ ಬಲದೊಂದಿಗೆ ಭಾಗವಹಿಸಲು ನಿರ್ಧರಿಸಿತು. ಕಾರ್ಮಿಕ–ರೈತರ ಜಂಟಿ ಪ್ರದರ್ಶನಗಳನ್ನು ಸಾಧ್ಯವಾದಷ್ಟು ಕೇಂದ್ರಗಳಲ್ಲಿ / ಸ್ಥಳಗಳಲ್ಲಿ ಆಯೋಜಿಸಲು ಎಲ್ಲಾ ಸಿಐಟಿಯು ಸಮಿತಿಗಳು ಮುಂದಾಗಬೇಕೆಂದು ಅದು ಕರೆ ನೀಡಿದೆ.

ರಕ್ಷಣಾ ಉತ್ಪಾದನಾ ಘಟಕಗಳನ್ನು ಕಾರ್ಪೊರೇಟ್‌ಗಳಾಗಿ ಪರಿವರ್ತಿಸುವ ಮೋದಿ ಸರ್ಕಾರ 2 ರ ನಿರ್ಧಾರದ ವಿರುದ್ಧ 2019 ರ ಆಗಸ್ಟ್ 20 ರಿಂದ ರಕ್ಷಣಾ ನೌಕರರು 30 ದಿನಗಳ ಮುಷ್ಕರ ನಡೆಸುವ ನಿರ್ಧಾರವನ್ನು ಸಿಐಟಿಯು ಸಾಮಾನ್ಯ ಮಂಡಳಿ ಸ್ವಾಗತಿಸಿತು. ರಕ್ಷಣಾ ನೌಕರರಿಗೆ ಸಿಐಟಿಯು ತನ್ನ ಸೌಹಾರ್ದತೆಯನ್ನು ಘೋಷಿಸಿತು ಮತ್ತು ಸಾರ್ವಜನಿಕ ವಲಯವನ್ನು ಕೆಡವಲು ಮತ್ತು ವಿದೇಶಿ ಕಾರ್ಪೊರೇಟ್‌ಗಳ ಪರವಾಗಿ ನಮ್ಮ ಸ್ಥಳೀಯ ಉತ್ಪಾದನಾ ಸಾಮರ್ಥ್ಯವನ್ನು ನಾಶಮಾಡುವ ಕ್ರಮಗಳ ವಿರುದ್ಧದ ಹೋರಾಟಗಳಿಗೆ ಬೆಂಬಲವಾಗಿ ಎಲ್ಲಾ ವಲಯಗಳಿಂದ ಕಾರ್ಮಿಕರನ್ನು ವಿಶೇಷವಾಗಿ ಆರ್ಡನೆನ್ಸ್ ಕಾರ್ಖಾನೆಗಳು ಇರುವ ಸ್ಥಳಗಳಲ್ಲಿ ಇರುವ ಕಾರ್ಮಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಜ್ಜುಗೊಳಿಸಲು ಅದರ ಎಲ್ಲಾ ಘಟಕಗಳಿಗೆ ಕರೆ ನೀಡಿತು.

ಹೂಡಿಕೆ ಹಿಂಪಡೆತ, ಖಾಸಗೀಕರಣ, ಕಾರ್ಯವ್ಯೂಹಾತ್ಮಕ ಮಾರಾಟ ಇತ್ಯಾದಿಗಳ ಹೆಸರಿನಲ್ಲಿ ಉಕ್ಕು, ರೈಲ್ವೆ, ಬಿಎಸ್‌ಎನ್‌ಎಲ್ ಮತ್ತು ಇತರ ಸಾರ್ವಜನಿಕ ವಲಯದ ಘಟಕಗಳನ್ನು ದೇಶೀಯ ಮತ್ತು ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವುದರ ವಿರುದ್ಧ ಹೋರಾಡುವ ಕಾರ್ಮಿಕರ ಜೊತೆ ನಿಲ್ಲಲು ಸಹ ಸಿಐಟಿಯು ನಿರ್ಧರಿಸಿದೆ. ಉತ್ಪಾದನಾ ಘಟಕಗಳ ಕಾರ್ಪೊರೇಟ್‌ಕರಣ ಮತ್ತು ಪ್ರಮುಖ ಮಾರ್ಗಗಳಲ್ಲಿ ಖಾಸಗಿ ರೈಲುಗಳ ಪ್ರಾರಂಭವೂ ಸೇರಿದಂತೆ ರೈಲ್ವೆಯಲ್ಲಿನ ಸರ್ಕಾರದ 100 ದಿನಗಳ ಯೋಜನೆಗೆ ವಿರುದ್ಧವಾಗಿ ರೈಲ್ವೆ ನೌಕರರು ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಗಳನ್ನು ಒಳಗೊಂಡ ಸಮಾವೇಶಗಳನ್ನು ಆಯೋಜಿಸಲು ಸಾಮಾನ್ಯ ಮಂಡಳಿ ನಿರ್ಧರಿಸಿತು. ರೈಲ್ವೆಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಗ್ಗದ ಸಾರಿಗೆ ಸಾಧನವಾಗಿ ಬಳಸುವ ಸಾಮಾನ್ಯ ಜನರ ಮೇಲೆ ಸರ್ಕಾರದ ಈ ಯೋಜನೆಯ ಪರಿಣಾಮವನ್ನು ವಿವರಿಸುವ ವ್ಯಾಪಕ ಅಭಿಯಾನ ನಡೆಸಲು ನಿರ್ಧರಿಸಿದೆ.

ರೈಲ್ವೆ ನಿಲ್ದಾಣಗಳ ಮುಂದೆ ಪ್ರದರ್ಶನಗಳೂ ನಡೆಯಲಿವೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ತನ್ನ 'ಸುಧಾರಣೆಗಳು' ಪ್ರಕ್ರಿಯೆಯೊಂದಿಗೆ ಮುಂದುವರಿಯುತ್ತಿದೆ, ವಿದೇಶಿ ಹೂಡಿಕೆದಾರರನ್ನು 'ಸಂತೋಷ' ಪಡಿಸಲು ಮತ್ತು 'ವ್ಯವಹಾರವನ್ನು ಸುಲಭಗೊಳಿಸಲು' ಮತ್ತಷ್ಟು ಅನುಕೂಲವಾಗುವಂತೆ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವುದು, ಖಾಸಗೀಕರಣ ಮತ್ತು ಭೂಸ್ವಾಧೀನ ಮಾಡುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ಸಿಐಟಿಯು ಸಾಮಾನ್ಯ ಮಂಡಳಿಯು ದೇಶದಲ್ಲಿ ಕಾರ್ಮಿಕ ವರ್ಗವನ್ನು ಸೂಕ್ತ ಸಮಯದಲ್ಲಿ ಮುಷ್ಕರ ಸೇರಿದಂತೆ ಉತ್ತುಂಗದ ಜಂಟಿ ಹೋರಾಟಗಳಿಗೆ ಸಿದ್ಧಪಡಿಸಲು ವ್ಯಾಪಕ ಅಭಿಯಾನವನ್ನು ನಡೆಸಲು ನಿರ್ಧರಿಸಿತು, ಇದನ್ನು ಕಾರ್ಮಿಕ ಸಂಘಗಳ ಜಂಟಿ ಚಳವಳಿ ನಿರ್ಧರಿಸುತ್ತದೆ. 'ತಲುಪದವರನ್ನು ತಲುಪಿ' ಮತ್ತು 'ಧೋರಣೆಗಳೊಂದಿಗೆ ಸಮಸ್ಯೆಗಳನ್ನು ಜೋಡಿಸಿ ಮತ್ತು ಧೋರಣೆಗಳನ್ನು ನಿರ್ಧರಿಸುವ ರಾಜಕೀಯವನ್ನು ಬಯಲಿಗೆಳೆಯಿರಿ' ಎಂಬ ಕರೆಯನ್ನು ಸಿಐಟಿಯು ಪುನರುಚ್ಚರಿಸಿದೆ.

ಆಗಸ್ಟ್ 6 ರಂದು ಬೆಂಗಳೂರಿನಲ್ಲಿ ಸಾಮಾನ್ಯ ಮಂಡಳಿಯ ಸಭೆಗೆ ಒಂದು ದಿನ ಮುಂಚಿತವಾಗಿ ನಡೆದ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ (ಎಐಸಿಸಿಡಬ್ಲ್ಯುಡಬ್ಲ್ಯು – ಸಿಐಟಿಯು) ಸಭೆಯ ನಿರ್ಧಾರಗಳನ್ನು ಸಿಐಟಿಯು ಸಾಮಾನ್ಯ ಮಂಡಳಿ ಅನುಮೋದಿಸಿತು. ಎಐಡಿಡಬ್ಲ್ಯೂಎ ಮತ್ತು ಎಐಎಲ್‌ಯು ಜೊತೆಗೆ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ (ಪೋಶ್) ಕಾಯ್ದೆಯ ಒಂದು ರಾಷ್ಟ್ರೀಯ ಸಮಾವೇಶವನ್ನು ನಡೆಸಲು ಮತ್ತು ಮಹಿಳಾ ಕಾರ್ಮಿಕರ ವಿವಿಧ ಪ್ರಶ್ನೆಗಳ ಕುರಿತು ಒಂದು ರಾಷ್ಟ್ರೀಯ ಸೆಮಿನಾರ್ ನಡೆಸಲು ಅದು ನಿರ್ಧರಿಸಿತು. ಮಾರ್ಚ್ 8, 2020 ರಂದು ದೇಶಾದ್ಯಂತ ಬೃಹತ್ 'ಜೈಲು ಭರೋ' ಕಾರ್ಯಕ್ರಮಗಳಲ್ಲಿ ಪರಾಕಾಷ್ಠೆಯಾಗುವ ಮಹಿಳಾ ಕಾರ್ಮಿಕರ ನಿರ್ದಿಷ್ಟ ವಿಷಯಗಳ ಕುರಿತು ಎರಡು ತಿಂಗಳ ಅಭಿಯಾನ ನಡೆಸುವ ಎಐಸಿಸಿಡಬ್ಲ್ಯುಡಬ್ಲ್ಯು ಪ್ರಸ್ತಾಪವನ್ನು ಸಾಮಾನ್ಯ ಮಂಡಳಿಯು ಅನುಮೋದಿಸಿತು, ಅದರ ವಿವರಗಳನ್ನು ಸಿಐಟಿಯುನ 16 ನೇ ಸಮ್ಮೇಳನದಲ್ಲಿ ಅಂತಿಮಗೊಳಿಸಲಾಗುವುದು. ಸಿಐಟಿಯುನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ, ವರ್ಷದ ಅಂತ್ಯದ ವೇಳೆಗೆ ಒಂದು ಕೋಟಿ ಸದಸ್ಯತ್ವವನ್ನು ತಲುಪುವ ನಿರ್ಧಾರದ ಭಾಗವಾಗಿ. ಸಾಮಾನ್ಯ ಮಂಡಳಿಯು ಎಲ್ಲಾ ರಾಜ್ಯ ಸಮಿತಿಗಳಿಗೆ ತಮ್ಮ ಮಹಿಳಾ ಸದಸ್ಯತ್ವವನ್ನು ದ್ವಿಗುಣಗೊಳಿಸುವಂತೆ ಕರೆ ನೀಡಿತು.

ಸಿಐಟಿಯುನ ಹಾಸನ ಸಾಮಾನ್ಯ ಮಂಡಳಿ

ಪುಟ 11 ಕ್ಕೆ





ರಾಷ್ಟ್ರೀಯ ಕರಡು ಶಿಕ್ಷಣ ನೀತಿಯ ಎರಡು ಸೋಲುಗಳು: ಪ್ರೊ. ಪಟ್ನಾಯಕ್

ಈ ವರದಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ವೃತ್ತಿ ಅವಕಾಶಗಳ ಬೆಳವಣಿಗೆಗಳಿಗೆ, ಬಹು ಶಿಸ್ತೀಯ ಅಭ್ಯಾಸಕ್ಕೆ (ಹಿಂದುತ್ವವು ಈ ಪ್ರಯತ್ನವನ್ನು ಬುಡಮೇಲು ಮಾಡದಿದ್ದಲ್ಲಿ) ಹಾಗೂ ಉನ್ನತ ಶಿಕ್ಷಣವನ್ನು ವ್ಯವಸ್ಥಿತಗೊಳಿಸಲು ಕೆಲವು ಆಸಕ್ತಿದಾಯಕ ಸಲಹೆ ನೀಡಿದ್ದರೂ, ಎರಡು ಪ್ರಮುಖ ಕಾರಣಗಳಿಂದ ಸೋಲುತ್ತದೆ. ಒಂದು ಶಿಕ್ಷಣ ಕ್ಷೇತ್ರದ ಮೇಲೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು. ಎರಡನೇಯದು, ಬೂರ್ಜ್ವಾ ಚಿಂತನೆಯ ಶ್ರೇಷ್ಟತೆಯ ವಿಚಾರವನ್ನು ಯಾವುದೇ ಯೋಚನೆಯಿಲ್ಲದೆ, ಜಾತಿ ಮತ್ತು ಉಳಿದ ಹಲವು ಹೊರಗಿಡುವ ವಿಷಯಗಳಿಂದ ರೂಪುಗೊಂಡ ಸಂಕೀರ್ಣ ಸನ್ನಿವೇಶದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಹೊರಿಸುತ್ತಿರುವುದು.

ಅನು: ಎಂ.ಜಿ. ವೆಂಕಟೇಶ್

ಭಾರತವು, ಪೈಥಾಗೊರಸ್ ಪ್ರಮೇಯ ಅಥವಾ ಫೈಬೋನಾಸಿ ಸರಣಿಯಂತಹ, ಹಲವು ಮಹಾನ್ ಯೋಚನೆಗಳ ಜನ್ಮಸ್ಥಳವಾಗಿತ್ತು. ತಕ್ಷಶಿಲಾ ಮತ್ತು ನಳಂದಾದಂತಹ ಪ್ರಪಂಚದಲ್ಲೇ ಸಾಟಿಯಿಲ್ಲದ ವಿಶ್ವವಿದ್ಯಾನಿಲಯಗಳು ಇಲ್ಲಿದ್ದವು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳನ್ನು ಒಟ್ಟು ಸೇರಿಸಿದರೂ ಅವನ್ನು ಮೀರಿಸುವ ಸಾಹಿತ್ಯ ಸಂಸ್ಕೃತದಲ್ಲಿದೆ. ಇಂತಹ ವಿಷಯಗಳ ಬಗ್ಗೆ ಆತ್ಮ ಸಂತೃಪ್ತಿ ಪಡುವ ಧೋರಣೆ ಈ ವರದಿಯುದ್ದಕ್ಕೂಮುಖಕ್ಕೆ ರಾಚುತ್ತದೆ. ವರದಿಯಲ್ಲಿ ತಕ್ಷಶಿಲಾ ಮತ್ತು ನಳಂದಾ ಮಿಶನ್ ರಚಿಸಿ ಗತವೈಭವವನ್ನು ಮೆರೆಸಬೇಕೆಂಬ ಪ್ರಸ್ತಾಪ ಸಹ ಮಂಡನೆಯಾಗಿದೆ. ಇಲ್ಲಿ ಪ್ರಶ್ನೆಯಿರುವುದು ಈ ವಿಷಯಗಳ ಸತ್ಯಾಸತ್ಯತೆಯ ಬಗೆಗೆ ಅಲ್ಲ. ಬದಲಾಗಿ,ಭಾರತದ ಕೊಡುಗೆಯೂ ಸಾಕಷ್ಟು ಇರುವ ಪ್ರಸ್ತುತ ಮನುಕುಲದ ಅಗಾಧ ಸಾಧನೆಗಳ ಸನ್ನಿವೇಶದಲ್ಲಿ ಅದರ ಪರಿವೆಯೇ ಇಲ್ಲದೆ, ಭಾರತದ ಪ್ರಾಚೀನ ಗತ ವೈಭವವನ್ನುಪುನ: ಸ್ಥಾಪಿಸಬೇಕೆಂಬ ಮೊದ್ದು ಕೀಳರಿಮೆ ಈ ವರದಿಯಲ್ಲಿ ಹಾಸು ಹೊಕ್ಕಾಗಿರುವುದನ್ನು ಗಮನಿಸಬೇಕು.

ಇದರಲ್ಲಿನ ವಿಶೇಷವೆಂದರೆ, ಘೋರವಾದ ವರ್ಗ ದಬ್ಬಾಳಿಕೆ ಮತ್ತು ಅಸ್ಪೃಶ್ಯತೆಗಳುಸಾಂಪ್ರದಾಯಿಕ ಭಾರತದ ಸಾಮಾಜಿಕ ಜೀವನದ ಭಾಗವಾಗಿದ್ದರೂ, ಅದು ವರದಿಯಲ್ಲಿ ಎಲ್ಲೂ ಪ್ರಸ್ತಾಪವಾಗುವುದಿಲ್ಲ. ವಿದ್ಯಾರ್ಥಿಗಳ ಜತೆ ಚರ್ಚಿಸಬೇಕಾದ ಸಮಕಾಲೀನ ವಿಷಯಗಳಪಟ್ಟಿಯಲ್ಲಿ "ಸ್ವಚ್ಛ ಭಾರತ" ಬಹುಮುಖ್ಯವಾದುದೆಂದು ಪ್ರಸ್ತಾಪಿಸಲಾಗುತ್ತದೆ. ಆದರೆ ವರ್ಗ ದಬ್ಬಾಳಿಕೆ ಮತ್ತು ಅಸ್ಪೃಶ್ಯತೆಗಳು ಆ ಪಟ್ಟಿಯಲ್ಲೂ ಬರುವುದಿಲ್ಲ.


ಯಾರಾದರೂ ಊಹಿಸಬಹುದಾದಂತೆ ವಿದ್ಯಾರ್ಥಿಗಳಿಗೆ ಜೀವನ ಚರಿತ್ರೆಯನ್ನು ಪರಿಚಯಿಸಬೇಕಾದ ಭಾರತದ ಶ್ರೇಷ್ಟ ವ್ಯಕ್ತಿಗಳ ಪಟ್ಟಿಯಲ್ಲಿಜವಹರ್‌ಲಾಲ್ ನೆಹರು ಹೆಸರನ್ನು ಕೈಬಿಡಲಾಗಿದೆ. ಇಂತಹ ಅಸಮರ್ಪಕ ವರದಿಯನ್ನು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ತಯಾರಿಸಿರುವುದು ಅಚ್ಚರಿಯನ್ನು ತರುತ್ತದೆ.

ನಾವು ಈ ಎಲ್ಲ ವಿಷಯಗಳನ್ನು ಮರೆತು ಮುಖ್ಯ ವಿಷಯಗಳ ಮೇಲೆಗಮನ ಕೇಂದ್ರೀಕರಿಸೋಣ. ಈ ವರದಿಯ ಶಿಫಾರಸುಗಳಲ್ಲಿ ಈಗಾಗಲೇ ಬಹು ಚರ್ಚಿತವಾಗಿರುವ ವಿಷಯಗಳಲ್ಲಿ ಒಂದು, ಕಡ್ಡಾಯವಾಗಿ ಕಲಿಸಲು ಉದ್ದೇಶಿಸಿರುವ, ಸಂಸ್ಕೃತ ಸಹ ಒಂದು ಭಾಷೆಯಾಗಿ ಸೇರಿರಬಹುದಾದ ತ್ರಿಭಾಷಾ ಸೂತ್ರ. ಮಕ್ಕಳಿಗೆ ಭಾಷೆಗಳನ್ನು ಕಲಿಯುವ ಸಾಮರ್ಥ್ಯ ಸಾಕಷ್ಟಿದ್ದರೂ, ತ್ರಿಭಾಷಾ ಸೂತ್ರ ಹೇರಿಕೆ ಅನವ್ಯಶ್ಯಕವೆಂದು ಮತ್ತು 3ನೇ ಅಥವಾ 4ನೇ ಭಾಷಾ ಕಲಿಕೆ ಐಚ್ಛಿಕವಾಗಿರಬೇಕುಎಂದೂ ಹಲವರು ಪ್ರತಿಪಾದಿಸಿದ್ದಾರೆ. ಇಂಗ್ಲೀಷ್ ಮತ್ತು ಮಾತೃಭಾಷೆಗಳ (ಅಥವಾ ಅದರ ಸ್ಥಾನದಲ್ಲಿ ಇನ್ನೊಂದು ಭಾಷೆ) ಕಲಿಕೆಯು ಕಡ್ಡಾಯವಾಗಬೇಕಿದೆ.

ಈ ವರದಿಯಲ್ಲಿ ಇಂಗ್ಲೀಷ್ ಬಗ್ಗೆ ಗೋಸುಂಬೆತನವಿದೆ. ಇಂಗ್ಲೀಷ್ ಕಲಿತ ಗಣ್ಯವರ್ಗವು, ಎಲ್ಲ ನೌಕರಿಗಳಿಗೆ ಇಂಗ್ಲೀಷನ್ನು ಅವಶ್ಯವೆಂದು ಮಾಡಿರುವುದರ ಬಗ್ಗೆ ಆಕ್ರೋಶವಿದೆ. ಅದನ್ನು ಹೋಗಲಾಡಿಸಬೇಕೆಂದೂ ಅದು ಹೇಳುತ್ತದೆ. ಆದರೆ ವಿಜ್ಞಾನ ಸಂಬಂಧಿ ವಿಷಯಗಳ ಕಲಿಕೆಗೆ ಇಂಗ್ಲೀಷ್ ಅವಶ್ಯವೆಂದೂ ತಿಳಿಸುತ್ತದೆ. ಮಾತೃಭಾಷೆಯಲ್ಲಿನ ವೈಜ್ಞಾನಿಕ ಬರವಣಿಗೆಯು ಪ್ರಾದೇಶಿಕ ಪತ್ರಿಕೆಗಳಲ್ಲಿ ಬರುವ ಜನಪ್ರಿಯ ವೈಜ್ಞಾನಿಕ ಬರಹಕ್ಕೆ ಸೀಮಿತಗೊಂಡಿದೆ, ಎಂದು ಕಾಣಲಾಗಿದೆ.ವಿಜ್ಞಾನದ ವಿಷಯದ ಬಗ್ಗೆ ಹೇಳುವ ಇದು ಮಾನವಿಕ ಮತ್ತು ಸಮಾಜ ವಿಜ್ಞಾನಗಳ ವಿಷಯಕ್ಕೂ ಅನ್ವಯಿಸುತ್ತದೆ. ಇಂಗ್ಲೀಷ್ ಮಾತನಾಡುವ ಗಣ್ಯರ ಏಕಸ್ವಾಮ್ಯವನ್ನು ಒಡೆಯಬೇಕಾದರೆ, ಆ ಗುರಿ ಸಾಧುವಾದರೂ ಅದನ್ನು ಸಾಧಿಸಬೇಕಾದ್ದು, ಇಂಗ್ಲೀಷಿನ ಮಟ್ಟ ಇಳಿಸುವುದರಿಂದಲ್ಲ. ಅದರ ವ್ಯಾಪಕವಾದ ಮತ್ತು ಸಮರ್ಪಕವಾದ ಬೋಧನೆಯಿಂದ ಆಗಬೇಕಿದೆ. ಉಳಿದ ಸಾಮಾನ್ಯ ವಿಷಯಗಳನ್ನು ಮುಂದೆ ಗಮನಿಸೋಣ.

ಭಾಗ-1

"ಅಡುಗೆ ಮನೆಯಲ್ಲಿ ಏನು ಅಡುಗೆಯಾಗುತ್ತದೆ ಎಂಬುದು ಅಡುಗೆ ಮನೆಯಲ್ಲಿ ನಿರ್ಧಾರವಾಗುವುದಿಲ್ಲ." ಎನ್ನುತ್ತದೆ ಒಂದು ರಷ್ಯನ್ ಗಾದೆ. ಅಂತೆಯೇ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ನಡೆಯುತ್ತಿರುವ ಬೆಳವಣಿಗೆಗಳಲ್ಲಿ ಕೆಲವು ಮಾತ್ರ ಈ ಕ್ಷೇತ್ರದಲ್ಲಿ ಆಂತರಿಕವಾಗಿ ನಿರ್ಧಾರವಾಗುತ್ತವೆ.ಬಹುತೇಕ ಈ ವಿಷಯಗಳು ಆರ್ಥಿಕ ಮತ್ತು ಸಮಾಜದಲ್ಲಿನ ವಿದ್ಯಮಾನಗಳ ಫಲವಾಗಿರುತ್ತದೆ. ಉದಾಹರಣೆಗೆ, ಶಿಕ್ಷಣ ಕ್ಷೇತ್ರದ ಸರಕೀಕರಣ ಮತ್ತು ಅದರೊಂದಿಗಿನ ವಾಣಿಜ್ಯೀಕರಣ; ಈಗಾಗಲೇ ಸಂಕುಚಿತವಾಗಿರುವ ಉದ್ಯೋಗ ಮಾರುಕಟೆಯಲ್ಲಿ ಉದ್ಯೋಗ ಗಿಟ್ಟಿಸಲಿಕ್ಕಾಗಿ, ಎಲ್ಲರಿಗಿಂತ ಮುಂದೆ ಇರಲುಮಕ್ಕಳನ್ನು ಊರು ಹಚ್ಚಲು ಪೋಷಕರು ಪ್ರೇರೇಪಿಸುವುದು; ನಿರ್ದಿಷ್ಟ ಶಾಲೆಯಲ್ಲಿ ಸೀಟು ಪಡೆಯಲು ನೀಡುವ ಬೃಹತ್ ಕ್ಯಾಪಿಲೇಶನ್ ಶುಲ್ಕ ಕೊಡುವುದು; ಸಾರ್ವಜನಿಕ ಶಾಲೆಗಳಲ್ಲಿ ಇರುವ ಅಧ್ಯಾಪಕ ವರ್ಗ ಬಹುತೇಕ ತಾತ್ಕಾಲಿಕ ಹುದ್ದೆಗಳಾಗಿದ್ದು ಅವರು ನಿಗದಿಯಾದ ವೇತನಕ್ಕಿಂತ ಅತ್ಯಂತ ಕಡಿಮೆ ವೇತನ ಪಡೆಯುವುದು; – ಇಂತಹ ಪ್ರಸಕ್ತ ಶಿಕ್ಷಣ ಕ್ಷೇತ್ರವನ್ನು ಆವರಿಸಿರುವ ಅಸಂಖ್ಯಾತ ವಿಷಯಗಳು ಭಾರತದ ಆರ್ಥಿಕ ಕ್ಷೇತ್ರದ ನಡೆಗಳ ಫಲವಾಗಿರುತ್ತದೆ. ಮತ್ತು ಇದರ ಮೂಲದಲ್ಲಿರುವುದು ದೇಶ ಅನುಸರಿಸುತ್ತಿರುವ ನವ-ಉದಾರವಾದಿ ಬಂಡವಾಳಶಾಹಿ ನೀತಿಯ ಹಾದಿ. ದೇಶದ ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸುವಾಗ ನಾವು ಈ ಪ್ರಸ್ತಕ ಸನ್ನಿವೇಶವನ್ನು ಗಮನಿಸದಿದ್ದರೆ, ಡೆನ್ಮಾರ್ಕಿನ ರಾಜಕುಮಾರನಿಲ್ಲದೆ'ಹ್ಯಾಮ್ಲೆಟ್' ನಾಟಕವನ್ನು ಆಡಿದಂತಾಗುತ್ತದೆ. ಅದನ್ನೇ ಈ ವರದಿ ಮಾಡುತ್ತಿದೆ ಎಂದರೆ ತಪ್ಪಾಗಲಾರದು.



ಉದಾಹರಣೆಗೆ, ಮಕ್ಕಳನ್ನು ಶಾಲೆಗೆ ಕಳಿಸುವ ಮೊದಲು ಸಿದ್ಧ ಮಾಡುವ ವ್ಯವಸ್ಥೆಯಾದ 'ಮಕ್ಕಳ ಸಂರಕ್ಷಣೆ ಮತ್ತು ಪ್ರಾಥಮಿಕ ಶಿಕ್ಷಣ'ದ ಮೇಲಿನ ಒತ್ತನ್ನು ನೋಡಬಹುದು. ಅದರಲ್ಲಿ ಮಕ್ಕಳ ಸಂರಕ್ಷಣೆಗೆ ಒತ್ತು ನೀಡಿರುವುದು ಅಗತ್ಯ ಮತ್ತು ಸ್ವಾಗತಾರ್ಹ. ನಮ್ಮಲ್ಲಿನ ಪ್ರಾಥಮಿಕ ಸಂರಕ್ಷಣಾ ವ್ಯವಸ್ಥೆಯ ಪ್ರಮುಖ ಭಾಗ ಅಂಗನವಾಡಿ ವ್ಯವಸ್ಥೆ. ಆದರೆ ಅಂಗನವಾಡಿ ಕಾರ್ಯಕರ್ತರಿಗೆ ಸಿಗುತ್ತಿರುವುದು ಅತ್ಯಲ್ಪ ಸಂಬಳ ಮತ್ತು ಅವರನ್ನು ಸರ್ಕಾರಿ ಉದ್ಯೋಗಿಗಳೆಂದೂ ಪರಿಗಣಿಸುತ್ತಿಲ್ಲ. ಇಂತಹುದರಲ್ಲಿ ವರದಿಯಲ್ಲಿ ನಮೂದಿಸಿರುವ ಎಲ್ಲ ಸಂರಕ್ಷಣಾ ವ್ಯವಸ್ಥೆಯನ್ನು, ಅವರ ಸ್ಥಾನಮಾನಗಳಲ್ಲಿ ಬದಲಾವಣೆಯಾಗದೆಜಾರಿ ಮಾಡುವುದು ಹೇಗೆ ಸಾಧ್ಯವಾಗುತ್ತದೆ?

ವರದಿ "ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ" ಉದ್ದೇಶದ ಬಗ್ಗೆ ಮಾತನಾಡಿದರೂ, ಅದನ್ನು ನೀಡಲು ನವ ಉದಾರವಾದಿ ವ್ಯವಸ್ಥೆಯಲ್ಲಿ ಪ್ರಭುತ್ವ ಬಳಿ ಸಂಪನ್ಮೂಲದ ಕೊರತೆಯಿದೆ. ಆದರೆ ಅದನ್ನು ನೀಗಿಸಲು ಆ ವ್ಯವಸ್ಥೆಯಲ್ಲಿ ಶ್ರೀಮಂತರಿಗೆ ತೆರಿಗೆ ವಿಧಿಸುವಂತಿಲ್ಲ ಅಥವಾ ಅವರಿಂದ ಸಾಲ ಪಡೆಯುವಂತೆಯೂ ಇಲ್ಲ. ಆದ್ದರಿಂದ ಆ ಉದ್ದೇಶವನ್ನು ಈಡೇರಿಸಲುವಾಣಿಜ್ಯದ ಉದ್ದೇಶಕ್ಕಾಗಿಯೇ ಪ್ರಾರಂಭಿಸಲಾಗಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಅವಲಂಬಿಸಬೇಕಾಗುತ್ತದೆ. ಕೆಲವು ಉದಾರಿಗಳು ನಡೆಸುವ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಮತ್ತು ದುಡ್ಡು ಮಾಡಲು ಹೊರಟ ಸಂಸ್ಥೆಗಳನ್ನು ತಡೆಯುವ ವಿಷಯದ ಬಗ್ಗೆ ವರದಿ ಪ್ರಸ್ತಾಪಿಸಿದರೂ, ಅವುಗಳನ್ನು ನಿಯಂತ್ರಿಸುವ ವಿಧಾನದ ಬಗ್ಗೆ ವರದಿಯಲ್ಲಿ ಯಾವ ಸೂಚನೆಯೂ ಇಲ್ಲ. ಬದಲಾಗಿ ಖಾಸಗಿ ಸಂಸ್ಥೆಗಳು ತಮ್ಮ ಶುಲ್ಕವನ್ನು ತಾವೇ ನಿಗದಿಪಡಿಸಿಕೊಳ್ಳುವುದಕ್ಕೆ ಅನುವು ಮಾಡಿದ್ದು ಮತ್ತು ಅದನ್ನು ಹಣದುಬ್ಬರದಂತಹ ಕಾರಣವಿಲ್ಲದೇ ಹೆಚ್ಚಿಸುವಂತಿಲ್ಲ ಎಂಬ ನಿರ್ಬಂಧ ಮಾತ್ರವಿದೆ.ಸಾಮಾಜಿಕ ಶೈಕ್ಷಣಿಕ ಅವಕಾಶ-ವಂಚಿತ ಹಿನ್ನೆಲೆಯ ವಿದ್ಯಾರ್ಥಿಗಳನ್ನು ಅತ್ಯಂತ ದುಬಾರಿ ಶುಲ್ಕ ವಿಧಿಸುವ ಮೂಲಕ ತಮ್ಮ ಸಂಸ್ಥೆಗಳಿಂದ ದೂರವಿಡುವ ಹುನ್ನಾರದ ವಿರುದ್ಧ ವರದಿಯಲ್ಲಿ ಯಾವ ಕ್ರಮವಿದೆ?

ಖಾಸಗಿ ಸಂಸ್ಥೆಗಳ ಮೇಲೆ ಅವಲಂಬಿಸುವ ಕ್ರಿಯೆಯೇ ಪ್ರಭುತ್ವ ತನ್ನ ಜವಾಬುದಾರಿಯನ್ನು ಬಿಟ್ಟುಕೊಟ್ಟಂತಾಗಿರುತ್ತದೆ. ಉದಾರಿ ಸಂಸ್ಥೆಗಳನ್ನು ಪ್ರಾರಂಭಿಸುವುದನ್ನು ತಡೆಯಬಾರದು, ನಿಜ. ಅಲ್ಪ ಸಂಖ್ಯಾತಸಂಸ್ಥೆಗಳನ್ನು ನಡೆಸಲು ಸಾಂವಿಧಾನಿಕ ಹಕ್ಕಿರಬೇಕು, ನಿಜ. ಆದರೆ ಬಹುತೇಕ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಪೋಷಕರು ಸಹ ತಮ್ಮ ಮಕ್ಕಳು ಆಧುನಿಕ ಶಿಕ್ಷಣ ಪಡೆಯಬೇಕೆಂದು ಬಯಸುತ್ತಾರೆ ಹೊರತು ಮದರಸಾಗಳಲ್ಲಿ ಅಲ್ಲ ಅಥವಾ ಜಾತ್ಯಾತೀತ ಸಂಸ್ಥೆಗಳನ್ನೇ ಬಯಸುತ್ತಾರೆ ಹೊರತು ಧಾರ್ಮಿಕ ಸಂಸ್ಥೆಗಳು ನಡೆಸುವ ಶಾಲೆಗಳನ್ನಲ್ಲ. ಎಲ್ಲರಿಗೂ ನಿಲುಕುವ ಶಿಕ್ಷಣ ಒದಗಿಸುವ ಕರ್ತವ್ಯ ಪ್ರಭುತ್ವಕ್ಕಿದೆ.ಅದರಲ್ಲಿ ಭಾಗವಹಿಸದಿರುವ ಅಧಿಕಾರ ಜನತೆಗಿದೆ ನಿಜ. ಆದರೆ ಸರಕಾರ ಸ್ಥಾಪಿಸಿ ನಡೆಸುವ ಶಿಕ್ಷಣ ಸಂಸ್ಥೆಗಳು ಶಿಕ್ಷಣ ವ್ಯವಸ್ಥೆಯ ಮುಖ್ಯ ಆಧಾರವಾಗಿರಬೇಕು. ಈ ಅವಶ್ಯಕತೆಯನ್ನು ನೀಗಲು ಸಂಪನ್ಮೂಲ ಕ್ರೋಢೀಕರಿಸಬೇಕು. ವರದಿಯಲ್ಲಿ ಈ ಪ್ರಮುಖ ವಿಷಯದ ಪ್ರಸ್ತಾಪವೇ ಇಲ್ಲ.

ಇದೇ ರೀತಿಯಲ್ಲಿ ವಸ್ತುಸ್ಥಿತಿಯ ಅರಿವೇ ಇಲ್ಲದಂತೆ, ಶಿಕ್ಷಕರ ವೇತನದ ವಿಷಯದಲ್ಲೂ ವರದಿ ವರ್ತಿಸುತ್ತದೆ. ಇಂದು ಇರುವ ಅರೆಕಾಲಿಕ ಶಿಕ್ಷಕರ ಪಡೆ ಅತ್ಯಲ್ಪ ವೇತನ ಪಡೆದು ಪೂರ್ಣ ಪ್ರಮಾಣದ ಶಿಕ್ಷಕರು ಮಾಡಬೇಕಾಗಿದ್ದ ಕೆಲಸವನ್ನು ನಿರ್ವಹಿಸುತ್ತಿದೆ. ಇದರರ್ಥ ಸರ್ಕಾರ ವಿವಿಧ ಇಲಾಖೆಗಳಲ್ಲಿ ಹಣ ಉಳಿತಾಯ ಮಾಡುತ್ತಿದೆ. ಹೆಚ್ಚಿನ ಸಂಪನ್ಮೂಲಗಳನ್ನು ಶಿಕ್ಷಣ ರಂಗಕ್ಕೆ ನೀಡದಿದ್ದಲ್ಲಿ ಇದೇ ದುಸ್ಥಿತಿ ಮುಂದುವರೆಯುತ್ತದೆ. ಇದನ್ನು ಬದಲಿಸದೆ ವರದಿಯಲ್ಲಿಆಗಾಗ ಬಳಸುವ'ಅತ್ಯುತ್ಕೃಷ್ಟ ಶಿಕ್ಷಣ'ಅರ್ಥಹೀನ ಪದವಾಗಿರುತ್ತದೆ, ಅಷ್ಟೇ.

ವರದಿಯಲ್ಲಿ ಸಾರ್ವಜನಿಕ ವೆಚ್ಚದಲ್ಲಿ ಈಗಿರುವ ಶೇ. 10% ರಿಂದ ಶೇ% 20 ಕ್ಕೆ ಇನ್ನೂ ಹತ್ತು ವರ್ಷಗಳಲ್ಲಿ ಹೆಚ್ಚಿಸುವ ಪ್ರಸ್ತಾಪವೂ ಇದೆ. ತೆರಿಗೆ-ಜಿಡಿಪಿ ಪ್ರಮಾಣ ಹೆಚ್ಚದೆ ಇದು ಸಾಧ್ಯವಿಲ್ಲ. ಮತ್ತು ಇದು ಸಂಪತ್ತು ತೆರಿಗೆ ವಿಧಿಸದಿದ್ದರೆ ಸಾಧ್ಯವಾಗುವುದಿಲ್ಲ. ಈ ವಿಷಯದ ಬಗ್ಗೆ ವರದಿಯಲ್ಲಿ ಉಲ್ಲೇಖವೇ ಇಲ್ಲದಿರುವುದರಿಂದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಬೊಗಳೆ ಯೋಜನೆಗಳನ್ನು ಗಂಭೀರವಾಗಿ ಪರಿಗಣಿಸುವುದು ಅಸಾಧ್ಯ.

ಕಲಿಕೆಯಲ್ಲಿ ಉರುಹಚ್ಚುವ ವಿಧಾನವನ್ನು ತಪ್ಪಿಸಲು ಬೋರ್ಡ್ ಪರೀಕ್ಷೆಗಳನ್ನು ಸುಲಭ ಮಾಡಲು ವರದಿ ಹೊರಟಿದೆ. ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆಯಲು ಬೋರ್ಡ್ ಪರೀಕ್ಷೆಗಳನ್ನು ದಾಟಿ ಮುಂದೆ ಹೋಗಬೇಕಿರುತ್ತದೆ. ಬೋರ್ಡ್ ಪರೀಕ್ಷೆಗಳು ಸರಿಯಾದ ಮಾಪನ ಮಾಡದೆ ಇದ್ದರೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆಯಲು ಬೇರೆ ಯಾವುದಾದರೂ ವಿಧಾನವನ್ನು ಅನುಸರಿಸಬೇಕಾಗುತ್ತದೆ. ವರದಿಯಲ್ಲಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಮುಖಾಂತರ ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುವ ಟೆಸ್ಟ್ ಬಗ್ಗೆ ಪ್ರಸ್ತಾಪವಿದೆ. ವಿದ್ಯಾರ್ಥಿಗಳಿಗೆ ಈಗಿರುವ ನೌಕರಿ ಮಾರುಕಟ್ಟೆಯ ಒತ್ತಡ ಗಮನಿಸಿದರೆ ಎನ್.ಟಿ.ಎ. ಟೆಸ್ಟ್ ವಿದ್ಯಾರ್ಥಿಗಳು ಉರು ಹಚ್ಚುವ ಮತ್ತು ಹಚ್ಚಿರುವುದನ್ನು ಕಕ್ಕುವ ತಾಣವಾಗಲಿದೆ. ವರದಿಯು ಉರು ಹಚ್ಚುವ ಪ್ರವೃತಿಯನ್ನು ಬೋರ್ಡ್ ಪರೀಕ್ಷೆಯಿಂದ ಎನ್‌ಟಿಎ ಪರೀಕ್ಷೆಗೆ ಬದಲಾಯಿತ್ತದೆ, ಅಷ್ಟೇ.

ಶಿಕ್ಷಣ ಪದ್ಧತಿಯ ಬಗೆಗಿನ ವರದಿ ಸರ್ಕಾರಿ ಆರ್ಥಿಕ ನೀತಿಗಳಲ್ಲಿ ಬದಲಾವಣೆ ಸೂಚಿಸಬೇಕು ಎಂದು ನಿರೀಕಿಸಲಾಗುವುದಿಲ್ಲ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ನೀತಿ ಬದಲಾವಣೆ ಅರ್ಥಪೂರ್ಣವಾಗಬೇಕಾದರೆ ➔

ಸಿಐಟಿಯು ಸಾಮಾನ್ಯ ಕೌನ್ಸಿಲ್ ಸಭೆ........ ಪುಟ 9 ರಿಂದ

ಸಭೆಯಲ್ಲಿ ಪಧಾಧಿಕಾರಿಗಳು ಸೇರಿದಂತೆ 22 ರಾಜ್ಯಗಳ 355 ಸದಸ್ಯರು ಭಾಗವಹಿಸಿದ್ದರು. ಅವರಲ್ಲಿ 44 ಮಹಿಳೆಯರು. ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಅಧ್ಯಕ್ಷರು ಕಾಮ್ರೆಡ್ ಹೇಮಲತಾ ಅವರು ಸಿಐಟಿಯು ಧ್ವಜವನ್ನು ಹಾರಿಸುವುದರೊಂದಿಗೆ ಸಭೆ ಪ್ರಾರಂಭವಾಯಿತು.

ಸ್ವಾಗತ ಸಮಿತಿಯ ಗೌರವ ಅಧ್ಯಕ್ಷ ವಿಜಯ ಕುಮಾರ್ ಭಾಗವಹಿಸಿದವರನ್ನು ಸ್ವಾಗತಿಸಿದರು. ಉದ್ಘಾಟನಾ ಅಧಿವೇಶನದಲ್ಲಿ ಮೂರು ಪ್ರಮುಖ ನಿರ್ಣಯಗಳು – ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಂವಿಧಾನಿಕ ನಿರ್ವಹಣೆ ಒಕ್ಕೂಟ ತತ್ವ ಮತ್ತು ಪ್ರಜಾಪ್ರಭುತ್ವದ ಮೇಲೆ ಬಿಜೆಪಿ ಸರ್ಕಾರದ ಸರ್ವಾಧಿಕಾರಿ ದಾಳಿಯ ವಿರುದ್ಧ; ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿ ಮತ್ತು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧ; ಸರ್ವಾನುಮತದಿಂದ ಅಂಗೀಕರಿಸಲಾಯಿತು. ನಿರ್ಣಯಗಳನ್ನು ಕ್ರಮವಾಗಿ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಉಪಾಧ್ಯಕ್ಷ ಎ.ಕೆ. ಪದ್ಮನಾಭನ್ ಮತ್ತು ಕಾರ್ಯದರ್ಶಿ ಎ.ಆರ್. ಸಿಂಧು ಮಂಡಿಸಿದರು. ಇದಲ್ಲದೆ, ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ಗುಜರಾತ್‌ನ ಕೆಲವು ಭಾಗಗಳಲ್ಲಿ ಸಂಭವಿಸಿದ ವಿನಾಶಕಾರಿ ಪ್ರವಾಹದ ಕುರಿತು ನಿರ್ಣಯವನ್ನು ಅಂಗೀಕರಿಸಿ ಪ್ರವಾಹ ಪೀಡಿತ ಜನರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವಂತೆ ಕಾರ್ಮಿಕ ವರ್ಗಕ್ಕೆ ಕರೆ ನೀಡುವ ನಿರ್ಣಯವನ್ನು ಜಿ. ಸುಕುಮಾರನ್ ಮಂಡಿಸಿದರು ಮತ್ತು ಎಸ್. ವರಲಕ್ಷ್ಮಿ ಬೆಂಬಲಿಸಿದರು. ಇಬ್ಬರೂ ಸಿಐಟಿಯು ಉಪಾಧ್ಯಕ್ಷರು ಸಾಮಾನ್ಯ ಮಂಡಳಿಯು ನಿರ್ಣಯವನ್ನುಸರ್ವಾನುಮತದಿಂದಅಂಗೀಕರಿಸಿತು. ಸಿಐಟಿಯು ಖಜಾಂಚಿ ಎಂ.ಎಲ್. ಮಾಲ್ಕೋಟಿಯಾ ಸಂತಾಪ ನಿರ್ಣಯವನ್ನು ಮಂಡಿಸಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ವಾಡಿಕೆಯ ಸಭೆಗಳು ಮತ್ತು ಆಚರಣಾ ಭಾಷಣಗಳಿಗೆ ಇದು ಸಮಯವಲ್ಲ ಎಂದು ಕಾಮ್ರೆಡ್ ಹೇಮಲತಾ ಪ್ರತಿಪಾದಿಸಿದರು. ಮೋದಿ ಸರ್ಕಾರವು ಮೊಂಡುತನದಿಂದ ನವ ಉದಾರವಾದಿ ನೀತಿಗಳನ್ನು ಅನುಸರಿಸುತ್ತಿದೆ, ಅವು ಸಮರ್ಥನೀಯವಲ್ಲ ಎಂದು ವ್ಯಾಪಕವಾಗಿ ಸಾಬೀತಾಗಿದೆ ಮತ್ತು ಜಾಗತಿಕವಾಗಿ ಅಪಖ್ಯಾತಿಗೆ ಒಳಗಾಗಿವೆ. ಪ್ರಪಂಚದಾದ್ಯಂತ ಕಾರ್ಮಿಕ ವರ್ಗವು ಪರ್ಯಾಯಗಳಿಗಾಗಿ ಹುಡುಕಾಡುತ್ತಿದೆ ಮತ್ತು ಹೋರಾಡುತ್ತಿದೆ. ವ್ಯವಸ್ಥೆ ಪರ ಪಕ್ಷಗಳು ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿವೆ. ಕಾರ್ಮಿಕ ವರ್ಗದೊಂದಿಗೆ ದೃಢವಾಗಿ ನಿಂತಿರುವ ಕಡೆ ಎಡಪಂಥೀಯ ಶಕ್ತಿಗಳು ಮುನ್ನಡೆ ಸಾಧಿಸಿವೆ. ಅವರು ಚಂಚಲರಾಗಿದ್ದ ಸ್ಥಳದಲ್ಲಿ, ಬಲಪಂಥೀಯ ಶಕ್ತಿಗಳು ನೆಲೆಕಾಣುವಂತಾಗಿದೆ. ಭಾರತದಲ್ಲಿ, 'ಕಾರ್ಮಿಕ ವಿರೋಧಿ, ಜನ ವಿರೋಧಿ, ರಾಷ್ಟ್ರ ವಿರೋಧಿ' ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸುವ ಜಂಟಿ ಕಾರ್ಮಿಕ ಸಂಘಗಳ ಕರೆ ಕಾರ್ಮಿಕರ ಬೆಂಬಲವನ್ನು ಪಡೆಯಲಿಲ್ಲ, ಅವರು ಕೇವಲ ಕೆಲವು ತಿಂಗಳ ಹಿಂದೆ ನಡೆದ ಅಭೂತಪೂರ್ವ ಎರಡು ದಿನಗಳ 'ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಇದು 'ತಲುಪದವರನ್ನು ತಲುಪಲು' ನಮಗೆ ಎಷ್ಟು ಸಾಧ್ಯವಾಯಿತು ಮತ್ತು ಬಿಜೆಪಿಯ ರಾಜಕೀಯವನ್ನು ಚುನಾವಣೆಯಲ್ಲಿ ಬಹಿರಂಗಪಡಿಸಲು ಎಷ್ಟು ಪ್ರಯತ್ನಿಸಿದ್ದೇವೆ ಎಂಬುದರ ಕುರಿತು ಆತ್ಮಾವಲೋಕನ ಮಾಡಬೇಕಾಗುತ್ತದೆ. ಕಳೆದ ಸಾಮಾನ್ಯ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಸಂಘಟನೆಯ ಕುರಿತಾದ ಕೋಜಿಕೋಡ್ ದಸ್ತಾವೇಜಿನ ನಿರ್ದೇಶನಗಳನ್ನು ನಾವು ಮೈಗೂಡಿಸಿಕೊಂಡಿದ್ದೇವಾ ಎಂದು ನೋಡಲು ನಮ್ಮ ಕೆಲಸದ ವಿಧಾನಗಳನ್ನು ಸ್ವಯಂ ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಸಹ ಅಗತ್ಯವಾಗಿದೆ.

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಅವರು ದೇಶದ ಪರಿಸ್ಥಿತಿ ಮತ್ತು ಕಾರ್ಮಿಕ ವರ್ಗದ ಹೋರಾಟಗಳನ್ನು ವಿಸ್ತಾರವಾಗಿ ವಿಶ್ಲೇಷಿಸಿದರು. ಹಣಕಾಸು ಸಚಿವರು ಮಂಡಿಸಿದ ಬಜೆಟ್, ಕನಿಷ್ಠ ವೇತನವನ್ನು ನಿಗದಿಪಡಿಸುವ ನಿರ್ಲಜ್ಜ ವಿಧಾನ, ವೇತನ ಮಸೂದೆ ಅಂಗೀಕಾರ, ಮೋಟಾರು ವಾಹನಗಳ ಮಸೂದೆ, ಯುಎಪಿಎಗೆ ಮತ್ತು ಮಾಹಿತಿ ಹಕ್ಕು ಕಾಯ್ದೆ ತಿದ್ದುಪಡಿ ಇತ್ಯಾದಿಗಳು ಹೆಚ್ಚಿದ ಜನಾದೇಶದೊಂದಿಗೆ ಅಧಿಕಾರಕ್ಕೆ ಮರಳಿದ ಮೋದಿ 2 ಸರ್ಕಾರದ ದುರಹಂಕಾರ ಮತ್ತು ಆಕ್ರಮಣಶೀಲತೆಯನ್ನು ಪ್ರದರ್ಶಿಸುತ್ತವೆ ಎಂದು ಅವರು ಹೇಳಿದರು. ಮತ್ತಷ್ಟು ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್ ದಾಳಿಗಳು ತಯಾರಾಗುತ್ತಿವೆ ಎಂದು ಅವರು ಪ್ರತಿಪಾದಿಸಿದರು. ಕಾರ್ಮಿಕ ವರ್ಗದ ಮುಂದೆ ಇರುವ ಏಕೈಕ ಮಾರ್ಗವೆಂದರೆ ಇಡೀ ಕಾರ್ಮಿಕ ವರ್ಗವನ್ನು ಒಳಗೊಂಡಂತೆ ಎಲ್ಲಾ ಶ್ರಮಶೀಲ ವರ್ಗಗಳ ಸ್ವತಂತ್ರ ಮತ್ತು ಜಂಟಿ ಹೋರಾಟಗಳನ್ನು ತೀವ್ರಗೊಳಿಸುವುದು. ಸಿಐಟಿಯುನ ಸುವರ್ಣ ಮಹೋತ್ಸವ ಆಚರಣೆ ಮತ್ತು ದೇಶದ ಮೊದಲ ಕೇಂದ್ರ ಕಾರ್ಮಿಕ ಸಂಘಟನೆ ಎಐಟಿಯುಸಿಯ ಶತಮಾನೋತ್ಸವವನ್ನು ಜನರ ಏಕತೆ ಮತ್ತು ಸಮಗ್ರತೆಗೆ ದೊಡ್ಡ ಅಪಾಯವನ್ನುಂಟುಮಾಡುವ ಈ ಫ್ಯಾಸಿಸ್ಟ್ ಆಡಳಿತವನ್ನು ಸೋಲಿಸುವ ಹೋರಾಟಗಳನ್ನು ಹೆಚ್ಚಿಸಲು ಬಳಸಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದರು. ಮುಂದಿನ ಸವಾಲುಗಳನ್ನು ಎದುರಿಸಲು ಸಿಐಟಿಯು ದೇಶಾದ್ಯಂತ ಪ್ರಬಲ ಮತ್ತು ಸಮರಶೀಲ ಕಾರ್ಮಿಕರ ಸಂಘಟನೆಯಾಗಿ ಅಭಿವೃದ್ಧಿ ಹೊಂದಬೇಕಾಗಿದೆ. ವಿಸ್ತರಿಸುತ್ತಿರುವ ಸಿಐಟಿಯು ಪ್ರಭಾವವನ್ನು ಸಂಘಟನಾ ಶಕ್ತಿಯಾಗಿ ಪರಿವರ್ತಿಸಲು ಅದರ ಸದಸ್ಯತ್ವವನ್ನು ಹೆಚ್ಚಿಸುವ ಮೂಲಕ ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಕಾಶ್ಮೀರ ವಿಷಯದಲ್ಲಿ ಎಡಪಂಥೀಯ ನಾಯಕರ ಬಂಧನದ ಬಗ್ಗೆ ತಿಳಿದುಬಂದಾಗ ಸಾಮಾನ್ಯ ಮಂಡಳಿ ತನ್ನ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿತು. ಆಗಸ್ಟ್ 9 ರಂದು ಶ್ರೀನಗರ ವಿಮಾನ ನಿಲ್ದಾಣದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಅವರನ್ನು ಬಂಧಿಸಲಾಗಿತ್ತು. ವಿಸರ್ಜಿತ ಜೆ & ಕೆ ರಾಜ್ಯದ ಸಿಪಿಐ(ಎಂ) ಶಾಸಕ ಯೂಸುಫ್ ತಾರಿಗಾಮಿ ಅವರನ್ನು ಬೇಟಿಯಾಗಲು ಅವರಿಗೆ ಅವಕಾಶ ನೀಡಲಿಲ್ಲ. ಸಿಐಟಿಯು ರಾಜ್ಯ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ತಾರಿಗಾಮಿಯವರನ್ನು ಗೃಹಬಂಧನದಲ್ಲಿರಿಸಲಾಗಿತ್ತು. ಅವರ ಆರೋಗ್ಯ ಸರಿಯಾಗಿ ಇರಲಿಲ್ಲ. ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಸಾಮಾನ್ಯ ಮಂಡಳಿ ಸದಸ್ಯರು ಹಾಸನದ ಬೀದಿಯಲ್ಲಿ ಪ್ರಖರವಾದ ಪ್ರದರ್ಶನವನ್ನು ನಡೆಸಿದರು ಮತ್ತು ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಯ ವಿರುದ್ಧ ತೀವ್ರ ಕೋಪವನ್ನು ವ್ಯಕ್ತಪಡಿಸಿದರು.

ಪ್ರಧಾನ ಕಾರ್ಯದರ್ಶಿಯ ವರದಿಯ ಚರ್ಚೆಯಲ್ಲಿ 75 ಸಾಮಾನ್ಯ ಮಂಡಳಿ ಸದಸ್ಯರು ಭಾಗವಹಿಸಿದ್ದರು. ಅವರಲ್ಲಿ ಅನೇಕರು ಅಮೂಲ್ಯವಾದ ಸಲಹೆಗಳನ್ನು ನೀಡಿದರು. ಇದಲ್ಲದೆ, ಐದು ಮಂದಿ ಆಹ್ವಾನಿತರು ಕೂಡ ಸಭೆಯಲ್ಲಿ ಮಾತನಾಡಿದರು. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ ಅವರು ಸಾಮಾನ್ಯ ಮಂಡಳಿಗೆ ಶುಭಕೋರಿ ಕಳೆದ ವರ್ಷದ ಸೆಪ್ಟೆಂಬರ್ 5 ರ ಮಜ್ದೂರ್ ಕಿಸಾನ್ ಸಂಘರ್ಷ ರ‍್ಯಾಲಿಯ ನೆನಪಿಗಾಗಿ ದೇಶಾದ್ಯಂತ ಪ್ರದರ್ಶನಗಳನ್ನು ಆಯೋಜಿಸುವ ಎಐಕೆಎಸ್ ನಿರ್ಧಾರವನ್ನು ತಿಳಿಸಿದರು. ಜಂಟಿ ಕಾರ್ಯಾಚರಣೆಗಳನ್ನು ಮತ್ತಷ್ಟು ಬಲಪಡಿಸಬೇಕು ಮತ್ತು ಕಾರ್ಮಿಕ ವರ್ಗ ಮತ್ತು ರೈತರ ನಡುವಿನ ಒಗ್ಗಟ್ಟನ್ನು ಬಲಪಡಿಸಬೇಕೆಂದು ಅವರು ಒತ್ತಾಯಿಸಿದರು. ಅವರ ಸಂದೇಶವು ಸಾಮಾನ್ಯ ಮಂಡಳಿ ಸದಸ್ಯರಿಂದ ಅಪಾರ ಮೆಚ್ಚುಗೆಯನ್ನು ಪಡೆಯಿತು.

ಮೊದಲ ಬಾರಿಗೆ, ಬಂಗಾಳಿ, ಹಿಂದಿ, ಕನ್ನಡ, ಮಲಯಾಳಂ, ತಮಿಳು ಮತ್ತು ತೆಲುಗು ಎಂಬ ಆರು ಭಾಷೆಗಳಲ್ಲಿ ಏಕಕಾಲದಲ್ಲಿ ಅನುವಾದವನ್ನು ಸಾಮಾನ್ಯ ಮಂಡಳಿ ಸಭೆಯಲ್ಲಿ ಪ್ರಾಯೋಗಿಕವಾಗಿ ಪ್ರಯತ್ನಿಸಲಾಯಿತು. ಕೆಲವು ಆರಂಭಿಕ ಅನಾನುಕೂಲತೆಗಳ ಹೊರತಾಗಿಯೂ, ಇದು ಹೆಚ್ಚು ಕಡಿಮೆ ಯಶಸ್ವಿಯಾಯಿತು ಮತ್ತು ಸದಸ್ಯರು ಈ ಪ್ರಯತ್ನವನ್ನು ಮೆಚ್ಚಿ ಚೆನ್ನೈನಲ್ಲಿ ನಡೆಯಲಿರುವ ಸಿಐಟಿಯು ಸಮ್ಮೇಳನದಲ್ಲಿ ಅದನ್ನು ಮುಂದುವರಿಸಲು ವಿನಂತಿಸಿದರು.

ತಪನ್ ಸೇನ್ ಚರ್ಚೆಯನ್ನು ಸಮಾರೋಪಗೊಳಿಸಿದ ನಂತರ ಮತ್ತು ಚರ್ಚೆಯ ಸಂದರ್ಭದಲ್ಲಿ ಎದ್ದ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿದ ನಂತರ, ಸಾಮಾನ್ಯ ಮಂಡಳಿಯು ಪ್ರಧಾನ ಕಾರ್ಯದರ್ಶಿಯ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಸಿಐಟಿಯು ಕಾರ್ಯದರ್ಶಿ ಮಂಡಳಿಯ ಪ್ರಸ್ತಾವನೆಗೆ ಅನುಗುಣವಾಗಿ ತಪನ್ ಸೇನ್ ಅವರು ಮಂಡಿಸಿದ ತಕ್ಷಣದ ನಿರ್ದಿಷ್ಟ ಕರ್ತವ್ಯಗಳನ್ನು ಮತ್ತು ಮಾಲ್ಕೋಟಿಯಾ ಮಂಡಿಸಿದ ಲೆಕ್ಕಪತ್ರದ ಹೇಳಿಕೆಯನ್ನು ಸಹ ಸರ್ವಾನುಮತದಿಂದ ಅಂಗೀಕರಿಸಲಾಯಿತು.

2020 ರ ಜನವರಿ 23–27ರ ವರೆಗೆ ಚೆನ್ನೈನಲ್ಲಿ ನಡೆಯಲಿರುವ ಸಿಐಟಿಯುನ 16 ನೇ ಸಮ್ಮೇಳನಕ್ಕೆ ಸಂಬಂಧಿಸಿದ, ತಪನ್ ಸೇನ್ ಅವರು ಮಂಡಿಸಿದ ಪ್ರಸ್ತಾಪಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಹಿರಿಯ ಟ್ರೇಡ್ ಯೂನಿಯನ್ ಮುಖಂಡ ಮತ್ತು ಸಿಐಟಿಯು ಮಾಜಿ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಅಮೀನ್ ಅವರ ಸ್ಮರಣಾರ್ಥ ಸಮ್ಮೇಳನದ ಸ್ಥಳಕ್ಕೆ 'ಮಹಮ್ಮದ್ ಅಮೀನ್ ನಗರ' ಎಂದು ಹೆಸರಿಸಲಾಗುವುದು; ಟ್ರೇಡ್ ಯೂನಿಯನ್ ಚಳವಳಿಯ ಹಿರಿಯ ಇತಿಹಾಸಕಾರ, ರಾಜ್ಯ ಸರ್ಕಾರಿ ನೌಕರರ ಮುಖಂಡ ಮತ್ತು ಸಿಐಟಿಯು ಮಾಜಿ ಉಪಾಧ್ಯಕ್ಷ ಸುಕೋಮಲ್ ಸೇನ್ ನೆನಪಿನಲ್ಲಿ ಸಮ್ಮೇಳನದ ವೇದಿಕೆಗೆ 'ಸುಕೋಮಲ್ ಸೇನ್ ಮಂಚ್' ಎಂದು ಹೆಸರಿಸಲಾಗುವುದು. ಸಾರ್ವಜನಿಕ ಸಭೆಯ ಸ್ಥಳಕ್ಕೆ 1923 ರ ಮೇ 1 ರಂದು ಚೆನ್ನೈನಲ್ಲಿ ಭಾರತದ ಮೊದಲ ಮೇ ದಿನವನ್ನು ಆಚರಿಸಿದ ಸಿಂಗಾರವೇಲು ಅವರ ಹೆಸರನ್ನು ಇಡಲಾಗುವುದು.

ತಮ್ಮ ಸಮಾರೋಪ ಭಾಷಣದಲ್ಲಿ ಕಾಮ್ರೆಡ್ ಹೇಮಲತಾರವರು ಸ್ವಾಗತ ಸಮಿತಿ, ಅನುವಾದಕರು, ಸಾಂಸ್ಕೃತಿಕ ತಂಡ ಮತ್ತು ಎಲ್ಲಾ ಸ್ವಯಂಸೇವಕರಿಗೆ ಅವರ ಅತ್ಯುತ್ತಮ ವ್ಯವಸ್ಥೆ ಮತ್ತು ಕಠಿಣ ಪರಿಶ್ರಮಕ್ಕಾಗಿ ಧನ್ಯವಾದ ಅರ್ಪಿಸಿದರು. ಸಿಐಟಿಯುನ ಅಂತಿಮ ಸಾಂವಿಧಾನಿಕ ಉದ್ದೇಶದ ಹಿನ್ನೆಲೆಯಲ್ಲಿ, ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಭಾವವನ್ನು ಮನದಲ್ಲಿರಿಸಿಕೊಳ್ಳಬೇಕೆಂದು ಅವರು ಎಲ್ಲಾ ಸಾಮಾನ್ಯ ಮಂಡಳಿ ಸದಸ್ಯರನ್ನು ಕೋರಿದರು. ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು ಎಂದು ಅವರು ಒತ್ತಿ ಹೇಳಿದರು.

➔ ಆರ್ಥಿಕ ನೀತಿಯಲ್ಲಿ ಬದಲಾವಣೆಯ ಅವಶ್ಯಕತೆಯಿದೆ. ನಿರುದ್ಯೋಗ ದಾಖಲೆ ಪ್ರಮಾಣದಲ್ಲಿ ಹೆಚ್ಚಿರುವಾಗ ಮತ್ತು ವಿದ್ಯಾರ್ಥಿಗಳು ಧೃತಿಗೆಟ್ಟಿರುವಾಗ ಶಿಕ್ಷಣ ಕ್ಷೇತ್ರದಲ್ಲಿ 'ಉತ್ಕೃಷ್ಟತೆ' ಬಗ್ಗೆ ಜಪಿಸುವುದು ಅರ್ಥಹೀನ.

ಶಿಕ್ಷಣದಲ್ಲಿ ಬಹು–ಶಿಸ್ತೀಯ ಕಲಿಕೆಯ (ಉದಾ: ವಿಜ್ಞಾನದ ವಿದ್ಯಾರ್ಥಿಗಳು ಸಹ ಕಲೆಯ ಬಗ್ಗೆ ತಿಳುವಳಿಕೆ ಪಡೆಯುವುದರ) ಮೇಲೆ ಒತ್ತು ಕೊಡುವ, ವರದಿಯ ಅಂಶ ಸಮಾಧಾನ ತರಬಹುದಾಗಿದ್ದ ಅಂಶವಾಗಿದ್ದರೂ ಸಹ ಪ್ರಶ್ನಾರ್ಹವಾಗಿದೆ. ಪಠ್ಯಕ್ರಮದ ಭಾಗವಾಗಬೇಕಾದ ಕಲೆಯ ವಿಷಯಗಳಲ್ಲಿ ಸಹವರದಿ ಭಾರೀ ಒತ್ತುಕೊಟ್ಟಿರುವುದು ಭಾರತದ ಬೌದ್ಧಿಕ ಪರಂಪರೆ, ಭಾರತೀಯ ತತ್ವಶಾಸ್ತ್ರದ ಮಹತ್ತರ ಕೀರ್ತಿ ಇತ್ಯಾದಿಗಳ ಮೇಲೆ.ವಿದ್ಯಾರ್ಥಿಗಳಿಗೆ ಸಮಕಾಲೀನ ಮಾನವಿಕ ಮತ್ತು ಸಮಾಜ ವಿಜ್ಞಾನಗಳನ್ನು ಕಲಿಸುವ ಬಗ್ಗೆ ನಿಚ್ಚಳವಾದ ವಿಚಾರವಿಲ್ಲ. ಬದಲಿಗೆ ಭಾರತದ ಗತವೈಭವದ ಬಗ್ಗೆ ಸಂಭ್ರಮಿಸುವುದಷ್ಟೇಆಗುವ ಸಾಧ್ಯತೆಯೇ ಹೆಚ್ಚು.

ಭಾರತೀಯ ತತ್ವಶಾಸ್ತ್ರ ಮತ್ತು ಉಳಿದ ಜ್ಞಾನಶಿಸ್ತುಗಳಲ್ಲಿ ಭಾರತ ನೀಡಿರುವ ಪ್ರಮುಖವಾದ ಕೊಡುಗೆಯನ್ನು ಕಲಿಸುವ ಅಗತ್ಯ ಖಂಡಿತ ಇದೆ. ಆದರೆ ಅದು ಚಿಂತನೆಗಳ ಚರಿತ್ರೆಯಭಾಗವಾಗಿರಬೇಕಾಗಿದೆ.ಬದಲಾಗಿ ವಿದ್ಯಾರ್ಥಿಗಳನ್ನು ಆ ಹಂತದಿಂದ ಕದಲದಂತೆ ಮಾಡುವುದು 21ನೇ ಶತಮಾನದ ಶಿಕ್ಷಣವಾಗಲಾರದು.

ಮುಂದುವರೆಯುವುದು....

ನನ್ನ ಕನಸಿನ ಭಾರತ
(ಆಗಸ್ಟ್ 14 ರ ಮಧ್ಯರಾತ್ರಿಯ ಪ್ರತಿಜ್ಞೆ)

ಕೆಲಸ, ದೈಹಿಕ ಅಥವಾ ಮಾನಸಿಕ, ಸಮಾನವಾಗಿ ಗುರುತಿಸುವ, ಗೌರವಿಸುವ ಮತ್ತು ಪರಿಗಣಿಸುವ ಭಾರತ

ಕೆಲಸ ಮಾಡುವ ಹಕ್ಕು, ಜೀವನ ನಿರ್ವಹಣೆ ಮತ್ತು ಜೀವನವನ್ನು ಮೂಲಭೂತ ಹಕ್ಕುಗಳೆಂದು ಖಾತರಿಪಡಿಸುವ ಭಾರತ

ಆರ್ಥಿಕ ಸ್ವಾವಲಂಬನೆ ಮತ್ತು ರಾಜಕೀಯ ಸಾರ್ವಭೌಮತ್ವದ ವಿಷಯದಲ್ಲಿ ರಾಜಿಯಾಗದ ಅಥವಾ ಶರಣಾಗದ ಭಾರತ

ಎಲ್ಲಾ ಮಹಿಳೆಯರು ಮತ್ತು ಪುರುಷರನ್ನು ಸಮಾನವಾಗಿ ಮತ್ತು ಗೌರವದಿಂದ ಪರಿಗಣಿಸುವ

ಜನರು ಕೆಲಸ ಆಹಾರ, ವಸತಿ, ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಚಿಂತಿಸದೆ ಶಾಂತಿ ಮತ್ತು ತೃಪ್ತಿಯ ಜೀವನವನ್ನು ನಡೆಸುವ

ಪ್ರತಿಯೊಬ್ಬರಿಗೂ ಅವಳ ಅಥವಾ ಅವನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯ

ಸಾಮರ್ಥ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸಲು ಅವಕಾಶವಿರುವ

ಎಲ್ಲಿ ಜನರು ಪ್ರೀತಿ, ಸ್ನೇಹದಿಂದ ಒಂದಾಗಿ ಮತ್ತು ಸಾಮರಸ್ಯ ಮತ್ತು ಪರಸ್ಪರ ಗೌರವದಿಂದ ಬದುಕುತ್ತಾರೆ,

ಎಲ್ಲಿ ಜಾತಿ, ಮತ, ಧರ್ಮ, ಪ್ರದೇಶ ಅಥವಾ ಲಿಂಗ ಜನರನ್ನು ವಿಭಜಿಸುವುದಿಲ್ಲ,

ನಮ್ಮ ಪೂರ್ವಜರು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ

ಲಕ್ಷಾಂತರ ಕಾರ್ಮಿಕರು ಕಂಡ ಕನಸಿನ ಭಾರತ

ಅಂತಹ ಭಾರತವನ್ನು ನಾವು ಸಾಧಿಸುವ ವರೆಗೆ ಹೋರಾಟವನ್ನು ಮುಂದುವರೆಸುತ್ತೇನೆ ಎಂದು ನಾನು ಪ್ರತಿಜ್ಞೆ ಮಾಡುತ್ತೇನೆ.



“ಪಂಜರದಲ್ಲಿ ಕಾಶ್ಮೀರ”

ಸತ್ಯಶೋಧನಾ ಸೌಹಾರ್ದ ತಂಡದ ವರದಿ

ಪುಟ 11 ರಿಂದ

ವ್ಯವಹಾರಗಳ ಕುರಿತ ವಕ್ತಾರರು! ಈ ವಕ್ತಾರರೊಂದಿಗೆ ಮಾತುಕತೆ ಚೆನ್ನಾಗಿಯೇ ಆರಂಭವಾಗಿತ್ತು, ಆದರೆ ಆತ ತಂಡದವರನ್ನು ‘ “ರಾಷ್ಟ್ರ–ವಿರೋಧಿ ಕೆಲಸ ಮಾಡಬೇಡಿ” ಎಂದು ಬೆದರಿಸುವುದರೊಂದಿಗೆ ಮುಕ್ತಾಯಗೊಂಡಿತು ಎಂದು ತಂಡ ತಿಳಿಸಿದೆ.

ಕಾಶ್ಮೀರ ಕಣಿವೆ ಈಗ ಮಿಲಿಟರಿ ಹತೋಟಿಯಲ್ಲಿರುವ ಸೆರೆಮನೆಯಂತಾಗಿದೆ ಎಂಬುದು ತಂಡದ ಒಟ್ಟಭಿಪ್ರಾಯ.

ಈ ಭೇಟಿಯ ಅನುಭವಗಳನ್ನು ತಂಡ ದಿಲ್ಲಿಗೆ ಮರಳಿದ ಮೇಲೆ ಆಗಸ್ಟ 14ರಂದು ದಿಲ್ಲಿಯ ಪ್ರೆಸ್‌ಕ್ಲಬ್ ಆಫ್ ಇಂಡಿಯಾ ಆವರಣದಲ್ಲಿ ನಡೆಸಿದ ಒಂದು ಪತ್ರಿಕಾಗೋಷ್ಠಿಯಲ್ಲಿ ಹಂಚಿಕೊಂಡಿತು. **ಇಲ್ಲಿ ತನ್ನ ಹತ್ತು ಪುಟಗಳ ವರದಿಯನ್ನು ತಂಡ ಬಿಡುಗಡೆ ಮಾಡಿದೆ. ಆದರೆ ಅದು ಕಾಶ್ಮೀರ ಕಣಿವೆಯ ವಿವಿಧೆಡೆಗಳಲ್ಲಿ ಕಂಡ ದೃಶ್ಯಗಳ, ನಡೆಸಿದ ಸಂದರ್ಶನಗಳ ಒಂದು ವೀಡಿಯೋ “ಕಾಶ್ಮೀರ್ ಕೇಜ್ಡ್”(ಪಂಜರದಲ್ಲಿಟ್ಟ ಕಾಶ್ಮೀರ)ವನ್ನು ಪ್ರದರ್ಶಿಸಲು ಪ್ರೆಸ್ ಕ್ಲಬ್‌ನ ಅಧಿಕಾರಿಗಳು ಬಿಡಲಿಲ್ಲ.**

ಈ ಬಗ್ಗೆ ಹೇಳುತ್ತ ತಂಡದ ಒಬ್ಬ ಸದಸ್ಯರಾದ ಕವಿತಾ ಕೃಷ್ಣನ್ “ನೀವು ಪ್ರೊಜೆಕ್ಟರ್ ಬಳಸುವಂತಿಲ್ಲ ಎಂದು ಪ್ರೆಸ್‌ಕ್ಲಬ್‌ನವರು ಹೇಳಿದರು. ಇಲ್ಲಿ ಸರಕಾರದ ಕಣ್ಗಾವಲು ಇದೆ, ನಮ್ಮ ಮೇಲೆ ಒತ್ತಡ ಇದೆ ಎಂದು ಖಾಸಗಿಯಾಗಿ ಅವರು ನಮಗೆ ಹೇಳಿದರು. ನಿಜವಾಗಿ ಏನು ನಡೆಯುತ್ತಿದೆ ಎಂದು ಪ್ರೆಸ್ ಕ್ಲಬ್‌ನಲ್ಲೇ ಹೇಳಬಾರದಾದರೆ ಬೇರೆಲ್ಲಿ ಹೇಳಬೇಕು?” ಎಂದು ಪ್ರಶ್ನಿಸಿದರು.

ವರದಿಯನ್ನು ಬಿಡುಗಡೆ ಮಾಡುತ್ತ ಈ ಸೌಹಾರ್ದ ತಂಡ ತನ್ನ ಅನುಭವಗಳನ್ನು ಹಂಚಿಕೊಂಡಿತು.

ಸತ್ಯಶೋಧನಾ ತಂಡ ತನ್ನ ಐದು ದಿನಗಳ ರಾಜ್ಯಸಂಚಾರದಲ್ಲಿ ನೂರಾರು ಜನಸಾಮಾನ್ಯರನ್ನು ಭೇಟಿ ಮಾಡಿತು. ಮಹಿಳೆಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಂಗಡಿಯವರು, ಕಾರ್ಮಿಕರು ಮತ್ತು ಉತ್ತರಪ್ರದೇಶ, ಪಶ್ಚಿಮ ಬಂಗಾಲ ಮುಂತಾದ ರಾಜ್ಯಗಳಿಂದ ಬಂದ ವಲಸಿಗರು, ಸಿಖ್ಖರು, ಕಾಶ್ಮೀರಿ ಪಂಡಿತರು ಮುಂತಾದವರೊಂದಿಗೆ ಮಾತಾಡಿತು. ಎಲ್ಲೆಡೆಗಳಲ್ಲೂ ಜನ ಭಾರತದ ವಿಶ್ವಾಸಘಾತದಿಮದ ತಮಗೆ ನೋವಾಗಿದೆ, ಸಿಟ್ಟು ಬಂದಿದೆ ಎಂದು ಹೇಳಿದರೂ ತಂಡವನ್ನು ಸೌಹಾರ್ದಯುತವಾಗಿಯೇ ಬರಮಾಡಿಕೊಂಡರು, ಇಂತಹ ಭೇಟಿಗಳು ಈಗ ನಿರರ್ಥಕ ಎಂದು ಭಾವಿಸಿದವರೂ ಕೂಡ.

ಸರಕಾರದ ನಿರ್ಧಾರಗಳು ಮತ್ತು ಅದನ್ನು ಜಾರಿಗೊಳಿಸಿರುವ ರೀತಿಯ ಬಗ್ಗೆ ಇಡೀ ಕಾಶ್ಮೀರ ಕಣಿವೆ ಸಿಡಿಮಿಡಿಗೊಂಡಿದೆ. ಶಾಂತಿ ನೆಲೆಗೊಳಿಸುವ ಹೆಸರಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ಅರೆಮಿಲಿಟರಿ ಮಂದಿಯನ್ನು ತಂದಿಟ್ಟಿದ್ದಾರೆ. “ಪೋಲೀಸ್ ಪಡೆಗಳಿಗೂ ಕೂಡ ಈ ಬೆಳವಣಿಗೆಗಳಿಂದ ಸಂತೋಷವಿಲ್ಲ. ಒಂದು ಮೈದಾನದಲ್ಲಿ ಆಟವಾಡುತ್ತಿದ್ದ ಮಕ್ಕಳು ಕೂಡ ‘ಇಬ್ಲಿಸ್ ಮೋದಿ’ ಎಂದು ಹೇಳುತ್ತಿದ್ದರು” ಎಂದು ಕವಿತಾ ಕೃಷ್ಣನ್ ಹೇಳಿದರು. ‘ಇಬ್ಲಿಸ್’ ಎಂದರೆ ಸೈತಾನ ರಾಜ.

“ನಮ್ಮ ಅಂದಾಜಿನ ಪ್ರಕಾರ ಕಾಶ್ಮೀರದ ಪ್ರತಿ 10 ನಿವಾಸಿಗೆ ಒಬ್ಬರಂತೆ ಮಿಲಿಟರಿ ಕಾವಲಿದೆ. ಸ್ಥಳೀಯರು ಪ್ರತಿಭಟಿಸದಂತೆ ಹತೋಟಿಯಿಡುವುದೇ ಇದರ ಉದ್ದೇಶ ಎಂಬುದು ಸ್ಪಷ್ಟ” ಎಂದು ಜೀನ್ ಡ್ರೇಝ್ ಹೇಳಿದರು.

ಕಣಿವೆಯಲ್ಲಿ ಕರ್ಫ್ಯೂ ಹಾಕಿಲ್ಲೆಂದು ಸರಕಾರ ಹೇಳುತ್ತಿದೆಯಾದರೂ ಜನಗಳನ್ನು ಹತೋಟಿಯಲ್ಲಿಡಲು ಕರ್ಫ್ಯೂನಂತಹ ಪರಿಸ್ಥಿತಿಗಳನ್ನು ಉಂಟುಮಾಡಲಾಗಿದೆ. ಫೋನ್, ಮೊಬೈಲ್, ಇಂಟರ್ನೆಟ್ ಸಂಪರ್ಕಗಳನ್ನು ಅಮಾನತುಗೊಳಿಸಲಾಗಿದೆ. ಪಾಸ್‌ಗಳಿಲ್ಲದೆ ಜನಗಳು ಸರಾಗವಾಗಿ ಓಡಾಡುವಂತಿಲ್ಲ. ಕೆಲವು ಔಷಧಿ ಅಂಗಡಿಗಳು, ಎಟಿಎಂಗಳು, ಪೋಲಿಸ್ ಠಾಣೆಗಳು ಬಿಟ್ಟರೆ ಬೇರೆಡೆಗಳೆಲ್ಲಾ ಬಿಕೋ ಎನ್ನುವ ದೃಶ್ಯಗಳೇ. ಶಾಲೆಗಳು ಮುಚ್ಚಿವೆ, ಕೆಲವು ಆಸ್ಪತ್ರೆಗಳೂ ಮುಚ್ಚಿವೆ.

ಕಾಶ್ಮೀರಿ ಟಿವಿ ವಾಹಿನಿಗಳು ಮತ್ತು ಪತ್ರಿಕೆಗಳವರದ್ದೂ ಇದೇ ಕಥೆ. ಪ್ರತಿಭಟನೆಯ ತುಸು ಪ್ರಸ್ತಾಪ ಮಾಡಿದರೂ ಕೆಂಗಣ್ಣು. ಸೇನಾಪಡೆ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳು ಕಚೇರಿಗಳಿಗೆ ಬಂದು ನಿರ್ಜನ ರಸ್ತೆಗಳ ಫೋಟೋಗಳನ್ನೇಕೆ ಪ್ರಕಟಿಸಿದ್ದೀರಿ ಎಂದು ಬೆದರಿಸುತ್ತಾರೆ ಎಂದರು ಮಾಧ್ಯಮಗಳಲ್ಲಿ ಕೆಲಸ ಮಾಡುವವರು. ಸರಕಾರ ಪೋಲೀಸರಿಗೆ ಇಂಟರ್ನೆಟ್ ಮತ್ತು ಫೋನ್ ಸಂಪರ್ಕ ಕೊಡುತ್ತದೆ, ಆದರೆ ಮಾಧ್ಯಮದವರಿಗೆ ಕೊಡದಿರುವುದರ ಅರ್ಥವೇನು ಎಂದೊಬ್ಬ ಪತ್ರಕರ್ತರು ಪ್ರಶ್ನಿಸಿದರು. ಎಲ್ಲಕ್ಕೂ ಮಿಗಿಲಾಗಿ ಇಲ್ಲಿ ಪತ್ರಿಕೆಗಳಿಗೆ ನ್ಯೂಸ್‌ಪ್ರಿಂಟ್ ಕೂಡ ಸಿಗುತ್ತಿಲ್ಲ ಎಂದು ಇನ್ನೊಬ್ಬರು ಹೇಳಿದುದಾಗಿ ಮೈಮೂನಾ ಮೊಲ್ಲ ಹೇಳಿದರು.

ದೇಶದ ಮುಖ್ಯಧಾರೆಯ ಮಾಧ್ಯಮಗಳು ರಾಜಧಾನಿ ಶ್ರೀನಗರದ ಸುಮಾರಾಗಿ ಸಾಮಾನ್ಯ ಸ್ಥಿತಿಯಲ್ಲಿರುವಂತೆ ಕಾಣುವ ಒಂದು ಸಣ್ಣ ಪ್ರದೇಶದಿಂದ ಮಾತ್ರ ವರದಿ ಮಾಡುತ್ತಿವೆ. ಆದ್ದರಿಂದಲೇ ಪರಿಸ್ಥಿತಿ ತ್ವರಿತವಾಗಿ ಸಾಮಾನ್ಯಗೊಳ್ಳುತ್ತಿದೆ ಎಂದು ಅವು ಹೇಳುತ್ತಿವೆ. ಆದರೆ ನಿಜಸ್ಥಿತಿ ಹಾಗಿಲ್ಲ. ವಿದೇಶಿ ಮಾಧ್ಯಮಗಳು ದೇಶೀ ಮಾಧ್ಯಮಗಳಿಗಿಂತ ಹೆಚ್ಚು ನಿರ್ಭೀತಿಯಿಂದ ವರದಿ ಮಾಡುತ್ತಿದ್ದರೂ, ತಾವೂ ತಮ್ಮ ಚಲನವಲನಗಳ ಮೇಲೆ ಸಾಕಷ್ಟು ಮಿತಿಗಳನ್ನು ಎದುರಿಸಬೇಕಾಗಿ ಬಂದಿದೆ ಎಂದು ಅವರು ಹೇಳಿರುವುದಾಗಿ ಜೀನ್ ಡ್ರೇಝ್ ಹೇಳಿದರು.

ಮೂರು ವರ್ಷಗಳ ಹಿಂದೆ, ಜನಗಳನ್ನು ಚದುರಿಸಲು ಪೆಲೆಟ್ ಗುಂಡುಗಳನ್ನು ಬಳಸುವುದಿಲ್ಲ ಎಂದು ಸರಕಾರ ಹೇಳಿತ್ತು. ಆದರೆ ಈಗ ಇವನ್ನು ಮತ್ತೆ ಬಳಸುತ್ತಿರುವುದು ಕಂಡು ಬಂದಿದೆ. ಅಲ್ಲದೆ ಉದ್ದೇಶಪೂರ್ವಕವಾಗಿ ಜನಗಳ ಮುಖ ಮತ್ತು ಕಣ್ಣುಗಳ ಮೇಲೆಯೇ ಗುರಿಯಿಡಲಾಗುತ್ತಿದೆ ಎಂಬುದೂ ಕಂಡು ಬಂದಿದೆ.

ಮೇಲೆ ಹೇಳಿದಂತೆ ವಿದೇಶಿ ಪತ್ರಿಕೆಗಳಿಂದಾಗಿ ಸುದ್ದಿಯಾದ, 10,000 ಮಂದಿ ಪ್ರತಿಭಟನೆ ನಡೆಸಿದ ಸೌರಾಕ್ಕೆ ಹೋಗಲು ಸಿಆರ್‌ಪಿಎಫ್ ಬಿಡಲಿಲ್ಲ. ಆದರೆ ಆಸ್ಪತ್ರೆಯಲ್ಲಿ ಪೆಲೆಟ್ ಗುಂಡುಗಳಿಂದ ತೀವ್ರವಾಗಿ ಗಾಯಗೊಂಡವರನ್ನು ತಂಡ ಭೇಟಿ ಮಾಡಿತು. ಇಬ್ಬರು ಯುವಕರ ಮುಖಗಳನ್ನು ಪೂರ್ತಿಯಾಗಿ ಬ್ಯಾಂಡೇಜ್ ಮಾಡಿದ್ದನ್ನು ಕಂಡಿತು. ಇವರಜ್ಯಲ್ಲೆಸೆತದಲ್ಲೇನೂ ತೊಡಗಿರಲಿಲ್ಲ ಎಂದು ಅವರ ಕುಟುಂಬದವರು ತಂಡದ ಮುಂದೆ ಕಣ್ಣೀರಿಟ್ಟರು.

ತಾವು ಭೇಟಿ ನೀಡಿದ ಪ್ರತಿಯೊಂದು ಹಳ್ಳಿಯಲ್ಲೂ ಮತ್ತು ಶ್ರೀನಗರದ ಹೊರವಲಯಗಳಲ್ಲೂ ಶಾಲಾಹುಡುಗರನ್ನು, ಹದಿಹರೆಯದ ಯುವಕರನ್ನು ರಕ್ಷಣಾ ಸಿಬ್ಬಂದಿಯವರು ಮಧ್ಯರಾತ್ರಿ ಬಂದು ಮನಬಂದಂತೆ ಹಿಡಿದುಕೊಂಡು ಹೋಗಿ ಯಾವುದೇ ಕಾರಣಗಳನ್ನು ಕೊಡದೆ ಹಿಡಿದಿಟ್ಟುಕೊಳ್ಳುತ್ತಿದ್ದಾರೆ ಎಂಬ ದೂರುಗಳು ಕೇಳಬಂದವು ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ತಂಡದ ಎಲ್ಲರೂ ಹೇಳಿದರು. ಈ ದಾಳಿಗಳ ಸಂದರ್ಭದಲ್ಲಿ ಹುಡುಗಿಯರಿಗೆ ಲೈಂಗಿಕ ಕಿರುಕುಳಗಳೂ ವರದಿಯಾಗಿವೆ. ಜನಗಳಲ್ಲಿ ಭೀತಿ ಹುಟ್ಟಿಸುವುದೇ ಇದರ ಉದ್ದೇಶ. ಸಾರ್ವಜನಿಕ ಸುರಕ್ಷತೆ ಕಾಯ್ದೆ(ಪಿಎಸ್‌ಎ)ಯನ್ನು ಬಳಸಬಹುದು ಎಂಬ ಭೀತಿ ಜನಗಳನ್ನು ಕಾಡುತ್ತಿದೆ ಎಂದು ಮೈಮೂನಾ ಮೊಲ್ಲ ಕಾಶ್ಮೀರದಲ್ಲಿನ ಗಂಭೀರ ಸನ್ನಿವೇಶವನ್ನು ವಿವರಿಸುತ್ತ ಹೇಳಿದರು.

ಸ್ಥಾನ ಬದ್ಧತೆಗೊಳಗಾದವರ ಮತ್ತು ಬಂಧಿತರ ಬಗ್ಗೆ ಮಾಹಿತಿಯೇ ಇಲ್ಲ. ತಂಡ ಸಿಪಿಐ(ಎಂ)ನ ಹಿರಿಯ ಮುಖಂಡ ಮತ್ತು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಮಹಮ್ಮದ್ ಯುಸುಫ್ ತರಿಗಾಮಿಯವರನ್ನು ಭೇಟಿಯಾಗಲು ಅವರ ಮನೆಗೆ ಹೋಯಿತು. ಆದರೆ ಭದ್ರತಾ ಪಡೆಗಳು ತಂಡಕ್ಕೆ ಮನೆಯೊಳಗೆ ಹೋಗಲು ಅವಕಾಶ ನೀಡಲಿಲ್ಲ. ತರಿಗಾಮಿಯವರನ್ನು ಗೃಹಬಂಧನದಲ್ಲಿ ಇಡಲಾಗಿದೆ.

ಫಾರುಕ್ ಅಬ್ದುಲ್ಲಾ ಗೃಹಬಂಧನದಲ್ಲೇನೂ ಇಲ್ಲ ಎಂದು ಗೃಹಮಂತ್ರಿಗಳು ಸಂಸತ್ತಿನಲ್ಲಿ ಹೇಳಿದ ಹಿನ್ನೆಲೆಯಲ್ಲಿ ಅವರು ತಮ್ಮ ಮನೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಗೃಹಂತ್ರಿಗಳು ಸುಳ್ಳು ಹೇಳುತ್ತಿರುವುದನ್ನು ಜಗಜ್ಜಾಹೀರು ಮಾಡಿದ್ದು ಈಗಾಗಲೇ ವರದಿಯಾಗಿದೆ. ಅದಾದ ಕೂಡಲೇ ಅವರ ನಿವಾಸದಲ್ಲಿ ಕಾವಲಿಟ್ಟಿದ್ದ ಭದ್ರತಾ ಪಡೆ ಸಿಬ್ಬಂದಿಯ ಎಲ್ಲರನ್ನೂ ಅಮಾನತುಗೊಳಿಸಲಾಗಿದೆ ಎಂದು ಕವಿತಾ ಕೃಷ್ಣನ್ ಹೇಳಿದರು.

ತಂಡದ ಪ್ರಕಾರ ಪ್ರತಿಭಟನೆಗಳು ನಿಲ್ಲುವ ಸಾಧ್ಯತೆ ಇಲ್ಲ. “ಜಿತ್ನಾ ಜುಲುಮ್ ಕರೇಂಗೇ, ಉತ್ನಾ ಹಮ್ ಉಭರೇಂಗೆ”– ಎಂದು ಸೋಪೋರ್‌ನಲ್ಲಿ ಒಬ್ಬ ಯುವಕ ತಂಡಕ್ಕೆ ಹೇಳಿದ ಮಾತು. ಅಂದರೆ ನೀವು ಜುಲುಮೆ ಮಾಡಿದಷ್ಟೂ ನಾವು ಎದ್ದು ನಿಲ್ಲುತ್ತೇವೆ. ಹಲವೆಡೆಗಳಲ್ಲಿ ಈ ಮಾತು ಮತ್ತೆ–ಮತ್ತೆ ಕೇಳಬಂದವು ಎಂದು ತಂಡದ ವರದಿ ಹೇಳಿದೆ.

ಕಲಮು 370 ಮತ್ತು 35ಎ ಗಳನ್ನು ತಕ್ಷಣವೇ ಮರುಸ್ಥಾಪಿಸಬೇಕು, ಕಾಶ್ಮೀರಿ ಜನಗಳ ಇಚ್ಛೆಗೆ ವಿರುದ್ಧವಾಗಿ ಅವರ ಭವಿಷ್ಯದ ಸ್ಥಾನಮಾನದ ಬಗ್ಗೆ ನಿರ್ಣಯಕ್ಕೆ ಬರಬಾರದು, ನಿರ್ಬಂಧಿಸಿರುವ ಎಲ್ಲ ಸಂಪರ್ಕಗಳನ್ನು ಮತ್ತೆ ಸ್ಥಾಪಿಸಬೇಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ, ಕಾಶ್ಮೀರದ ಪತ್ರಕರ್ತರ ಮೇಲಿನ ನಿರ್ಬಂಧಗಳನ್ನು ತೆಗೆಯಬೇಕು ಎಂದು ಸೌಹಾರ್ದ ತಂಡ ಆಗ್ರಹಿಸಿದೆ.




ಸೋಪೋರ್‌ನಲ್ಲಿ ಅಡುಗೆ ಅನಿಲಕ್ಕೆ ಕ್ಯೂ–ಆಗಸ್ಟ್ 11

ಸೌಹಾರ್ದ ತಂಡಕ್ಕೆ ಕೇಳಿಸಿದ್ದು.........

- ಅನಂತನಾಗ್ ಜಿಲ್ಲೆಯ ಗುರಿ ಎಂಬ ಹಳ್ಳಿಯಲ್ಲಿ– **”ಅವರೊಂದಿಗೆ ನಮ್ಮ ಸಂಬಂಧ ಇದ್ದದ್ದು 370 ಮತ್ತು 35ಎ ಕಲಮುಗಳಿಂದ. ಈಗ ಅವರು ತಮ್ಮ ಕಾಲ ಮೇಲೆ ತಾವೇ ಕೊಡಲಿ ಹಾಕಿಕೊಂಡಿದ್ದಾರೆ. ಇವನ್ನು ಅಂತ್ಯಗೊಳಿಸಿದ್ದಾರೆ. ನಾವಂತೂ ಈಗ ಸ್ವತಂತ್ರರು.”** ಹೀಗೆ ಹೇಳಿದ ವ್ಯಕ್ತಿಯೇ “ನಮಗೆ ಸ್ವಾತಂತ್ರ್ಯ ಬೇಕು, 370 ಮತ್ತು 35ಎ ಕಲಮುಗಳನ್ನು ಮರುಸ್ಥಾಪಿಸಿ” ಎಂದೂ ಘೋಷಣೆ ಕೂಗಿದ. ಶ್ರೀನಗರದಲ್ಲಿ ಒಬ್ಬರು **ಕಲಮು 370 ಭಾರತ ಮತ್ತು ಕಾಶ್ಮೀರದ ನಡುವಿನ ಸಂಬಂಧದಲ್ಲಿ ಮಂಗಳಸೂತ್ರವಿದ್ದಂತೆ. ಅದನ್ನು ಕಳಚಿದ ಮೇಲೆ ಸಂಬಂಧವೆಲ್ಲಿ ಉಳಿದಿದೆ** ಎಂದೂ ಪ್ರಶ್ನಿಸಿದರು.
- ಭೇಟಿಯುದ್ದಕ್ಕೂ ಕೇಳಿಬಂದ ಪದಗಳೆಂದರೆ– **ಝುಲ್ಮ್(ದಮನ), ಜ್ಯಾದತಿ(ಅತ್ಯಾಚಾರ), ಧೋಖಾ(ವಿಶ್ವಾಸಘಾತ).** “ಸರಕಾರ ನಮ್ಮನ್ನು ಗುಲಾಮರಂತೆ ಕಂಡಿದೆ. ನಮ್ಮನ್ನು ಕೂಡಹಾಕಿ ನಮ್ಮ ಬದುಕು ಮತ್ತು ಭವಿಷ್ಯದ ಬಗ್ಗೆ ತಾನೇ ನಿರ್ಧಾರ ತಗೊಂಡಿದೆ” ಎಂಬುದು ಅವರ ಕ್ರೋಧಕ್ಕೆ ಮುಖ್ಯ ಕಾರಣ.
- **“370 ಮತ್ತು 35ಎ ಕಾಶ್ಮೀರದ ‘ಪಹಚಾನ್’ (ಗುರುತು–ಅಸ್ಮಿತೆ)–ಇವುಗಳ ರದ್ದತಿ ಕಾಶ್ಮೀರದ ಸ್ವಾಭಿಮಾನ ಮತ್ತು ಸ್ವಂತಿಕೆಯನ್ನು ಅವಮಾನಗೊಳಿಸುವ ದಾಳಿ.”**
- “ಇಂಡಿಯಾದ ಹಾಡು ಹಾಡುತ್ತಿದ್ದವರೂ, ಅವರದ್ದೇ ಮಂದಿಗಳೂ, ಅವರು ಕೂಡಾ ಈಗ ಬಂಧಿಗಳು” ಎಂದು ಒಬ್ಬರು ಹೇಳಿದರೆ, ಇನ್ನೊಬ್ಬ **“370 ಕಲಮಿನ ರದ್ಧತಿ ಭಾರತ ಪರ ಪಕ್ಷಗಳ ಮರ್ಯಾದೆ ತೆಗೆದಿದೆ, ‘ಆಝಾದಿ’ಯ ವಾದವನ್ನು ಸಮರ್ಥಿಸಿದೆ”** ಎಂದು ಇನ್ನೊಬ್ಬರು ಹೇಳಿದರು. ಭಾರತ–ಪರ ಪಕ್ಷಗಳನ್ನು ಅವಮಾನಗೊಳಿಸಿದ ಕೇಂದ್ರ ಸರಕಾರದ ವರ್ತನೆ ಹಲವರಿಗೆ ಸಂತೋಷ ತಂದಿದೆ ಎಂದೂ ಒಬ್ಬ ಪತ್ರಕರ್ತರು ಹೇಳಿದರು.
- **“370 ಕಾಶ್ಮೀರಕ್ಕಿಂತ ಭಾರತಕ್ಕೆ ಮುಖ್ಯವಾಗಿತ್ತು. ಮೋದಿ ಕಾಶ್ಮೀರವನ್ನು ನಾಶಮಾಡಲು ಪ್ರಯತ್ನಿಸಿದ್ದಷ್ಟೇ ಅಲ್ಲ, ಭಾರತದ ಸ್ವಂತ ಸಂವಿಧಾನವನ್ನೂ, ಒಂದು ಕಾಯ್ದೆಯನ್ನೂ ನಾಶ ಮಾಡಿದ್ದಾರೆ”** ಎಂಬುದು ಇನ್ನೊಂದು ಸಾಮಾನ್ಯವಾಗಿ ಕೇಳಬಂದ ಟಿಪ್ಪಣಿ. ಇದು ಅವರ ಹಿಂದೂರಾಷ್ಟ್ರದತ್ತ ಮೊದಲ ಹೆಜ್ಜೆ ಎಂದು ಇನ್ನೊಬ್ಬರು ಹೇಳಿದರು.
- **“ಕಾಂಗ್ರೆಸ್ ಬೆನ್ನ ಹಿಂದೆ ಚೂರಿ ಹಾಕಿದರೆ ಬಿಜೆಪಿ ಎದುರಿನಿಂದ ಚೂರಿ ತೂರಿಸಿದೆ”**–ಇದು ಶ್ರೀನಗರದ ಒಬ್ಬ ವರ್ತಕನ ಟಿಪ್ಪಣಿ.
- **“ಇದು ಮಿಲಿಟರಿ ಆಳ್ವಿಕೆ, ಮೋದಿ ಆಳ್ವಿಕೆಯಲ್ಲ”**, ಸೇನಾ, ಸಿಆರ್‌ಪಿಎಫ್ ಇತ್ಯಾದಿ ತುಕಡಿಗಳನ್ನು ಸುಮಾರಾಗಿ ಪ್ರತಿ ಮನೆಯ ಮುಂದೆ ತಂದು ನಿಲ್ಲಿಸಲಾಗಿದೆ, **“ಇದು ನಮ್ಮ ರಕ್ಷಣೆಗೆಂದು ಅಲ್ಲ, ತಮ್ಮಲ್ಲಿ ಭಯ ಹುಟ್ಟಿಸಲು”** ಎಂಬ ಭಾವನೆ ಜನಗಳಲ್ಲಿ ವ್ಯಾಪಕವಾಗಿದೆ.
- ಜನ 370ಕ್ಕಿಂತ 35 ಎ ಬಗ್ಗೆಯೇ ಹೆಚ್ಚು ಆತಂಕಿತರಾಗಿರುವಂತೆ ಕಾಣುತ್ತದೆ. 370 ಕಲಮಿನ ಅಡಿಯಲ್ಲಿನ ಸ್ವಾಯತ್ತತೆ ಅದಾಗಲೇ ಬಹಳಷ್ಟು ದುರ್ಬಲವಾಗಿತ್ತು, ಅದು ಹೋದರೆ ಬಹಳ ನಷ್ಟವೇನಿಲ್ಲ, ಆದರೆ 35ಎ ಹೋಗಿರುವದರಿಂದ ರಾಜ್ಯದ ಭೂಮಿಯನ್ನು ಹೂಡಿಕೆದಾರರಿಗೆ ಅಗ್ಗವಾಗಿ ಮಾರಲಾಗುತ್ತದೆ, ಅಂಬಾನಿ, ಪತಂಜಲಿಗಳು ಸುಲಭವಾಗಿ ಬರುತ್ತಾರೆ, ಕಾಶ್ಮೀರದ ಸಂಪನ್ಮೂಲಗಳನ್ನು, ಭೂಮಿಯನ್ನು ಕಬಳಿಸುತ್ತಾರೆ ಎಂಬ ಭೀತಿಯೇ ಹಲವರಲ್ಲಿ ಹೆಚ್ಚಾಗಿ ಕಂಡು ಬಂತು. ಈಗ ಭಾರತದ ಹಲವು ರಾಜ್ಯಗಳಿಗೆ ಹೋಲಿಸಿದರೆ ಕಾಶ್ಮೀರದ ಶಿಕ್ಷಣ ಮತ್ತು ಉದ್ಯೋಗ ಮಟ್ಟ ಉತ್ತಮವಾಗಿದೆ, ಆದರೆ ಒಂದು ಪೀಳಿಗೆ ಕಳೆದ ಮೇಲೆ ಕಾಶ್ಮೀರದ ಯುವಜನ ಬೇರೆ ರಾಜ್ಯಗಳವರೊಂದಿಗೆ ಉದ್ಯೋಗಕ್ಕೆ ಸ್ಪರ್ಧಿಸಬೇಕಾಗುತ್ತದೆ ಎಂಬ ಭೀತಿಯೂ ಕಂಡು ಬಂತು.
- **“ಇಲ್ಲಿರುವುದು ಬಂದೂಕಿನ ಮೌನ, ಸ್ಮಶಾನದ ಮೌನ”**–ಬಿಕೋ ಎನ್ನುತ್ತಿರುವ ರಸ್ತೆಗಳು ಮತ್ತು ಮುಚ್ಚಿದ ಅಂಗಡಿಗಳನ್ನು ತೋರಿಸುತ್ತ ಸೋಪೋರ್‌ನ ಒಬ್ಬ ಯುವಕನ ಟಿಪ್ಪಣಿ.
- **“ನಾವು ಜೈಲಿನಲ್ಲಿ ಇರುವಂತೆ ಅನಿಸುತ್ತಿದೆ”** ಎಂದು ಅನಂತನಾಗ್ ಜಿಲ್ಲೆಯ ಒಬ್ಬ ಮಹಿಳೆ ಹೇಳಿದರೆ, ಸೋಪೋರ್‌ನಲ್ಲಿ ಈದ್‌ಗೆ ಸಾಮಗ್ರಿ ತರಲು ಸೇನೆ ತುಸು ಅವಕಾಶ ನೀಡಿದಾಗ ತನ್ನ ಹಳ್ಳಿಯಿಂದ ಬಂದ ಇನ್ನೊಬ್ಬ ಮಹಿಳೆ **“ಈ ಏಳು ದಿನಗಳಲ್ಲಿ ನಮ್ಮ ಮನೆಯಲ್ಲೇ ನಾವು ಬಂಧಿಗಳಾಗಿದ್ದೆವು”** ಎಂದಳು.

ಕಾಶ್ಮೀರದ ವಿಶೇಷ ಸ್ಥಾನಮಾನದ ಅಂತ್ಯವೂ, ಅಮಿತ್ ಷಾ "ಅಭಿವೃದ್ಧಿ" ಅರ್ಥಶಾಸ್ತ್ರವೂ



ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370 ಮತ್ತು 35ಎ ವಿಧಿಗಳೇ ಆ ರಾಜ್ಯದಲ್ಲಿ ಅಭಿವೃದ್ಧಿಯಾಗದಿರಲು ಕಾರಣ ಎಂದು ಗೃಹಮಂತ್ರಿ ಅಮಿತ್ ಷಾ ಈ ವಿಧಿಗಳನ್ನು ಕೊನೆಗೊಳಿಸುವುದನ್ನು ಸಮರ್ಥಿಸಿಕೊಳ್ಳುತ್ತ ಹೇಳಿದ್ದಾರೆ. ಬಿಜೆಪಿಯ ಮುಖಂಡರುಗಳೆಲ್ಲರೂ ಈಗ ಜಪಿಸುತ್ತಿರುವ ಇದನ್ನು ದೇಶದ ಬಹಳಷ್ಟು ಮಂದಿ ನಂಬಿರುವಂತೆಯೂ ಕಾಣುತ್ತದೆ.
ಆದರೆ ಇದು ನಿಜವಲ್ಲ, ಇದು ಕಾಶ್ಮೀರಿ ಯುವಜನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಿಲ್ಲ, ಬದಲಿಗೆ ಕಡಿತಗೊಳಿಸುತ್ತದೆ. ಜತೆಗೆ, ಇದು, ದೇಶದಲ್ಲಿ ಪಾಳೇಗಾರಿ-ವಿರೋಧಿ ಭೂಸುಧಾರಣೆಗಳಿಗೆ ಮುನ್ನುಡಿ ಬರೆದ ರಾಜ್ಯಕ್ಕೆ ಒದಗಿರುವ ಈ ದುರ್ವಿಧಿಯನ್ನೇ ಅಮಿತ್ ಷಾ ಹೇಳುವ "ಅಭಿವೃದ್ಧಿ" ಎನ್ನುತ್ತಾರೆ ದೇಶದ ಹಿರಿಯ ಅರ್ಥಶಾಸ್ತ್ರಜ್ಞ

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಕಾಶ್ಮೀರದ ವಿಶೇಷ ಸ್ಥಾನಮಾನ ಕೊನೆಗೊಳಿಸುವ ನಡೆಯನ್ನು ಸಮರ್ಥಿಸಿಕೊಳ್ಳುವ ಸಂದರ್ಭದಲ್ಲಿ ರಾಜ್ಯ ಸಭೆಯಲ್ಲಿ ಗೃಹ ಮಂತ್ರಿ ಅಮಿತ್ ಷಾ ಕಾಶ್ಮೀರದ "ಅಭಿವೃದ್ಧಿ"ಯ ಪ್ರಶ್ನೆಯನ್ನು ತಮ್ಮ ಭಾಷಣದಲ್ಲಿ ತಂದರು. ಕಾಶ್ಮೀರವನ್ನು ಭಾರತದ ಉಳಿದ ಭಾಗಗಳೊಂದಿಗೆ ಗಾಢವಾಗಿ ಸಮಗ್ರಗೊಳಿಸುವುದರಿಂದ ಆ ಪ್ರದೇಶದಲ್ಲಿ ಹೂಡಿಕೆ ಹೆಚ್ಚುತ್ತದೆ ಎಂದು ವಾದಿಸಿದರು. ಕಾಶ್ಮೀರದ ಯುವಕರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಭರವಸೆಯ ಮೂಲಕ ತಮ್ಮ ಸರ್ಕಾರದ ಕ್ರಮವನ್ನು ಬೆಂಬಲಿಸುವಂತೆ ಅಮಿತ್ ಷಾ ವಿಶೇಷವಾಗಿ ಕಾಶ್ಮೀರದ ಯುವಕರಿಗೆ ಮನವಿ ಮಾಡಿದರು.

ಕಳೆದ 45 ವರ್ಷಗಳಲ್ಲೇ ನಿರುದ್ಯೋಗದ ಪರಿಸ್ಥಿತಿ ಅತಿ ಹೆಚ್ಚು ಹದಗೆಟ್ಟಿರುವ ಹಿನ್ನೆಲೆಯಲ್ಲಿ, ಭಾರತದ ಉಳಿದ ಭಾಗಗಳೊಂದಿಗೆ ಕಾಶ್ಮೀರವು ಗಾಢವಾಗಿ ಬೆಸೆದುಕೊಂಡರೆ ಅಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬುದಾಗಿ ಹೂಡಿರುವ ದಾವೆಯು ಒಂದು ವಿಡಂಬನೆಯೇ ಸರಿ. ಆದರೂ, ಉದ್ಯೋಗಾವಕಾಶಗಳ ಬಗ್ಗೆ ಅಮಿತ್ ಷಾ ಅವರ ವಾದನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ.

ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಇದೆಯೋ ಅಥವಾ ಇಲ್ಲವೋ ಎಂಬುದು ಒತ್ತಟ್ಟಿಗಿರಲಿ, ಸ್ಥಳಿಯವಾಗಿ ದೊರೆಯುವ ಕಚ್ಚಾ ಪದಾರ್ಥಗಳ ಸಂಸ್ಕರಣೆಗೆ ಸಂಬಂಧವಿಲ್ಲದ ಬೃಹತ್ ಕೈಗಾರಿಕೆಗಳು ಕಾಶ್ಮೀರಕ್ಕೆ ಹರಿದು ಬರುತ್ತವೆ ಎನ್ನುವುದೇ ಒಂದು ಅತ್ಯಂತ ಹಾಸ್ಯಾಸ್ಪದವಾದ ಸಂಗತಿ (ಅಮಿತ್ ಷಾರವರೇನೋ ಬೃಹತ್ ಕೈಗಾರಿಕೆಗಳು ಕಾಶ್ಮೀರಕ್ಕೆ ಹರಿದು ಬರಲಿವೆ ಎಂದಿದ್ದಾರೆ). ಒಂದು ಕಾರ್ಖಾನೆಯ ಸ್ಥಾಪನೆಗೆ ಸಂಬಂಧಿತ ಸಾಗಣೆ ವೆಚ್ಚಗಳು ಕಾಶ್ಮೀರದಲ್ಲಿ ವಿಪರೀತ ದುಬಾರಿಯಾಗುತ್ತವೆ. ಮತ್ತು, ಕಾಶ್ಮೀರದಲ್ಲಿ "ಹೊರಗಿನವರು" ಭೂಮಿ ಕೊಳ್ಳುವುದನ್ನು ನಿರ್ಬಂಧಿಸುವ 35೦ ವಿಧಿಯನ್ನು ರದ್ದು ಮಾಡಿರುವುದರಿಂದಾಗಿ ಭೂಮಿಯ ಬೆಲೆ ಏರುತ್ತದೆ – ಭವಿಷ್ಯದಲ್ಲಿ ಇದೊಂದು "ಸಕಾರಾತ್ಮಕ" ಬೆಳವಣಿಗೆಯಾಗಲಿದೆ ಎಂಬ ಅಂಶವನ್ನು ಸ್ವತಃ ಷಾ ಹೇಳಿದರು. ಹಾಗಾಗಿ, ಯಾರಾದರೂ ಮನಬಂದಂತೆ ಬೃಹತ್-ಕೈಗಾರಿಕೆಗಳನ್ನು ಕಾಶ್ಮೀರದಲ್ಲಿ ತೆರೆಯುತ್ತಾರೆ ಎಂಬುದು ಕೇವಲ ಒಂದು ಅಸಂಬದ್ಧವೇ. ಅಷ್ಟೇ ಏಕೆ, ಅದೇ ರೀತಿಯಲ್ಲಿ, ಯಾರಾದರೂ ಅಲ್ಲಿ ಮನಬಂದಂತೆ ಸಣ್ಣ-ಕೈಗಾರಿಕೆಗಳನ್ನು ತೆರೆಯುತ್ತಾರೆ ಎಂಬುದೂ ಅಷ್ಟೇ ಅಸಂಬದ್ಧ ಮಾತು.

ಆದ್ದರಿಂದ, ಕಾಶ್ಮೀರ ಕಣಿವೆಯಲ್ಲಿ ಉತ್ಕೃಷ್ಟವಾಗಿ ಬೆಳೆಯಬಹುದಾದ ಚಟುವಟಿಕೆಗಳೆಂದರೆ, ಅಲ್ಲಿ ಸ್ಥಳೀಯವಾಗಿ ದೊರೆಯುವ ಕಚ್ಚಾ ಪದಾರ್ಥಗಳನ್ನೇ ಬಳಸುವ ಚಟುವಟಿಕೆಗಳು ಮಾತ್ರ – ಅದು ಉಣ್ಣೆ ಇರಬಹುದು, ಅಥವಾ ಹಣ್ಣುಗಳೇ ಇರಬಹುದು, ಅಥವಾ ಮರಮಟ್ಟುಗಳೇ ಇರಬಹುದು, ಅಥವಾ ಮಾಂಸವೇ ಇರಬಹುದು. ಅಂತಹ ಚಟುವಟಿಕೆಗಳು ಕಾಶ್ಮೀರ ಕಣಿವೆಯಲ್ಲಿ ಈಗಾಗಲೇ ಸಧೃಢವಾಗಿ ನೆಲೆಗೊಂಡಿವೆ. ಈ ಚಟುವಟಿಕೆಗಳಿಗೆ ಈಗ ಬೇಕಿರುವುದು ಒಂದು ಒಳ್ಳೆಯ ಉತ್ತೇಜನವಷ್ಟೇ. ಅಂತಹ ಉತ್ತೇಜನ ದೊರೆಯಬೇಕಾದರೆ ರಾಜ್ಯದಲ್ಲಿ ಸಹಾನುಭೂತಿಯುಳ್ಳ ಒಂದು ಸರ್ಕಾರ ಇರಬೇಕಾಗುತ್ತದೆಯೇ ಹೊರತು, ವಿಶೇಷ ಸ್ಥಾನಮಾನ ಕೊನೆಗೊಳಿಸುವುದಲ್ಲ ಅಥವಾ "ಹೊರಗಿನವರು" ಭೂಮಿ ಕೊಳ್ಳುವುದರ ಮೇಲೆ ಇರುವ ನಿರ್ಬಂಧವನ್ನು ರದ್ದು ಮಾಡುವುದೂ ಅಲ್ಲ.

ನಿಜ, ಕಾಶ್ಮೀರವು ಉಳಿದ ಭಾರತದೊಂದಿಗೆ ಹೆಚ್ಚಿನ ಮಟ್ಟದಲ್ಲಿ ಮುಕ್ತವಾಗಿ ತೆರೆದುಕೊಂಡರೆ ಬಹುರಾಷ್ಟ್ರೀಯ ಕಂಪೆನಿಗಳೊ ಅಥವಾ ಭಾರತದ ದೊಡ್ಡ ದೊಡ್ಡ ಉದ್ದಿಮೆಗಳೋ ಅಲ್ಲಿ ಸ್ಥಾಪನೆಯಾಗಿ, ಇಂತಹ ಚಟುವಟಿಕೆಗಳನ್ನೇ ಅಭಿವೃದ್ಧಿಪಡಿಸುವ ಮೂಲಕ ಕಣಿವೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು ಎಂಬುದಾಗಿಯೂ ಯೋಚಿಸಬಹುದು. ಆದರೆ, ದೊಡ್ಡ ಬಂಡವಾಳವು, ಅದು ಭಾರತದ್ದೇ ಆಗಿರಲಿ ಅಥವಾ ವಿದೇಶದ್ದೇ ಆಗಿರಲಿ, ಸ್ಥಳೀಯ ಉತ್ಪಾದಕರು ತೊಡಗಿರುವ ಚಟುವಟಿಕೆಗಳಲ್ಲೇ ಕಾಲಿಟ್ಟಾಗ ಉದ್ಯೋಗಗಳು ಸ್ವಲ್ಪವೂ ಹೆಚ್ಚುವುದಿಲ್ಲ. ಬದಲಿಗೆ, ಸ್ಥಳೀಯ ಉತ್ಪಾದಕರ ಸ್ಥಾನವನ್ನು ಆಕ್ರಮಿಸುವುದರಿಂದ ಉದ್ಯೋಗಗಳು ಕುಗ್ಗುತ್ತವೆ. ಕಾಲಕ್ರಮದಲ್ಲಿ ಇಂತಹ ಚಟುವಟಿಕೆಗಳನ್ನು ವೃದ್ಧಿಸುವ ಅವಕಾಶಗಳಿದ್ದರೆ, ಅಂತಹ ಅವಕಾಶಗಳನ್ನು ಸ್ಥಳೀಯ ಉತ್ಪಾದಕರೇ ಬಳಸಿಕೊಳ್ಳುವಂತೆ ರಾಜ್ಯ ಸರ್ಕಾರವು ಅವರಿಗೆ ಸಹಾಯ ಮಾಡಬಹುದು. ಇಂತಹ ಸ್ಥಳೀಯ ಉತ್ಪನ್ನಗಳಿಗೆ ದೊಡ್ಡ ಉದ್ದಿಮೆಗಳು ಬಂದರೆ ಕ್ರಮೇಣ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆಯೇ ಹೊರತು ಖಂಡಿತವಾಗಿಯೂ ಹೆಚ್ಚುವುದಿಲ್ಲ

ಆದರೆ, ಅಮಿತ್ ಷಾ ಅವರ ಪ್ರಕಾರ ಕಾಶ್ಮೀರಿಗಳ ನಿಜವಾದ "ನಿರೀಕ್ಷೆ" ಹೊರಗಿನವರು ಭೂಮಿ ಕೊಳ್ಳಲು ಕಾಶ್ಮೀರ ಕಣಿವೆಯಲ್ಲಿ ಪ್ರವೇಶಿಸುವುದರಲ್ಲೇ ಅಡಗಿದೆ. ಹಿಮಾಚಲ ಪ್ರದೇಶ ಮತ್ತು ಇತರ ಗಡಿ ಭಾಗದ ಬೆಟ್ಟ-ಗುಡ್ಡಗಳ ರಾಜ್ಯಗಳಲ್ಲಿ ಹೊರಗಿನವರು ಭೂಮಿ ಕೊಳ್ಳುವುದರ ಮೇಲೆ ನಿರ್ಬಂಧ ಇರುವಾಗ, "ಅಭಿವೃದ್ಧಿ"ಯ ಹೆಸರಿನಲ್ಲಿ ಕಾಶ್ಮೀರ ಕಣಿವೆಯಲ್ಲಿ ಮಾತ್ರ ಭೂಮಿ ಕೊಳ್ಳುವುದರ ಮೇಲೆ ಇರುವ ನಿರ್ಬಂಧವನ್ನು ತೆಗೆಯಬೇಕು ಎನ್ನುವುದು ವಿಚಿತ್ರವೇ ಸರಿ. ಕೇವಲ ಭೂಮಿ ವ್ಯವಹಾರಗಳ ಉಬ್ಬರದಿಂದ ಕಾಶ್ಮೀರ ಕಣಿವೆಯ ಅಭಿವೃದ್ಧಿಯಾಗುತ್ತದೆಯೇ?

ಒಬ್ಬ ವ್ಯಕ್ತಿಯು ಭೂಮಿ ಕೊಳ್ಳುವಾಗ, ತಾನು ಹೊಂದಿರುವ ಯಾವುದೊ ಒಂದು ಆಸ್ತಿಯನ್ನು ಇನ್ನೊಂದು ಆಸ್ತಿ (ಭೂಮಿ) ಹೊಂದುವತ್ತ ಚಲಿಸುತ್ತಾನೆ. ಭೂಮಿ ಮಾರುವವನ ಪರಿಸ್ಥಿತಿಯೂ ಅದೇ ರೀತಿಯಲ್ಲಿಯೇ ಇರುತ್ತದೆ. ಹಾಗಾದರೆ, ಆ ಯಾವುದೊ ಒಂದು ಎಂದು ಹೇಳುವ ಆಸ್ತಿ ಯಾವುದು? ಕಾಶ್ಮೀರ ಕಣಿವೆಯಲ್ಲಿ ಭೂಮಿ ಕೊಳ್ಳುವ ಹೊರಗಿನವನು ತಾನು ಹೊಂದಿರುವ ಉತ್ಪಾದಕ ಆಸ್ತಿಯಿಂದ ಭೂಮಿ ಹೊಂದುವತ್ತ ಚಲಿಸಿದರೆ, ಉಳಿದ ಭಾರತಕ್ಕೆ ಆ ವ್ಯವಹಾರವು ಒಂದು ಹಿಮ್ಮುಖ ನಡೆಯಾಗುತ್ತದೆ. ಆ ವ್ಯವಹಾರವು ಆ ರೀತಿಯದೇ ಅಲ್ಲ ಎಂದು ಭಾವಿಸಿ, ಅಮಿತ್ ಷಾ ಅವರ ಕಲ್ಪನೆಗೆ ಹೊಂದುವಂತಹ ಒಂದು ಉದಾಹರಣೆ ತೆಗೆದುಕೊಳ್ಳೋಣ: ಭೂಮಿ ಕೊಳ್ಳುವವನು ತಾನು ಹೊಂದಿರುವ ನಗದು ಹಣದಿಂದ ಭೂಮಿ-ಆಸ್ತಿಯತ್ತ ಚಲಿಸುತ್ತಾನೆ. ಇದು ಉಳಿದ ಭಾರತದಲ್ಲಿ ಆಗುವ ಹೂಡಿಕೆಯಲ್ಲಿ ಕಡಿತವಾಗುವುದಿಲ್ಲ ಎಂದು ಮೊದಲ ನೋಟದಲ್ಲಿ ತೋರುತ್ತದೆ. ಕಾಶ್ಮೀರ ಕಣಿವೆಯಲ್ಲಿ ಭೂಮಿ ಕೊಳ್ಳುವವನು ಬ್ಯಾಂಕಿಂಗ್ ವ್ಯವಸ್ಥೆಯಿಂದ ಸಾಲ ಪಡೆಯುತ್ತಾನೆ, ಆತನಿಗೆ ಸಾಲ ಒದಗಿಸುವಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಯಾವುದೇ ಅಡಚಣೆಯಿಲ್ಲ ಎಂಬ ಒಂದು ಉದಾಹರಣೆಯನ್ನೇ ತೆಗೆದುಕೊಳ್ಳೋಣ.


ಈಗ ಒಂದು ಪ್ರಶ್ನೆ: ಭೂಮಿ ಮಾರಿದವರು ತಮಗೆ ಬಂದ ಹಣವನ್ನು ಏನು ಮಾಡುತ್ತಾರೆ? ಈಗ ತಾನೇ ಚರ್ಚಿಸಿರುವ ಕಾರಣಗಳಿಂದಾಗಿ, ಕಾಶ್ಮೀರ ಕಣಿವೆಯಲ್ಲಿ ಭೂಮಿ ಮಾರಿದವರು, ಕಣಿವೆಯಲ್ಲೇ ಹೂಡಿಕೆ ಮಾಡುವ ಸಂಭವ ಕಡಿಮೆಯೇ, ಬಹುಷಃ ಸ್ಥಳೀಯ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮಾಡುವ ಹೂಡಿಕೆಯನ್ನು ಹೊರತುಪಡಿಸಿದರೆ. ಆದರೆ, ಸ್ಥಳೀಯ ಸರಕುಗಳ ಉತ್ಪಾದನೆ ಹೆಚ್ಚಿಸುವ ಉದ್ದೇಶಕ್ಕಾಗಿ ಹೂಡಿಕೆ ಮಾಡಲು ಹಣಕಾಸಿನ ಕೊರತೆಯಂತಹ ಯಾವುದೇ ತೊಂದರೆಯಿತ್ತು ಎಂಬುದನ್ನು ನಂಬಲು ಕಾರಣವೇ ಇಲ್ಲ. ಸ್ಥಳೀಯ ಸರಕುಗಳ ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವಂತಹ ಅವಕಾಶ ಇರಬಹುದು. ಅದಕ್ಕೆ ರಾಜ್ಯ ಸರ್ಕಾರದ ಉತ್ಸಾಹಪೂರ್ಣ ಭಾಗವಹಿಸುವಿಕೆ ಇರಬೇಕಾಗುತ್ತದೆ. ಆದ್ದರಿಂದ, ಭೂಮಿ ಮಾರಿ ಕೈಯಲ್ಲಿ ಹಣ ಇಟ್ಟುಕೊಳ್ಳುವುದೇ ಉತ್ಪಾದನೆ ಹೆಚ್ಚಿಸುವತ್ತ ಕೊಂಡೊಯ್ಯುವುದಿಲ್ಲ. ಉತ್ಪಾದನೆ ಹೆಚ್ಚಿಸುವಂತಹ ಅವಕಾಶ ಇದ್ದಿದ್ದರೆ ಭೂಮಿಯ ವ್ಯಾಪಾರ ಇಲ್ಲದಿದ್ದರೂ ಹೂಡಿಕೆಯಾಗುತ್ತಿತ್ತು. ಹಾಗಾಗಿ, ಭೂಮಿ ಮಾರಿದ ಹಣವನ್ನು, ಬಹುತೇಕವಾಗಿ, ಬ್ಯಾಂಕ್‌ನಲ್ಲಿ ಠೇವಣಿ ಇಡಬೇಕಾಗುತ್ತದೆ.

ಇಂತಹ ಹಣ ಬ್ಯಾಂಕ್‌ನಲ್ಲಿ ಠೇವಣಿಯಾದಾಗ ಅದು ಸಾಮಾನ್ಯವಾಗಿ ಸ್ಥಳೀಯವಾಗಿ ಸಾಲ ಕೊಡಲು ಬಳಕೆಯಾಗುವುದಿಲ್ಲ ಎಂಬುದು ಒಂದು ದಿನ ನಿತ್ಯದ ಸತ್ಯ. ಒಂದೋ ಅದು ಕಾಶ್ಮೀರದ ಹೊರಗೆ ಸಾಲ ಕೊಡಲು ಬಳಕೆಯಾಗುತ್ತದೆ ಇಲ್ಲವೇ, ಹೆಚ್ಚೆಂದರೆ, ಸ್ಥಳಿಯ ಬ್ಯಾಂಕ್‌ಗಳಲ್ಲಿ ನಿಷ್ಕ್ರಿಯವಾಗಿ ಬಿದ್ದಿರುತ್ತದೆ. ಆದ್ದರಿಂದ, ಇಲ್ಲಿ ಆಗಬಹುದಾದದ್ದು ಏನೆಂದರೆ, ಪುಡಿಗಾಸಿಗಾಗಿ ಅತ್ತ ಹೊರಗಿನವರಿಗೆ ಕಣಿವೆ ಭೂಮಿ ಮಾರಿ ಇದ್ದದ್ದನ್ನು ಕಳೆದುಕೊಳ್ಳುವ ಮತ್ತು ಆ ಪುಡಿಗಾಸು ಇತ್ತ ಕಣಿವೆಯಿಂದ ಸೋರಿ ಹೋಗುವ ಒಂದೇ ಒಂದು ಬದಲಾವಣೆ. ಹಾಗಾಗಿ, ಇಂತಹ ಬದಲಾವಣೆಯಿಂದಾಗಿ ಅತ್ತ ಕಿಂಚಿತ್ "ಅಭಿವೃದ್ಧಿ"ಯೂ ಇಲ್ಲ, ಇತ್ತ ಉದ್ಯೋಗಗಳೂ ಹೆಚ್ಚುವುದಿಲ್ಲ.

ಇನ್ನೊಂದು ಕಡೆಯಲ್ಲಿ, ಎಷ್ಟು ಭೂಮಿ ಕೈ ಬದಲಾಯಿಸಿತೊ ಅದರಲ್ಲಿ, ಈ ಬದಲಾವಣೆಗೆ ಮೊದಲು ನಡೆಯುತ್ತಿದ್ದ ಅಷ್ಟೊ ಇಷ್ಟೊ ಚಟುವಟಿಕೆಗಳು ಕೈ ಬದಲಾವಣೆಯ ಕಾರಣದಿಂದಾಗಿ ನಿಂತು ಹೋಗುತ್ತವೆ. ಏಕೆಂದರೆ, ಹೊರಗಿನ ಖರೀದಿದಾರರು ಭೂಮಿಯ ಬೆಲೆ ಏರಿದಾಗ ಮಾರುವ, ಇಲ್ಲವೇ, ಕಣಿವೆಯ ಆ ಭೂಮಿಲ್ಲಿ ತಮಗೊಂದು ಬೇಸಿಗೆ ವಿಶ್ರಾಂತಿ ಧಾಮ ನಿರ್ಮಿಸಿಕೊಳ್ಳುವ ಹವಣಿಕೆಯಲ್ಲಿರುತ್ತಾರೆ.

ಹೀಗೆ ಯಾವ ರೀತಿಯಲ್ಲಿ ನೋಡಿದರೂ, ಕಾಶ್ಮೀರದ ವಿಶೇಷ ಸ್ಥಾನಮಾನ ಕೊನೆಗೊಳಿಸುವ ಮತ್ತು ಹೊರಗಿನವರು ಭೂಮಿ ಕೊಳ್ಳುವುದರ ಮೇಲೆ ಇದ್ದ ನಿರ್ಬಂಧವನ್ನು ರದ್ದು ಮಾಡುವ

ಪುಟ 14 ಕ್ಕೆ



ಕಳೆದ 45 ವರ್ಷಗಳಲ್ಲೇ ನಿರುದ್ಯೋಗದ ಪರಿಸ್ಥಿತಿ ಅತಿ ಹೆಚ್ಚು ಹದಗೆಟ್ಟಿರುವ ಹಿನ್ನೆಲೆಯಲ್ಲಿ, ಭಾರತದ ಉಳಿದ ಭಾಗಗಳೊಂದಿಗೆ ಕಾಶ್ಮೀರವು ಗಾಢವಾಗಿ ಬೆಸೆದುಕೊಂಡರೆ ಅಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂಬುದಾಗಿ ಹೂಡಿರುವ ದಾವೆಯು ಒಂದು ವಿಡಂಬನೆಯೇ ಸರಿ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು
ಟೈಂಸ್ ಆಫ್ ಇಂಡಿಯ

ಹಿಂದುತ್ವ-ಕಾರ್ಪೋರೇಟ್‌ಗಳ ಮೈತ್ರಿ ಕೂಟವಾಗಿರುವ ಈ ಸರಕಾರ ಕಾಶ್ಮೀರ ಕಣಿವೆಯ ಬಾಗಿಲನ್ನು ಕಾರ್ಪೋರೇಟ್ ಆಶ್ರಯದಾತರಿಗೆ ತೆರೆದಿರುವುದು ಅಲ್ಲಿ ಉತ್ಪಾದನೆ ಸಂಬಂಧಿತ ಆರ್ಥಿಕ ಚಟುವಟಿಕೆ ಹೆಚ್ಚಿಸುವುದಕ್ಕಲ್ಲ, ಬದಲಿಗೆ ರಿಯಲ್ ಎಸ್ಟೇಟ್ ಬೆಳೆಸಲಿಕ್ಕೆ, ಭೂಮಿಯ ಬೆಲೆಗಳಲ್ಲಿ ಜೂಜುಗಾರಿಕೆಗೆ. ರಿಯಲ್ ಎಸ್ಟೇಟ್ ಚಟುವಟಿಕೆಗಳು ಉದ್ಯೋಗಾವಕಾಶಗಳ ಮಟ್ಟವನ್ನೇನೂ ಹೆಚ್ಚಿಸುವುದಿಲ್ಲ. ಮಾರುವ ಮುನ್ನ ಆ ಭೂಮಿ ಉತ್ಪಾದಕ ಚಟುವಟಿಕೆಗಳಿಗೆ ಬಳಕೆಯಾಗುತ್ತಿದ್ದರಂತೂ ಅವು ಉದ್ಯೋಗಾವಕಾಶವನ್ನು ಕಡಿತ ಮಾಡುತ್ತವೆ.



ವ್ಯಂಗ್ಯಚಿತ್ರ: ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್

ದಮನಿತರಿಗೆ ದೊರೆಯದ ಸ್ವಾತಂತ್ರ್ಯ

47 ರ ಸ್ವಾತಂತ್ರ್ಯ..... ಪುಟ 6 ರಿಂದ

ವ್ಯವಸ್ಥೆಯಿಂದಾಗಿ ಈ ದುರಂತ ನಡೆದಿದೆ ಎನ್ನಲಾಗಿದೆ. ಪ್ರಕರಣವನ್ನು ಪೊಲೀಸ್ ದಾಖಲಿಸಿ ಕೊಂಡಿದ್ದಾರೆ. ಇದು ಎಸ್.ಸಿ. ಹಾಸ್ಟಲ್‌ಗಳನ್ನು ಸರ್ಕಾರಗಳು ಹೇಗೆ ಕಡೆಗಣಿಸಿದ್ದಾರೆ ಎಂಬ ಶೋಚನೀಯ ಪರಿಸ್ಥಿತಿಗೆ ಒಂದು ಉದಾಹರಣೆ.

ಜುಲೈ 16: ಮಂಡ್ಯ ಜಿಲ್ಲೆಯಲ್ಲಿ ದಲಿತ ರಾಮಕೃಷ್ಣಯ್ಯನಿಗೆ ಸೇರಿದ್ದ, ಜಮೀನನ್ನು, ಜೆಡಿಎಸ್‌ನ ಮಾಜಿ ಶಾಸಕ ಪ್ರಕಾಶ್‌ನ ಸಹೋದರ, ಪೊಲೀಸ್‌ರ ಸಹಕಾರದೊಂದಿಗೆ ವಶಪಡಿಸಿಕೊಂಡಿದ್ದಾರೆ. ರಾಮಕೃಷ್ಣಯ್ಯ ಮತ್ತು ಇವನ ಸಹೋದರರಿಗೆ ಥಳಿಸಿ ಗಾಯಗೊಳಿಸಿದ್ದಾರೆ. ಇವನ ತೆಂಗಿನ ತೋಪಿನಲ್ಲಿದ್ದ ಎಲ್ಲಾ ತೆಂಗಿನ ಕಾಯಿಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಪೊಲೀಸ್ ನವರಿಗೆ, ದೂರು ಸಲ್ಲಿಸಿದಾಗ, ಅವರು ಮಾಜಿ ಶಾಸಕರೊಂದಿಗೆ ಸೇರಿಕೊಂಡು, ರಾಮಕೃಷ್ಣಯ್ಯನಿಗೆ ಸೇರಿದ್ದ ಪಿತ್ರಾರ್ಜಿತ ಭೂಮಿಯನ್ನು ಕಿತ್ತುಕೊಳ್ಳಲು ಸಹಕರಿಸಿದ್ದಾರೆ.

ಜುಲೈ 19: ತುಮಕೂರು ಜಿಲ್ಲೆಯ, ಕೊರಟಗೆರೆ ತಾಲ್ಲೂಕಿನ, ಮಲ್ಲೆಕಾವು ಗ್ರಾಮದಲ್ಲಿ ನಡೆಯುತ್ತಿದ್ದ, ಗ್ರಾಮದ ದೇವತೆ ಜಾತ್ರೆಯ ಸಂದರ್ಭದಲ್ಲಿ ದಲಿತ ಜಗದೀಶ್ ಮತ್ತು ಇವನ ಕುಟುಂಬದ ಸದಸ್ಯರು, ಜಾತ್ರೆಯ ಪ್ರಯುಕ್ತ ಪೂಜೆಯನ್ನು ಸಲ್ಲಿಸಲು ದೇವಸ್ಥಾನದ ಒಳಗಡೆ ಪ್ರವೇಶಿಸಿದಾಗ, ಅಲ್ಲಿನ ಕಾಂಗ್ರೆಸ್ ನಾಯಕ ಸೋಮಯ್ಯ, ಮತ್ತು ಅವನ ಗೂಂಡಾ ಗುಂಪು, ಜಗದೀಶ್ ಮತ್ತು ಅವನ ಪತ್ನಿ, ಹಾಗೂ ಕುಟುಂಬದ ಸದಸ್ಯರ ಮೇಲೆ, ಆಕ್ರಮಣ ಮಾಡಿ ಹಲ್ಲೆ ಮಾಡಡಿ ಅವಮಾನಿಸಿದ್ದಾರೆ. ಅಷ್ಟಕ್ಕೇ, ಸಮ್ಮನಿರದೆ ದೇವಸ್ಥಾನವನ್ನು ಪ್ರವೇಶಿಸಿ, ಅಶುದ್ದ ಗೊಳಿಸಿದಕ್ಕೆ, ಪಂಚಾಯಿತಿ ಸೇರಿಸಿ ಅವನಿಗೆ ರೂ.25,000/– ದಂಡ ವಿಧಿಸಲಾಯಿತು. ಇದರೊಂದಿಗೆ, ಅಸ್ಪೃಶ್ಯತೆಯಿಂದ ದೇವಸ್ಥಾನವನ್ನು ಅಶುದ್ದಗೊಳಿಸಿದ ಕಾರಣ, ಇಡೀ ದೇವಸ್ಥಾನದ ಎಲ್ಲಾ ಗೋಡೆಗಳಿಗೆ ಹೊಸದಾಗಿ ಸುಣ್ಣ–ಬಣ್ಣವನ್ನು ಅವನಿಂದಲೇ ಹಚ್ಚಿಸಲಾಯಿತು.

ಜುಲೈ 27: ತೆಲಂಗಾಣ ರಾಜ್ಯದಲ್ಲಿ, ಅತ್ಯುತ್ತಮ ದಾಖಲೆ ಹೊಂದಿದ್ದ, ದಲಿತ ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಮುರಳಿ, ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತಾ ಕಿರುಕುಳವನ್ನು ಸಹಿಸಲಾಗದೆ, ತನ್ನ ವೃತ್ತಿಯಿಂದ, ವಿ.ಆರ್.ಎಸ್. ತೆಗೆದುಕೊಳ್ಳಬೇಕಾದ ಅಮಾನವೀಯ ಸಂದರ್ಭ ಒದಗಿ ಬಂದಿದೆ. ದಲಿತ ಐ.ಎ.ಎಸ್. ಅಧಿಕಾರಿಗಳು ಸಾಕಷ್ಟು ರೀತಿಯಲ್ಲಿ ಜಾತಿ ತಾರಮ್ಯಕ್ಕೆ ಸಿಕ್ಕಿ ನರಳುತ್ತಿದ್ದಾರೆ ಎಂದು ಅವರು ತಮ್ಮ ಸ್ವಂತ ಅನುಭವವನ್ನು ಹೇಳಿಕೊಂಡಿದ್ದಾರೆ. ಸರ್ಕಾರದ ಉನ್ನತ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ದಲಿತ ಅಧಿಕಾರಿಗಳು, ಜಾತಿ ತಾರತಮ್ಯದ ಕಿರುಕುಳವನ್ನು ಸಹಿಸಲಾರದೆ, ಮುಂದಿನ ದಿನಗಳಲ್ಲಿ ಸೇವೆಯಿಂದ ವಿ.ಆರ್.ಎಸ್. ತೆಗೆದುಕೊಳ್ಳಲು ಯೋಚಿಸುತ್ತಿದ್ದಾರೆ ಎನ್ನಲಾಗಿದೆ.

ಈ ಕಾಲಾವಧಿ ಯಲ್ಲಿ,ಅಸ್ಸಾಂ ರಾಜ್ಯದಲ್ಲಿ ರಾಷ್ಟ್ರೀಯ ಪೌರತ್ವ ನೊಂದಾಣಿ (ಎನ್.ಸಿ.ಆರ್) ಪೂರ್ಣಗೊಳಿಸುವ ಪ್ರಕ್ರಿಯೆಯಲ್ಲಿ, ಅನೇಕ ಜನರು ಮತ್ತು ಕುಟುಂಬಗಳ ಜೀವನವನ್ನು ಹಾಳುಗೆಡವುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ದಲಿತರಿಗೆ ಪೌರತ್ವವನ್ನು ನಿರಾಕರಿಸಲಾಗುತ್ತಿದೆ. ದಲಿತರಿಗೆ ಇರುವ ಕಡಿಮೆ ಸಾಕ್ಷರತೆಯ ಮಟ್ಟ ಮತ್ತು ಬಡತನದಿಂದಾಗಿ, ತಮ್ಮ ಪೌರತ್ವವನ್ನು ಯಶಸ್ವಿಯಾಗಿ ಸಾಬೀತು ಪಡಿಸಲು ನಿಗದಿ ಪಡಿಸಿರುವ ಕಠಿಣ ಷರತ್ತು ಗಳನ್ನು ಅನುಸರಿಸುವುದು ದಲಿತರಿಗೆ ಬಹಳ ಕಷ್ಟಕರವಾಗಿದೆ.

ಒಟ್ಟಾರೆಯಾಗಿ, ದಲಿತರು ಮತ್ತು ಇತರೆ, ದುರ್ಬಲ ವರ್ಗಗಳ ಮೇಲೆ ಹೆಚ್ಚುತ್ತಿರುವ ದಾಳಿಯ ಹಿನ್ನೆಲೆಯಲ್ಲಿ, ಆಕ್ರಮಣಕಾರಿ ಜಾತಿ ಪೂರ್ವಾಗ್ರಹ ವಾತಾವರಣವು ಹೆಚ್ಚಿನ ಮಟ್ಟದಲ್ಲಿ ಸ್ವೀಕಾರಾರ್ಹ ವಾಗಿರುವುದನ್ನು ಗಮನಿಸಬೇಕಾಗಿದೆ. ಜುಲೈ 23 ರಂದು, ಪ್ರಸಕ್ತ ಕೇರಳ ಹೈಕೋರ್ಟಿನ ನ್ಯಾಯಾಧೀಶರು ಮೀಸಲಾತಿ ಬಗ್ಗೆ ಬ್ರಾಹ್ಮಣರಿಗೆ ಇರುವ ಅಂತರ್ಗತ ಸಂಬಂಧ ಮತ್ತು ಗುಣಗಳನ್ನು ಶ್ಲಾಘಿಸಿದ್ದು ಇದಕ್ಕೆ ಒಂದು ಉದಾಹರಣೆಯಾಗಿದೆ.

ದಲಿತರ ಮೇಲಿನ ದೌರ್ಜನ್ಯ ಮತ್ತು ದೈಹಿಕ ದಾಳಿಯ ಜೊತೆಗೆ, ದಲಿತ ಸಮುದಾಯವನ್ನು ಸರ್ಕಾರದ ನೀತಿಗಳಿಂದಾಗಿ ಜಾತಿ ತಾರತಮ್ಯ ಕ್ಕೆ ಹಾಗೂ ಹಿಂಜರಿತಕ್ಕೆ ನೂಕುತ್ತಿದೆ. ಉದಾಹರಣೆಗೆ, ಶಿಕ್ಷಣ ಸಂಸ್ಥೆಗಳಲ್ಲಿ ದಲಿತರನ್ನು ತೀವ್ರ ತರದಲ್ಲಿ ಅವಮಾನಿಸಲಾಗುತ್ತಿದೆ. ಇಂಡಿಯನ್ನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಯಲ್ಲಿ ಕಳೆದ ಎರಡು ವರ್ಷಗಳಲ್ಲಿ 1100 ಕ್ಕೂ ಹೆಚ್ಚು ಎಸ್.ಸಿ/;ಎಸ್.ಟಿ ವಿದ್ಯಾರ್ಥಿಗಳನ್ನು ಅಧ್ಯಕ್ಷರೆಂದು ಕೈ ಬಿಡಲಾಗಿದೆ. ಇದನ್ನು ಖಂಡಿತ ಸಹಿಸಲಾಗದು.

ದಲಿತ್ ಸಂಶೋದಕ ರೋಹಿತ್ ವೇಮುಲಾ ರವರು, 'ಸಾಂಸ್ಥಿಕ ಹತ್ಯೆಗೆ' ಬಲಿಯಾದ ನಂತರದಿಂದಲೂ, ದಲಿತ ಮತ್ತು ದುರ್ಬಲ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ರಕ್ಷಿಸುವ ಒಂದು ಕಾನೂನು ಬೇಕೆಂಬ ಬೇಡಿಕೆ ಇದೆ. ಆದರೆ, ಅದನ್ನು ನಿರ್ಲಕ್ಷ್ಯ ಮಾಡಲಾಗಿದೆ. ಈಗ ಸರ್ಕಾರವು ತನ್ನ ಕರಡು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹೊರತಂದಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷವಾಗಿ ಉನ್ನತ ಶಿಕ್ಷಣದ ಎಲ್ಲಾ ಕಲ್ಯಾಣ ಕ್ರಮಗಳನ್ನು ತುಂಬಾ ಹಾನಿಕಾರಕ ಪರಿಣಾಮಗಳೊಂದಿಗೆ ಮೊಟಕುಗೊಳಿಸುತ್ತಿದೆ.

2014–2015 ರಿಂದ 2019–2020 ರ ಈ ಅವಧಿಯಲ್ಲಿ ಎಸ್.ಸಿ/ಎಸ್.ಟಿ ಕಲ್ಯಾಣಕ್ಕಾಗಿ ನಿಗದಿತ ಪಡಿಸಿದ್ದ 7.5 ಲಕ್ಷ ಕೋಟಿ ರೂಪಾಯಿಗಳನ್ನು ಸರಿಯಾಗಿ ಖರ್ಚು ಮಾಡಿಲ್ಲ. ಇಲ್ಲಿ ಮತ್ತೊಂದು ಅಘಾತಕಾರಿ ಸಂಗತಿಯೆಂದರೆ ಈ ಹಣವು ಕೂಡ ಒಟ್ಟು ಹಂಚಿಕೆಯ ಶೇ.70.16 ರಷ್ಟು ಮಾತ್ರ. ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಪ್ರಸ್ತಾಪಿಸಿದ 2019–2020 ರ ಬಜೆಟ್ ನಲ್ಲಿ ಎಸ್.ಸಿ/ಎಸ್.ಟಿ ಸಮುದಾಯಗಳ ಉದ್ಯೋಗ ಮತ್ತು ಪ್ರಗತಿಯ ಮೇಲೆ ಪರಿಣಾಮ ಬೀರುವ ವಿವಿಧ ಕ್ಷೇತ್ರಗಳಲ್ಲಿನ ವೆಚ್ಚವನ್ನು ತೀವ್ರ ವಾಗಿ ಕಡಿತಗೊಳಿಸಿದೆ.

ಎಸ್.ಸಿ ಸಮುದಾಯಗಳಿಗೆ ಕಲ್ಯಾಣ ಯೋಜನೆಗಳ ಒಟ್ಟು ವಿನಿಯೋಗವು ಒಟ್ಟು ಬಜೆಟ್‌ನ ಶೇ.2.92 ರಷ್ಟು ಮಾತ್ರವೇ. ನೈರ್ಮಲ್ಯ ಕಾರ್ಮಿಕರ ಭಯಾನಕ ಸಂಖ್ಯೆಯ ಸಾವು ಮತ್ತು ಅವರು ಕೆಲಸ ಮಾಡುವ ಶೋಚನೀಯ ಪರಿಸ್ಥಿತಿಗಳ ವಿರುದ್ಧ ಆಕ್ರೋಶದ ಹೊರತಾಗಿಯೂ, ಈ ಅನಾಗರಿಕ ವ್ಯವಸ್ಥೆ ಯನ್ನು ಕೊನೆಗಾಣಿಸಲು ಬಜೆಟ್ ಬಹುತೇಕ ಏನನ್ನೂ ಮಾಡುವುದಿಲ್ಲ. ಅವರ ಕುಟುಂಬದ ಮಕ್ಕಳ ಶಿಕ್ಷಣಕ್ಕಾಗಿ ಸಹಾ ಸೂಕ್ತ ಹಣದ ಹಂಚಿಕೆಯನ್ನು ಒದಗಿಸದೇ ಇರುವುದು ಖಂಡನೀಯ. ಎಲ್ಲಾ ಹಂತಗಳಲ್ಲೂ ಎಸ್.ಸಿ. ಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ನೀಡಲಾಗುವ ಹಣವು ಕೂಡ, ಹಿಂದಿನ 2014 ರಿಂದ 2017ರ ವರ್ಷಗಳಿಗಿಂತಲೂ ತೀರ ಕಡಿಮೆಗೊಂಡಿದೆ. ಎಸ್ಸಿ/ ಎಸ್ಟಿ ಉಪಯೋಜನೆಯನ್ನು ಸ್ಥಗಿತಗೊಳಿಸಿ, ಹಾನಿಕಾರಕ ಪರಿಸ್ಥಿತಿಗೆ ಕಾರಣವಾಗಿದೆ.

ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಆಧುನಿಕತೆಯ ಹೆಸರಿನಲ್ಲಿ ಮತ್ತು ತಂತ್ರಜ್ಞಾನ ಅಭಿವೃದ್ಧಿ ನೆಪದಲ್ಲಿ, ಭೂಸ್ವಾದೀನ ಕಾನೂನುಗಳಲ್ಲಿ ತಂದ ತಿದ್ದುಪಡಿಗಳು ಮತ್ತು ಅವುಗಳ ಕಠಿಣ ಅನುಷ್ಠಾನದ ಮೂಲಕ ಎಸ್.ಸಿ. ಮತ್ತು ಎಸ್.ಟಿ. ಅಂದರೆ, ಬುಡಕಟ್ಟು ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರ ತಲೆಮಾರುಗಳ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಅತ್ಯಾಚಾರ–ಕಾರ್ಯಗಳು ಪ್ರತಿನಿತ್ಯ ಹೆಚ್ಚಾಗುತ್ತಿವೆ. ಸರ್ಕಾರಗಳು ಮತ್ತು ಕಾರ್ಪೋರೆಟ್‌ಗಳು ಇಬ್ಬರೂ ಇದಕ್ಕೆ ಕಾರಣಕರ್ತರಾಗಿರುತ್ತಾರೆ. ಸಹಜವಾಗಿಯೇ, ಕಾರ್ಪೋರೆಟ್ ಗಳಿಗೆ ಸರಕಾರದ ಬೆಂಬಲವಿರುತ್ತದೆ.

ಇದಕ್ಕೆ ಒಂದು ಭಯಂಕರ ವಾದ ಉದಾಹರಣೆಯನ್ನು ನೀಡಬಹುದು. ಜುಲೈ 17 ರಂದು, ಉತ್ತರ ಪ್ರದೇಶ ರಾಜ್ಯದ ಸೋನಾಭದ್ರ ಜಿಲ್ಲೆಯಲ್ಲಿ 32 ಟ್ರ್ಯಾಕ್ಟರ್ ಗಳು ಮತ್ತು ಟ್ರ್ಯಾಲಿಗಳಲ್ಲಿ ಪ್ರಬಲ ಜನರು ಪ್ರಮುಖವಾಗಿ ಎಲ್ಲರೂ ಮೇಲ್ಜಾತಿಯವರು, ನೂರಾರು ಶಸ್ತ್ರಸಜ್ಜಿತ ವ್ಯಕ್ತಿಗಳೊಂದಿಗೆ, ಹಗಲು ಹೊತ್ತಿನಲ್ಲಿಯೇ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಬಡ ಆದಿವಾಸಿ ರೈತರ ಮೇಲೆ ಹಲ್ಲೆ ನಡೆಸಿದ ಪರಿಣಾಮದಿಂದಾಗಿ, 3 ಮಂದಿ ಮಹಿಳೆಯರು ಸೇರಿದಂತೆ, 10 ಜನರು ಕೊಲ್ಲಲ್ಪಟ್ಟರು ಹಾಗೂ ಅನೇಕರು ತೀವ್ರವಾಗಿ ಗಾಯುಗೊಂಡರು.

ಈ ಹಿನ್ನೆಲೆಯಲ್ಲಿ, ದಲಿತ ಸಮುದಾಯದ ಸ್ಥಿತಿಗತಿ ತುಂಬಾ ಶೋಚನೀಯವಾಗಿದೆ. ಎಲ್ಲರೂ ನಿರ್ಣಾಯಕ ಪಾತ್ರವನ್ನು ನಿರ್ವಹಿಸ ಬೇಕಾದ ಸಂದರ್ಭವಿದಾಗಿದೆ. ಪ್ರಜಾಸತ್ತಾತ್ಮಕ ಚಳುವಳಿಗಳು, ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಗಳು/ಸಂಘಟನೆಗಳು ಹಾಗೂ ಗುಂಪುಗಳು, ಉತ್ಸಾಹ ಭರಿತ ವ್ಯಕ್ತಿಗಳು ಮತ್ತು ರಾಜಕೀಯ ಪಕ್ಷಗಳು ದಲಿತರ ಹಕ್ಕುಗಳನ್ನು ಬೆಂಬಲಿಸಲು ಮುಂದೆ ಬಂದು ಧ್ವನಿ ಎತ್ತಬೇಕು. ವಿವಿಧ ಸರ್ಕಾರಗಳು ಮಾಡುತ್ತಿರುವ ಗಂಭೀರ ಅನ್ಯಾಯಗಳ ವಿರುದ್ದ ಮಾತನಾಡುವುದು ಅಗತ್ಯವಿದೆ ಮತ್ತು ಒಗ್ಗಟ್ಟಿನಿಂದ ಹೋರಾಟಕ್ಕೆ ಸಂಪೂರ್ಣ ವಾಗಿ ಸಜ್ಜಾಗ ಬೇಕಾದ ಅವಶ್ಯಕತೆ ಇಂದಿನ ಆದ್ಯತೆ ಮತ್ತು ಕರ್ತವ್ಯವಾಗಿದೆ. ●

ಅಮಿತ್ ಷಾ "ಕಾಶ್ಮೀರ ಅಭಿವೃದ್ಧಿ" ಅರ್ಥಶಾಸ್ತ್ರ....

ಪುಟ 13 ರಿಂದ

ಕ್ರಮಗಳಿದಿಂದಾಗಿ ಅಲ್ಲಿ ಉದ್ಯೋಗಾವಕಾಶಗಳು ಕಿಂಚಿತ್ತೂ ಹೆಚ್ಚುವುದಿಲ್ಲ. ಬದಲಾಗಿ, ಕಣಿವೆಯ ಭೂಮಿಯು ದಿಲ್ಲಿಯ ಅಥವಾ ಮುಂಬೈನ ಶ್ರೀಮಂತರ ಕೈಗೆ ಹಸ್ತಾಂತರವಾಗುತ್ತಿದ್ದಂತೆಯೇ ಕಣಿವೆಯಲ್ಲಿ ಉದ್ಯೋಗಾವಕಾಶಗಳು ಬಹುತೇಕ ಕುಸಿಯುತ್ತವೆ.

ವಿಶೇಷ ಸ್ಥಾನಮಾನ ರದ್ದು ಮಾಡುವ ಕ್ರಮದಿಂದ ಕಾಶ್ಮೀರದ ಅಭಿವೃದ್ಧಿ ನಿಜಕ್ಕೂ ಯಶಸ್ವಿಯಾಗುವ ಸಂಭವ ಇತ್ತು ಎನ್ನುವುದಾದರೆ, ಕೇಂದ್ರ ಸರ್ಕಾರವು ವಿಶೇಷ ಸ್ಥಾನಮಾನ ರದ್ದು ಮಾಡುವ ಮೊದಲೇ ಇಬ್ಬರು ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ ರಾಜ್ಯದ ರಾಜಕೀಯ ನಾಯಕರನ್ನು ಬಂಧಿಸುವುದು ಅಗತ್ಯವೆಂದು ಭಾವಿಸುತ್ತಿರಲಿಲ್ಲ. ಹಾಗಾಗಿ, ವಿಶೇಷ ಸ್ಥಾನಮಾನದ ರದ್ದತಿಯನ್ನು ಅನಿವಾರ್ಯವಾಗಿ ಹಿಂಬಾಲಿಸುವ ಹಿಂಸೆಯಿಂದಾಗಿ ಅಲ್ಲಿ ಜನರಿಗೆ ಅನ್ನ ಒದಗಿಸುವ ಪ್ರಧಾನ ಚಟುವಟಿಕೆಯಾಗಿದ್ದ ಪ್ರವಾಸೋದ್ಯಮವೂ ಬಹಳ ದಿನಗಳವರೆಗೆ ಕುಂಠಿತಗೊಳ್ಳುವುದರಿಂದ ಕಾಶ್ಮೀರಿ ಯುವಕರಿಗೆ ಉದ್ಯೋಗ ಲಭಿಸುವುದು ಇನ್ನೂ ಹೆಚ್ಚು ಕಷ್ಟಕರವಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಜನರನ್ನು ದಾರಿ ತಪ್ಪಿಸುವ ಉದ್ದೇಶದಿಂದ ಈಗ "ಅಭಿವೃದ್ಧಿ"ಯ ಘೋಷಣೆ ಮೊಳಗುತ್ತಿದೆ. ಹಾಗಾದರೆ, ಕೇಂದ್ರ ಸರ್ಕಾರವು ಈಗ ಏನನ್ನು ಮಾಡಿದೆಯೋ ಅದನ್ನು ಮಾಡಿರುವುದಾದರೂ ಏಕೆ? ಸಾಮಾನ್ಯವಾದ ಒಂದು ಉತ್ತರವೆಂದರೆ, ಅದು, ಹಿಂದುತ್ವವಾದಿಗಳ ಬಹಳ ವರ್ಷಗಳ ಬೇಡಿಕೆ. ಅವರ ಕಣ್ಣು ದೇಶದ ಏಕ ಮಾತ್ರ ಮುಸ್ಲಿಂ ಬಾಹುಳ್ಯದ ರಾಜ್ಯದ ಜನ ಸಂಖ್ಯೆಯ ಸಂಯೋಜನೆಯನ್ನು ಇಸ್ರೇಲ್ ಪ್ಯಾಲೆಸ್ತೀನಿಯರ ಜಮೀನು ಕಬಳಿಸುತ್ತಿರುವ ರೀತಿಯಲ್ಲಿ ಬದಲಿಸುವತ್ತ ನೆಟ್ಟಿದೆ.

ಇದು ನಿಜವಿದೆಯಾದರೂ ಸಹ, ಮತ್ತೊಂದು ಸಂಭವನೀಯ ಉದ್ದೇಶವನ್ನು ನಾವು ಕಡೆಗಣಿಸುವಂತಿಲ್ಲ. ವಾಸ್ತವವಾಗಿ, ಈ ಸರ್ಕಾರವು ಹಿಂದುತ್ವ–ಕಾರ್ಪೋರೇಟ್‌ಗಳ ಒಂದು ಮೈತ್ರಿ ಕೂಟವೇ. ಹಾಗಾಗಿ, ಅದು ಕೈಗೊಳ್ಳುವ ಎಲ್ಲ ಕಾರ್ಯಗಳೂ ಕಾರ್ಪೋರೇಟ್‌ಗಳ ಹಿತಾಸಕ್ತಿಯನ್ನು ಈಡೇರಿಸುವ ಉದ್ದೇಶದಿಂದ ಕೂಡಿವೆ. ಕಾಶ್ಮೀರ ಕಣಿವೆಯ ಬಾಗಿಲನ್ನು ಕಾರ್ಪೋರೇಟ್ ಆಶ್ರಯದಾತರಿಗೆ ತೆರೆದಿರುವುದು ಅಲ್ಲಿ ಉತ್ಪಾದನೆ ಸಂಬಂಧಿತ ಆರ್ಥಿಕ ಚಟುವಟಿಕೆ ಹೆಚ್ಚಿಸುವುದಕ್ಕಲ್ಲ, ಬದಲಿಗೆ ರಿಯಲ್ ಎಸ್ಟೇಟ್ ಬೆಳೆಸಲಿಕ್ಕೆ ಅಥವಾ ಕೇವಲ ಭೂಮಿಯ ಬೆಲೆಗಳಲ್ಲಿ ಜೂಜುಗಾರಿಕೆಯೂ ಒಂದು ಹೆಚ್ಚುವರಿ ಉತ್ತೇಜನೆಯಾಗಿದೆ. ಇಂತಹ ರಿಯಲ್ ಎಸ್ಟೇಟ್ ಚಟುವಟಿಕೆಗಳು ಉದ್ಯೋಗಾವಕಾಶಗಳ ಮಟ್ಟವನ್ನೇನೂ ಹೆಚ್ಚಿಸುವುದಿಲ್ಲ. ಮಾರುವ ಮುನ್ನ ಆ ಭೂಮಿ ಉತ್ಪಾದಕ ಚಟುವಟಿಕೆಗಳಿಗೆ ಬಳಕೆಯಾಗುತ್ತಿದ್ದರಂತೂ ಅದು ಉದ್ಯೋಗಾವಕಾಶವನ್ನು ಕಡಿತ ಮಾಡುತ್ತದೆ.

ಈ ರೀತಿಯಾಗಿ, ಕಣಿವೆಯ ಬಾಗಿಲನ್ನು ಕೆಲವು ಜೂಜುಕೋರ ಭೂಮಿ ವ್ಯವಹಾರಿಗಳಿಗೆ ಮತ್ತು ರಿಯಲ್ ಎಸ್ಟೇಟ್ ಮಂದಿಗೆ ತೆರೆಯುವುದರಿಂದ, ಅದರಿಂದಾಗುವ ಪರಿಸರ ಮಾಲಿನ್ಯವನ್ನು ವಿವರಿಸುವ ಅಗತ್ಯವಿಲ್ಲ, ಜತೆಗೆ, ಈ ಮಂದಿ ಕಾಶ್ಮೀರದ ಮುಖವನ್ನು ಅಂದ, ಚೆಂದದಿಂದಾಗಿಯೇ ಶಾಶ್ವತವಾಗಿ ವಿರೂಪಗೊಳಿಸುತ್ತಾರೆ. ಇದರಿಂದ ಕೆಲವು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವ ಕಾಶ್ಮೀರದ ಅರ್ಥವ್ಯವಸ್ಥೆಯು ಜೂಜುಕೋರರ ಮತ್ತು ಭೂಗಳ್ಳ ಕದೀಮರ ಬೇಟೆಯ ತಾಣವಾಗಿ ಪರಿವರ್ತನೆಗೊಂಡು, ಇಂತಹ ಧಂಧೆಗಳಿಗೆ ಅಂಟಿಕೊಂಡಿರುವ ಕೊಲೆ ಸುಲಿಗೆ ಮುಂತಾದ ಅಪರಾಧಗಳಲ್ಲಿ ತೀವ್ರ ಉಬ್ಬರವೂ ಅನಿವಾರ್ಯವಾಗಿ ಬರುತ್ತದೆ. ಈಗಾಗಲೇ ತಾಳಲಾರದ ಮಟ್ಟದಲ್ಲಿರುವ ಭಯೋತ್ಪಾದಕರ ಹಾವಳಿ ಮತ್ತಷ್ಟು ಹೆಚ್ಚುವುದರೊಂದಿಗೆ, ಅದಕ್ಕೆ ಈ ರಿಯಲ್ ಎಸ್ಟೇಟ್ ಸಂಬಂಧಿತ ಅಪರಾಧಗಳು ತುಪ್ಪ ಸುರಿಯುತ್ತವೆ. ನಿಜ ಹೇಳಬೇಕೆಂದರೆ, ಈ ಎರಡೂ ರೀತಿಯ ಹಿಂಸಾಚಾರಗಳು ಒಂದಕ್ಕೊಂದು ಪೂರಕವಾಗುತ್ತವೆ, ಬೇರೆ ಸಂದರ್ಭಗಳಲ್ಲಿ ಮಾದಕ ಪದಾರ್ಥಗಳ ವ್ಯವಹಾರಗಳು ಮತ್ತು ಭಯೋತ್ಪಾದನೆಗಳು ಒಂದಕ್ಕೊಂದು ಪೂರಕವಾಗಿರುವ ರೀತಿಯಲ್ಲಿ

ಇದು, ದೇಶದಲ್ಲಿ ಪಾಳೇಗಾರಿ–ವಿರೋಧಿ ಭೂಸುಧಾರಣೆಗಳಿಗೆ ಮುನ್ನುಡಿ ಬರೆದ ರಾಜ್ಯಕ್ಕೆ ಒದಗಿರುವ ಒಂದು ದುರ್ವಿಧಿ. ಆದರೆ ಅಮಿತ್ ಷಾ ಖಂಡಿತವಾಗಿಯೂ ಈ ದುರ್ವಿಧಿಯನ್ನೇ "ಅಭಿವೃದ್ಧಿ" ಎನ್ನುತ್ತಾರೆ! ●

ಹಿಮಾಚಲ ಪ್ರದೇಶ ಮತ್ತು ಇತರ ಗಡಿ ಭಾಗದ ಬೆಟ್ಟ–ಗುಡ್ಡಗಳ ರಾಜ್ಯಗಳಲ್ಲಿ ಹೊರಗಿನವರು ಭೂಮಿ ಕೊಳ್ಳುವುದರ ಮೇಲೆ ನಿರ್ಬಂಧ ಇರುವಾಗ, "ಅಭಿವೃದ್ಧಿ"ಯ ಹೆಸರಿನಲ್ಲಿ ಕಾಶ್ಮೀರ ಕಣಿವೆಯಲ್ಲಿ ಮಾತ್ರ ಭೂಮಿ ಕೊಳ್ಳುವುದರ ಮೇಲೆ ಇರುವ ನಿರ್ಬಂಧವನ್ನು ತೆಗೆಯಬೇಕು ಎನ್ನುವುದು ವಿಚಿತ್ರವೇ ಸರಿ. ಕೇವಲ ಭೂಮಿ ವ್ಯವಹಾರಗಳ ಉಬ್ಬರದಿಂದ ಕಾಶ್ಮೀರ ಕಣಿವೆಯ ಅಭಿವೃದ್ಧಿಯಾಗುತ್ತದೆಯೇ?



ವ್ಯಂಗ್ಯಚಿತ್ರ: ಇ.ಪಿ. ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

‘ವಲಸಿಗರ ಸ್ವರ್ಗ’ ಅಮೆರಿಕದಲ್ಲಿ ‘ನರಕ ದರ್ಶನ’

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಟೆಕ್ಸಾಸ್ ನಲ್ಲಿ 31 ವಲಸಿಗರ ಸಾಮೂಹಿಕ ಕೊಲೆ

ಆಗಸ್ಟ್ 3 ರಂದು ಯು.ಎಸ್.ನ ಟೆಕ್ಸಾಸ್ ಪ್ರಾಂತ್ಯದ ಎಲ್ ಪಾಸೊ ಮತ್ತು ಒಹಿಯೋ ಪ್ರಾಂತ್ಯದ ಡೇಟನ್ ನ ಎರಡೂ ನಗರಗಳಲ್ಲಿ, ಶೂಟ್ ಔಟ್ ನಿಂದಾಗಿ 31 ಮಂದಿ ವಲಸೆಗಾರರು ಕೊಲ್ಲಲ್ಪಟ್ಟಿದ್ದಾರೆ ಹಾಗೂ ನೂರಾರು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಎಲ್ ಪಾಸೊ ದಲ್ಲಿ ದಾಳಿ ನಡೆಸಿದವನು 21 ವರ್ಷದ ಪ್ಯಾಟ್ರಿಕ್ ಕ್ರೂಸಿಯಸ್ಸ್ ಎಂದು ಪೋಲಿಸ್ ಅಧಿಕಾರಿಗಳು ಗುರುತಿಸಿದ್ದಾರೆ. ಇವನು ಟೆಕ್ಸಾಸ್ ನ ಅಲೆನ್ ನಗರದಿಂದ ಸುಮಾರು 650 ಮೈಲಿ ದೂರದಿಂದ ಬಂದಿದ್ದಾನೆ ಎನ್ನಲಾಗಿದೆ. ವಾಲ್‌ಮಾರ್ಟ್ ನ ಶಾಪಿಂಗ್ ಕೇಂದ್ರದಲ್ಲಿ ಎ.ಕೆ –47 ರೈಫಲ್ ನಿಂದ ಗುಂಡು ಹಾರಿಸಿದ್ದಾನೆ. ಇದರಲ್ಲಿ 22 ಮಂದಿ ಕೊಲ್ಲಲ್ಪಟ್ಟಿದ್ದಾರೆ. ಇದಕ್ಕೆ ಕೆಲವೇ ನಿಮಿಷಗಳ ಮೊದಲು, "ಅನಾನುಕೂಲ ಸತ್ಯ" (ದಿ ಇನ್‌ಕನ್ವೀನಿಯಂಟ್ ಟ್ರೂತ್) ವೆಂಬ ಶೀರ್ಷಿಕೆಯ ಅಡಿಯಲ್ಲಿ, ದ್ವೇಷ ತುಂಬಿದ ವಿಷಯಗಳ ಸುಮಾರು 2300 ಪದಗಳ ಪ್ರಣಾಳಿಕೆಯನ್ನು ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಿದ್ದಾನೆ ಎಂದು ವರದಿಯಾಗಿದೆ.

ಇದೇ ರೀತಿ ಒರೆಗಾನ್ ಜಿಲ್ಲೆಯ ಡೇಟನ್ ನಗರದಲ್ಲಿ ನಡೆದ ಗುಂಡಿನ ದಾಳಿಯಲ್ಲಿ 9 ಜನರು ಸತ್ತಿದ್ದಾರೆ. ದಾಳಿ ನಡೆಸಿದ ಸಂಶಯಾಸ್ಪದ ವ್ಯಕ್ತಿ ಕೂಡ ಗುಂಡಿಗೆ ಬಲಿಯಾಗಿದ್ದಾನೆ ಎಂದು ವರದಿಯಾಗಿದೆ.

ಪ್ಯಾಟ್ರಿಕ್ ತನ್ನ 2300 ಪದಗಳ ದಸ್ತಾವೇಜಿನಲ್ಲಿ, ಜನಾಂಗೀಯ ದ್ವೇಷ ಭಾವನೆಗಳ ಬಗ್ಗೆ ಹೇಳಿಕೊಂಡಿದ್ದಾನೆ. ಇವನ ಹೇಳಿಕೆಯಲ್ಲಿ ಹೆಚ್ಚಿನ ಅಂಶಗಳು ಪ್ರಮುಖವಾಗಿ, ಅಧ್ಯಕ್ಷ ಟ್ರಂಪ್ ನ ಹೇಳಿಕೆಗಳನ್ನು ಪ್ರತಿನಿಧಿಸುತ್ತವೆ. ಆದರೆ ಆತ ಟ್ರಂಪ್ ಗಿಂತ ಮುಂಚಿತವಾಗಿಯೇ ಈ ಸಿದ್ಧಾಂತವನ್ನು ನಾನು ಹೊಂದಿದ್ದೆ ಎಂದಿದ್ದಾನೆ. "ಈ ದಾಳಿಯು ಟೆಕ್ಸಾಸ್ ಅನ್ನು ಹಿಸ್ಪಾನಿಕರು ಆಕ್ರಮಿಸಿಕೊಂಡಿದಕ್ಕೆ ನನ್ನ ಪ್ರತಿಕ್ರಿಯೆಯಾಗಿದೆ" ಎಂದಿದ್ದು, ಈ ದಸ್ತಾವೇಜು "ಗ್ರೇಟ್ ರಿಪ್ಲೇಸ್ಮೆಂಟ್" ಎಂದು ಕರೆಯಲ್ಪಡುವ ಬಿಳಿ ಪ್ರಾಬಲ್ಯವಾದಿ ಸಿದ್ಧಾಂತವನ್ನು ಸಹ ಉಲ್ಲೇಖಿಸಿದೆ. ಅದರಂತೆ, ಇದು ಬಿಳಿ ಜನಾಂಗವನ್ನು ನಾಶ ಮಾಡಿ, ವಲಸಿಗರು ಮತ್ತು ನಿರಾಶ್ರಿತರನ್ನು ಈ ಪ್ರದೇಶದಲ್ಲಿ ತುಂಬುವ (ರಿಪ್ಲೇಸ್ಮೆಂಟ್ ಮಾಡುವ) ಸಲುವಾಗಿಯೇ, ಒಂದು ಗಣ್ಯರ ಗುಂಪು ಕಾರ್ಯ ನಿರ್ವಹಿಸುತ್ತಿದೆ ಎಂದು ಇದರಲ್ಲಿ ಆರೋಪಿಸಲಾಗಿದೆ.

ದುರಂತದ ಸುದ್ದಿ ತಿಳಿದ ಸ್ವಲ್ಪ ಸಮಯದ ನಂತರ, ತಮ್ಮ ಪ್ರೀತಿಪಾತ್ರರನ್ನು ಹುಡುಕಿಕೊಂಡು ಜನರು, ಆಸ್ಪತ್ರೆಗಳಿಗೆ ಭೇಟಿ ಕೊಡಲು ಪ್ರಾರಂಭಿಸಿದರು. ಎಲ್ ಪಾಸೊದಲ್ಲಿನ ಸ್ಥಳೀಯ ಅಧಿಕಾರಿಗಳ ಪ್ರಕಾರ, ಶೂಟಿಂಗ್ ನಿಂದ ಗಾಯಗೊಂಡ ಕೆಲವು



ಸಂತ್ರಸ್ತರು, ತಮ್ಮ ವಲಸೆ ಸ್ಥಿತಿಯ ಕಾರಣದಿಂದಾಗಿ, ಉದ್ದೇಶಪೂರ್ವಕವಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಲು ನಿರಾಕರಿಸುತ್ತಿದ್ದಾರೆ. ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಬಹುದು ಎಂಬ ಆತಂಕ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ವಲಸೆ ಮತ್ತು ಕಸ್ಟಮ್ಸ್ ಜಾರಿ (ಐಸಿಇ– ಇಮಿಗ್ರೆಂಟ್ಸ್ ಕಸ್ಟಮ್ಸ್ ಎನ್‌ಫೋರ್ಸ್‌ಮೆಂಟ್) ಅಧಿಕಾರಿಗಳು, ಕಳೆದ ಮೇ ತಿಂಗಳಿನಲ್ಲಿ ಅಧ್ಯಕ್ಷ ಟ್ರಂಪ್ ತಂದ ಹೊಸ ವಲಸೆ ನೀತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ವಲಸಿಗರನ್ನು ದೇಶ ಬಿಟ್ಟು ಓಡಿಸುವ ಬೆದರಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಎನ್ನಲಾಗಿದೆ. ಇದೊಂದು "ಕಳವಳಕಾರಿ ಪರಿಸ್ಥಿತಿ ನಿರ್ಮಾಣ" ಕ್ಕೆ ಮತ್ತೊಂದು ಸಾಕ್ಷಿಯಾಗಿದೆ ಎಂದು ವಲಸೆ ಸಮುದಾಯದ ಹೋಮ್ ಲ್ಯಾಂಡ್ ಸೆಕ್ಯೂರಿಟಿ ವಿಭಾಗದ ಮಾಜಿ ಸಹಾಯಕ ಕಾರ್ಯದರ್ಶಿಯಾಗಿದ್ದ, ಜೂಲಿಯಟ್ ಕಯೆಮ್ಮ ತಿಳಿಸಿದ್ದಾರೆ. ಟ್ರಂಪ್ ನ ಆಜ್ಞೆಯ ಪ್ರೇರಣೆಯಿಂದ ಸಕ್ರಿಯಗೊಂಡ ಐಸಿಇ ಎಜೆಂಟರು, ಆಸ್ಪತ್ರೆಗಳಿಂದ ಅಪಹರಿಸುತ್ತಾರೋ ಎಂಬ ಭಯದ ವಾತಾವರಣದಲ್ಲಿ, ಗಾಬರಿಗೊಂಡವರು ಆತಂಕಗೊಂಡಿದ್ದಾರೆ ಎಂದೂ ಅವರು ತಿಳಿಸಿದ್ದಾರೆ. ಇಂತಹ ಘಟನೆಗಳು ಈ ಹಿಂದೆಯೂ ನಡೆದಿದೆ ಎಂದು ಅವರು ಉದಾಹರಣೆಗಳ ಸಹಿತ ತಿಳಿಸಿದರು.

ಒಮ್ಮೆ ಐಸಿಇ ಯ ಏಜೆಂಟರು ಒಬ್ಬ ಗರ್ಭಿಣಿ ಮಹಿಳೆಯನ್ನು ಹೊಡೆದು, ಓಡಿಸುತ್ತಿದ್ದುದನ್ನು ಉದಾಹರಣೆಯಾಗಿ ನೀಡಲಾಗಿದೆ. ಆಸ್ಪತ್ರೆಗಳಲ್ಲಿ ಐಸಿಇ ಯವರು ಬಂಧಿಸಲ್ಪಟ್ಟವರಲ್ಲಿ ವಯಸ್ಕರ ಜೊತೆಗೆ, ಸಣ್ಣ ಪುಟ್ಟ ಮಕ್ಕಳನ್ನು ಬಿಡದೆ ಹಿಂಸಿಸುತ್ತಾರೆ. ಇದಕ್ಕೆ ಮತ್ತೊಂದು ಉದಾಹರಣೆಯೆಂದರೆ; 2017 ರಲ್ಲಿ, ಒಬ್ಬ 10 ವರ್ಷದ ವಲಸೆಯ ಬಾಲಕಿ, ತನ್ನ ಪಿತ್ತಕೋಶದ ಶಸ್ತ್ರ ಚಿಕಿತ್ಸೆಗಾಗಿ, ಕರೆದೊಯ್ಯುತ್ತಿದ್ದ ಅಂಬ್ಯೂಲೆನ್ಸ್ ಅನ್ನು ಚೆಕ್ ಪಾಯಿಂಟ್ ನಲ್ಲಿ ಐಸಿಇ ಏಜೆಂಟರು, ತಡೆದು ನಿಲ್ಲಿಸಿದರು. ಗಡಿಗಸ್ತು ಏಜೆಂಟರು ಆ ಬಾಲಕಿಯನ್ನು ಕಣ್ಗಾವಲಿನಲ್ಲಿ ಇಟ್ಟು ಚಿತ್ರ ಹಿಂಸೆ ಕೊಟ್ಟು, ಅವಳನ್ನು ಬಂಧನ ಕೇಂದ್ರಕ್ಕೆ ಕೊಂಡೊಯ್ಯಲಾಗಿತ್ತು. ಅನಂತರ, ಅಮೇರಿಕನ್ ಸಿವಿಲ್ ಲಿಬರ್ಟೀಸ್ ಯೂನಿಯನ್ ಈ ಪ್ರಕರಣವನ್ನುಕೈಗೆತ್ತಿಕೊಂಡು ನಡೆಸಿದ ಹೋರಾಟವು ರಾಷ್ಟ್ರೀಯ ಆಕ್ರೋಶವಾಗಿ ಪರಿಣಮಿಸಿದಾಗ ಆ ಬಾಲಕಿಯನ್ನು ಬಿಡುಗಡೆ ಮಾಡಲಾಗಿತ್ತು. ದಾಖಲೆ ರಹಿತ ವಲಸಿಗ ಕುಟುಂಬಗಳು ಟ್ರಂಪ್ ನ ವಲಸೆ ನೀತಿಯಿಂದ ಬಲಿಪಶುಗಳಾಗಿದ್ದಾರೆ ಎಂದು ವಲಸೆ ಸಮುದಾಯದ ಪರ ವಾದಿಗಳು, ಅಮೆರಿಕನ್ನರ ವಲಸೆ ನೀತಿಗಳ ಕಠಿಣ ಕ್ರಮಗಳನ್ನು ಉಗ್ರವಾಗಿ ಟೀಕಿಸಿದ್ದಾರೆ.



ಈ ರೀತಿಯ ಅಮಾನವೀಯ ಆಕ್ರಮಣಗಳನ್ನು ಮುಂದುವರಿಸಲು, ಟ್ರಂಪ್ ವಲಸೆ ನೀತಿ ಪ್ರೇರಣೆಯಾಗಿದೆ. ಹೀಗೆ ಪ್ರತಿದಿನ ವಲಸೆಗಾರ ಸಮುದಾಯ ಎದುರಿಸುತ್ತಿರುವ ಅಮಾನವೀಯತೆಯ ಸ್ಪಷ್ಟ ಸೂಚನೆಗಳ ಇನ್ನೊಂದು ಭೀಕರ ರೂಪವೇ ಎಲ್ ಪಾಸೊದಲ್ಲಿ ಸಂಭವಿಸಿದ ಸಾಮೂಹಿಕ ಶೂಟಿಂಗ್ ಎಂದು ಪರಿಗಣಿಸಬಹುದು.

ಮಿಸ್ಸಿಸ್ಸಿಪ್ಪಿ ವಲಸೆ ಕಾರ್ಮಿಕರ ಮೇಲೆ ಅತಿ ದೊಡ್ಡ ದಾಳಿ

ಆಗಸ್ಟ್ 7 ರಂದು ಅಧ್ಯಕ್ಷ ಟ್ರಂಪ್ ಮತ್ತು ಪತ್ನಿ, ಎಲ್ ಪಾಸೊ ಮತ್ತು ಡೇಟನ್‌ನ ಎರಡೂ ನಗರಗಳಿಗೆ ಭೇಟಿ ಕೊಡುವ ಕಾರ್ಯಕ್ರಮವಿತ್ತು. ಈ ಹಿನ್ನೆಲೆಯಲ್ಲಿಯೇ, ಈ ಎರಡು ನಗರಗಳಲ್ಲಿ ಜನಾಂಗದ್ವೇಷದ ಶೂಟ್ ಔಟ್ ದಾಳಿ ನಡೆದು 31 ವಲಸಿಗ ಜನರು ಕೊಲ್ಲಲ್ಪಟ್ಟಿದ್ದಾರೆ. (ಇದರ ಜತೆಗೆ ಇರುವ ಇನ್ನೊಂದು ವರದಿ ನೋಡಿ). ಈ ಎರಡು ನಗರಗಳಲ್ಲಿ, ಬಹುತೇಕ ವಲಸಿಗರು ವಾಸಿಸುತ್ತಿದ್ದಾರೆ.

ಎಲ್ ಪಾಸೊ ಮತ್ತು ಡೇಟನ್ ಗಳನ್ನು ಬೇರ್ಪಡಿಸಬೇಕೆಂಬ ಯೋಜನೆಯನ್ನು ಟ್ರಂಪ್ ಹೊಂದಿದ್ದಾರೆ ಕೂಡ. ಈ ಹಿನ್ನೆಲೆಯಲ್ಲಿ, ತನ್ನ ಭೇಟಿಯ ದಿನದಂದೇ ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆ (ಐಸಿಇ) ಯ ಅಧಿಕಾರಿಗಳಿಗೆ ಟ್ರಂಪ್ ಆದೇಶ ನೀಡಿ, "ಮಿಸ್ಸಿಸ್ಸಿಪ್ಪಿ ಯ ಹಲವಾರು ಆಹಾರ ಸಂಸ್ಕರಣಾ ಘಟಕಗಳಿಗೆ ಅವರನ್ನು ಕಳುಹಿಸಿ, ಭಾರೀ ದಾಳಿ ನಡೆಸಿದ್ದಾರೆ. ಈ ದಾಳಿಗಳು ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆ ನಡೆಸಿದ ಅತ್ಯಂತ ದೊಡ್ಡ ಹಾಗೂ ಕ್ರೂರ ದಾಳಿಯೆಂದು ಹೇಳಲಾಗಿದೆ. ಅಲ್ಲಿ ವಲಸಿಗ ಕಾರ್ಮಿಕರು ಬಹು ದೊಡ್ಡ ಪ್ರಮಾಣದಲ್ಲಿ ದುಡಿಯುತ್ತಿರುವುದೇ ಈ ದಾಳಿಗೆ ಮೂಲ ಕಾರಣವಾಗಿದೆ. ಇದರಿಂದಾಗಿ, ಮಿಸ್ಸಿಸ್ಸಿಪ್ಪಿ ಯ ಆಹಾರ ಸಂಸ್ಕರಣಾ ಘಟಕಗಳಲ್ಲಿ ದುಡಿಯುತ್ತಿರುವ ಸಾವಿರಾರು ವಲಸೆ ಕಾರ್ಮಿಕರು ಭಯಭೀತರಾಗಿದ್ದಾರೆ. ಇವರನ್ನು ತಮ್ಮ ತಮ್ಮ ಕುಟುಂಬ ಸದಸ್ಯರಿಂದ ಬೇರ್ಪಡಿಸಲಾಗುತ್ತಿದೆ.

ಯುಎಸ್ ನ ಐಸಿಇ ಯ ಅಧಿಕಾರಿ ಯೊಬ್ಬರು, ಅಸೋಸಿಯೇಟೆಡ್ ಪ್ರೆಸ್ (ಎಪಿ) ಗೆ ಹೇಳಿಕೆ ನೀಡುತ್ತಾ, "ನಮ್ಮ ಈ ದಾಳಿಯಲ್ಲಿ ಮಿಸ್ಸಿಸ್ಸಿಪ್ಪಿ ಯಲ್ಲಿರುವ ಹಲವಾರು ಕಂಪನಿಗಳನ್ನು ಗುರಿಯಾಗಿಟ್ಟುಕೊಂಡು ರಾಜ್ಯದ ಏಳು ವಿವಿಧ ಸ್ಥಳಗಳಲ್ಲಿ ಹುಡುಕಾಟದ ವಾರಂಟ್ ನಡೆಸಲಾಗಿದೆ. ಎಪಿ ಯ ಪ್ರಕಾರ, ಕೋಳಿ ಉತ್ಪಾದಕ ಕೋಚ್ ಆಹಾರ ಸಂಸ್ಕರಣಾ ಸಂಸ್ಥೆಯ ಮಾರ್ಟನ್ ಸ್ಥಾವರದ ಮೇಲಿನ ದಾಳಿಯು ಅತಿ ದೊಡ್ಡ ದಾಳಿಯಾಗಿದೆ.

ದಾಳಿಯ ಯಾವುದೇ ವಿವರಣೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲದಿರುವುದರಿಂದ ಐಸಿಇ ಅಧಿಕಾರಿಗಳು ಅನಾಮಧೇಯವಾಗಿ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ್ದಾರೆ ಎಂದು ಎಪಿ ವರದಿಗಾರರು ತಿಳಿಸಿದ್ದಾರೆ. ಪ್ಲೂಡ್ ಮಿಷನ್ ನಲ್ಲಿ ಕಾರ್ಮಿಕರನ್ನು ಮಿಲಿಟರಿ ಸೌಲಭ್ಯಕ್ಕೆ ಬಳಸಿಕೊಳ್ಳಲಾಗಿದೆ. ದಾಳಿಯಿಂದಾಗಿ ಇಲ್ಲಿಯವರೆಗೆ ಸುಮಾರು 680 ಜನರನ್ನು ಬಂಧಿಸಲಾಗಿದೆ ಎಂದು ಸರ್ಕಾರಿ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ. ಈ ಅಂಕಿ ಅಂಶಗಳು ಸರಿಯಾಗಿದ್ದರೆ, ಕಾರ್ಮಿಕರ ಮೇಲೆ ನಡೆದ ಅತಿ ದೊಡ್ಡ ದಾಳಿ ಇದೆಂದು ದಾಖಲಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲೇ ಇದು ಅತಿ ದೊಡ್ಡದಾದ ದಾಳಿಯಾಗಿದೆ ಎನ್ನಲಾಗಿದೆ. 600 ಸರಕಾರಿ ಏಜೆಂಟರು ಈ ದಾಳಿಯಲ್ಲಿ ಭಾಗವಹಿಸಿದ್ದಾರೆ. ಯಾವ ವಲಸಿಗ ಕಾರ್ಮಿಕರು ತಪ್ಪಿಸಿಕೊಂಡು ಹೋಗದ ಹಾಗೆ ಸುತ್ತುವರಿದಿದ್ದಾರೆ.

ಟ್ರಂಪ್ ಆಡಳಿತದ ನಿರ್ದೇಶನದಂತೆ, ಐಸಿಇ ಅಧಿಕಾರಿಗಳು ಸ್ಪಷ್ಟವಾಗಿ ಲ್ಯಾಟಿನೋ ಜನರನ್ನು ಗುರಿಯಾಗಿಸಿ ಭಯೋತ್ಪಾದನೆ ಮಾಡುವುದನ್ನು ಮುಂದುವರಿಸಲು ಉದ್ದೇಶಿಸಿದೆ ಎಂಬ ಸಂದೇಶವನ್ನು ಕಳುಹಿಸಲಾಗಿದೆ. ಸಂಸ್ಕರಣ ಸಂಸ್ಥೆಗಳ ಪಕ್ಕದಲ್ಲಿರುವ 6 ಪಟ್ಟಣಗಳು ಲ್ಯಾಟಿನೋ ಜನಸಂಖ್ಯೆಯನ್ನು ಹೆಚ್ಚಾಗಿ ಹೊಂದಿವೆ. ಎಪಿ ಪ್ರಕಾರ, ಅವುಗಳೆಂದರೆ ಬೇ ಸ್ಪ್ರಿಂಗ್ಸ್, ಕಾರ್ತೇಜ್, ಕ್ಯಾಂಟನ್, ಮಾರ್ಟನ್, ಪೆಲಹ್ಯಾಚಿ ಮತ್ತು ಸೆಬಾಸ್ಟಾಪೋಲ್. "ಇಂದಿನ ದಾಳಿಗಳು ವಲಸೆ ಬಂದ ಕುಟುಂಬಗಳು ಮತ್ತು ಅವರು ವಾಸಿಸುವ ಸಮುದಾಯಗಳ ವಿರುದ್ಧ ನಡೆಯುತ್ತಿರುವ ಯುದ್ಧದ ಭಾಗವಾಗಿದೆ" ಎಂದು ದಕ್ಷಿಣ ಬಡತನ ಕಾನೂನು ಕೇಂದ್ರದ ವಕೀಲ ಜೂಲಿಯಾ ಸೊಲೊರೊನೊ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಲಸೆ ಮತ್ತು ಕಸ್ಟಮ್ಸ್ ಜಾರಿ (ಐಸಿಇ) ಅಧಿಕಾರಿಗಳು, ಓಹಿಯೋ ಪಟ್ಟಣಗಳಾದ ಕ್ಯಾಂಟನ್, ಮ್ಯಾಸಿಲ್ಲನ್ ಮತ್ತು ಸೇಲಂ ನಲ್ಲಿನ ಫ್ರೆಶ್ ಮಾರ್ಕ್ ಆಹಾರ ಸಂಸ್ಕರಣಗಳ ಮೇಲೆ ದಾಳಿ ಮಾಡಿರುವುದು ಸರಿಯಲ್ಲವೆಂದು, ಯುನೈಟೆಡ್ ಫುಡ್ ಅಂಡ್ ಕಮರ್ಷಿಯಲ್ ವರ್ಕರ್ಸ್ ಇಂಟರ್‌ನ್ಯಾಷನಲ್ ಯೂನಿಯನ್‌ನ ಅಧ್ಯಕ್ಷ ಮಾರ್ಕ್ ಪೆರೋನೊ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ಕಷ್ಟಪಟ್ಟು ದುಡಿಯುವ ಪುರುಷ ಮತ್ತು ಮಹಿಳಾ ಕಾರ್ಮಿಕರನ್ನು, ಅವರ ಮಕ್ಕಳು ಮತ್ತು ಇನ್ನಿತರ ಕುಟುಂಬದ ಸಮುದಾಯವನ್ನು ಬೇರ್ಪಡಿಸುವುದು ತಪ್ಪೆಂದು ಅವರು ಉಗ್ರವಾಗಿ ಟೀಕಿಸಿದ್ದಾರೆ. ಇವರೆಲ್ಲರೂ ಸಹ ನಂಬಲಾಗದಷ್ಟು ಕಷ್ಟಪಟ್ಟು ಕೆಲಸ ನಿರ್ವಹಿಸುತ್ತಾರೆ. ಆದ್ದರಿಂದ, ಇವರು ಕೆಲಸ ಮಾಡುವ ಸ್ಥಳಗಳಲ್ಲಿ ಗೌರವ ಮತ್ತು ನ್ಯಾಯಸಮ್ಮತವಾಗಿ ಇವರನ್ನು ಪರಿಗಣಿಸಬೇಕು. ಆದರೆ, ಇವರನ್ನು ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿದೆ, ಎಂದು ಮಾರ್ಕ್ಸ್ ಪೆರೋನೊ ಕಠಿಣವಾಗಿ ಟೀಕಿಸಿದ್ದಾರೆ. ●

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

–ಸಂಪಾದಕರು

JANASHAKTHI KANNADA VARA PATRIKE August 19-25, 2019 Price: Rs. 10/- Date of Publication: 16 August 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಸಿಐಟಿಯು ವತಿಯಿಂದ ಮಧ್ಯರಾತ್ರಿ ಧ್ವಜಾರೋಹಣ

ಪ್ರತಿ ವರ್ಷದಂತೆ ಈ ವರ್ಷವೂ ಸ್ವಾತಂತ್ರೋತ್ಸವ ಸತ್ಯಾಗ್ರಹ ವಿಜಯಪುರ ಸಿಐಟಿಯು ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿಜಯಪುರದ ಹುತಾತ್ಮ ವೃತ್ತದಲ್ಲಿ ನಡೆಯಿತು. ಮಧ್ಯರಾತ್ರಿ 12 ಗಂಟೆಗೆ 73ನೇ ಸ್ವಾತಂತ್ರ್ರ್ಯೋತ್ಸವದ ಧ್ವಜಾರೋಹಣವನ್ನು ರೈತ ಕಾರ್ಮಿಕ ಮುಖಂಡರಾದ ಭೀಮಶಿ ಕಲಾದಗಿ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾರ್ಮಿಕ ಕಾನೂನುಗಳನ್ನು ತಿದ್ದುಪಡೆ ಮಾಡುವ ಮೂಲಕ ಕಾರ್ಮಿಕರ ಹಕ್ಕನ್ನು ಕೇಂದ್ರ ಸರ್ಕಾರ ಕಸಿದುಕೊಳ್ಳುತ್ತಿದೆ. ಕನಿಷ್ಟ ಕೂಲಿಯನ್ನು ದಿನಕ್ಕೆ 178 ರೂ. ಗೆ ಇಳಿಸುವ ಯತ್ನ ನಡೆದಿದೆ ಎಂದು ಆರೋಪಿಸಿದರು. ರೈತರು ಬರಗಾಲದಿಂದ ಮತ್ತು ನೆರೆ ಹಾವಳಿಯಿಂದ ತತ್ತರಿಸಿ ಹೋಗಿದ್ದಾರೆ. ಅವರ ಕಷ್ಟ ನೋವುಗಳಿಗೆ ಯಾರೊಬ್ಬ ಜನಪ್ರತಿನಿಧಿಗಳು, ರಾಜಕಾರಣಿಗಳು ದಾವಿಸುತ್ತಿಲ್ಲ. ಕೂಡಲೇ ನೆರೆ ಹಾವಳಿ ಸಂತ್ರಸ್ತರ ಸ್ಥಳಕ್ಕೆ ತೆರಳಿ ಅವರಿಗೆ ಬೇಕಾಗುವ ಸೌಲಭ್ಯವನ್ನು ಸರ್ಕಾರದಿಂದ ಒದಗಿಸಿಕೊಡಬೇಕು ಎಂದು ಹೇಳಿದರು.

ನಗರ ಸಭೆಯ ಮಾಜಿ ಅಧ್ಯಕ್ಷರಾದ ಅಬ್ದುಲ್ ರಜಾಕ ಲೋಣಿ ಅತಿಥಿಗಳಾಗಿ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಜನವಾದಿ ಮಹಿಳಾ ಸಂಘದ ಸುರೇಖಾ ರಜಪೂತ ಮಾತನಾಡಿದರು.

ಸರಸ್ವತಿ ಮಠ, ಸುನಂದಾ ನಾಯಕ,ಗ್ರಾಮ ಪಂಚಾಯತ ನೌಕರರ ಸಂಘದ ಚಳ್ಳಗಿ, ಭೀಮರಾಯ ಪೂಜಾರಿ, ಕಾಳಮ್ಮ ಬಡಿಗೇರ, ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

–ಲಕ್ಷ್ಮಣ ಹಂದ್ರಾಳ

ಬೀದಿ ಬದಿಯ ವ್ಯಾಪಾರಸ್ಥರಿಂದ ಧ್ವಜಾರೋಹಣ

ಬೀದಿಬದಿ ವ್ಯಾಪಾರಸ್ಥರು ಮತ್ತು ಅಂಗಡಿ ಮಾಲೀಕರು ಸಂಯೋಗದಿಂದ 73ನೆಯ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು,

ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘ (ಸಿಐಟಿಯು) ದ ಗೌರವ ಅಧ್ಯಕ್ಷರಾದ ಕಾಂ.ಬಿ.ಕೆ. ಇಮ್ತಿಯಾಸ್ ಧ್ವಜಾರೋಹಣ ಮಾಡಿದರು.

ಮಾತನಾಡುತ್ತಾ, ಅವರು ಮೊದಲು ನೆರೆದಿದ್ದ ಜನರಿಗೆ ಶುಭಾಶಯ ಕೋರಿದರು. ನಂತರ ನಮ್ಮ ಜಿಲ್ಲೆ ಮತ್ತು ಉತ್ತರ ಕರ್ನಾಟಕದಲ್ಲಿ ಹಾಗು ಇತರ ಜಿಲ್ಲೆಗಳಲ್ಲಿ ನಡೆದಂತಹ ಮಳೆಯಿಂದ ಆದ ಅವಾಂತರಕ್ಕೆ ಖೇದ ವ್ಯಕ್ತಪಡಿಸಿದರು ಹಾಗು ನೆರೆ ಸಂತ್ರಸ್ತರಿಗೆ ನಾವೆಲ್ಲರೂ ನೊಂದವರಿಗೆ ನೆರವಾಗುವುದು ಅತ್ಯಗತ್ಯವಾಗಿದೆ ಎಂದರು.

ಇಂದಿನ ದಿನಗಳಲ್ಲಿ ಭಾರತೀಯತೆಯನ್ನು ಎತ್ತಿ ಇಡಿಯ ಬೇಕಾಗಿದೆ, ತಮ್ಮ ತಮ್ಮಲ್ಲಿ ಇರುವ ದ್ವೇಷವನ್ನು ಬಿಟ್ಟು ಪ್ರೀತಿಯಿಂದ ಸಹಬಾಳ್ವೆಯಿಂದ ಬಾಳಬೇಕಾಗಿದೆ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಜಿಲ್ಲೆಯ ಹಲವಾರು ಪ್ರಮುಖ ವ್ಯಕ್ತಿಗಳನ್ನು ನೆನಪಿಗೆ ತಂದರು.

ಕಾರ್ಯಕ್ರಮದ ಮೊದಲಿಗೆ ಕಾರ್ಯದರ್ಶಿಯಾದ ಹರೀಶ್ ಪೂಜಾರಿ ಸ್ವಾಗತಿಸಿದರು.

ಕೊನೆಯಲ್ಲಿ ಸಂತೋಷ್‌ಕುಮಾರ್ ಆರ್.ಎಸ್. ಧನ್ಯವಾದ ಮಾಡಿದರು.

ಅಧ್ಯಕ್ಷರಾದ ಮೊಹಮ್ಮದ್ ಮುಸ್ತಫಾ, ಹಸನ್, ಆದಂ ಬಜಾಲ್, ಇಸ್ಮಾಯಿಲ್ ಹಾಗೂ ಅಂಗಡಿ ಮಾಲೀಕರು ಉಪಸ್ಥಿತರಿದ್ದರು.

ಡಿವೈಎಫ್‌ಐ ಬಿ.ಸಿ ರಸ್ತೆ: ಸ್ವಾತಂತ್ರ್ಯ ದಿನಾಚರಣೆ

ಕುಂದಾಪುರ ತಾಲೂಕು ಬಿ.ಸಿ ರಸ್ತೆ ಬೆಟ್ಟಾಗರದಲ್ಲಿ ಡಿವೈಎಫ್‌ಐ ಘಟಕವು ಸ್ವಾತಂತ್ರ್ಯ ದಿನಾಚರಣೆ ಅಕ್ಷರ ಕಟ್ಟಡದಲ್ಲಿ ಆಚರಿಸಿತು. ರಾಷ್ಟ್ರ ಧ್ವಜಾರೋಹಣವನ್ನು ಸ್ಥಳೀಯರಾದ ಮಹಾಬಲ ಗರಡಿಮನೆ ನೆರವೇರಿಸಿದರು. ಡಿವೈಎಫ್‌ಐ ಘಟಕ ಅಧ್ಯಕ್ಷರಾದ ಮಂಜುನಾಥ ಶೋಗನ್, ಕಾರ್ಯದರ್ಶಿ ರವಿ ವಿ.ಎಂ. ಮತ್ತು ಇತರರು ಇದ್ದರು.

ಸಂತ್ರಸ್ತರಿಗೆ ನೆರವು ಸಂಗ್ರಹಿಸಿ ಸ್ವಾತಂತ್ರ್ಯ ದಿನಾಚರಣೆ

ಡಿವೈಎಫ್‌ಐ ಬಜಾಲ್ ಪಕ್ಕಲಡ್ಕ ಘಟಕ ಪಕ್ಕಲಡ್ಕ ಯುವಕ ಮಂಡಲ (ರಿ) ಆಶ್ರಯದಲ್ಲಿ ಈ ಬಾರಿಯ 73 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಗೆ ತುತ್ತಾತ ಸಂತ್ರಸ್ತರುಗಳಿಗೆ ಬಜಾಲ್ ಸುತ್ತಮುತ್ತಲ ಪ್ರದೇಶದಲ್ಲಿ ಆಹಾರ, ಅಗತ್ಯ ವಸ್ತುಗಳು ಮತ್ತು ನಿಧಿ ಸಂಗ್ರಹಿಸುವ ಮೂಲಕ ಆಚರಿಸಲಾಯಿತು.

ಪಕ್ಕಲಡ್ಕ ಯುವಕ ಮಂಡಲದ ಅದ್ಯಕ್ಷರಾದ ನಾಗೇಶ್ ಶೆಟ್ಟಿ ದ್ವಜಾರೋಹಣ ಗೈದು ನೆರೆ ಪರಿಹಾರ ಸಂಗ್ರಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡುತ್ತಾ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 73 ವರುಷಗಳಾದರೂ ದೇಶದ ಬಡಜನರನ್ನು ಕಾಡುವ ಸಮಸ್ಯೆಗಳು ಬಗೆಹರಿಯಲೇ ಇಲ್ಲ ಮತ್ತು ಬಗೆಹರಿಸುವ ಕೆಲಸಗಳನ್ನು ಆಳುವ ವರ್ಗಗಳು ಮಾಡಲೇ ಇಲ್ಲ. ಬದಲಾಗಿ ಕೋಮುವಾದವನ್ನು ಬೆಳೆಸುವ ಮೂಲಕ ಸಮಾಜವನ್ನು ಒಡೆಯುವ, ಸಾಮರಸ್ಯಕ್ಕೆ ಧಕ್ಕೆ ತರುವ ಮೂಲಕ ಭಾರತವನ್ನು ಹಿಮ್ಮುಖವಾಗಿ ತಳ್ಳುತ್ತಿದ್ದಾರೆ.

ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡುತ್ತಾ ದೇಶದ ಸ್ವಾತಂತ್ರ್ಯ ಕ್ಕಾಗಿ ಹೋರಾಡಿದಂತಹ ಭಗತ್ ಸಿಂಗರ ಆಶಯ ಇವತ್ತಿಗೂ ಈಡೇರದಿರಲು ಕಾರಣ ಸ್ವಾತಂತ್ರ್ಯ ಕೇವಲ ಈ ದಿನವನ್ನು ಆಚರಿಸುವುದಕ್ಕಷೇ ಸೀಮಿತವಾಗಿರುವುದು. ದೇಶದಲ್ಲಿ ಯುವಜನ ಉದ್ಯೋಗವಿಲ್ಲದೆ ಪರದಾಡುವಂತಾಗಿದೆ. ಜನ ಸಾಮಾನ್ಯರು ತಮ್ಮ ದಿನನಿತ್ಯದ ಬಳಕೆ ವಸ್ತುಗಳನ್ನು ಖರೀದಿಸಲು ಪೇಚಾಡುತಿದ್ದಾರೆ. ರಾಜ್ಯದಲ್ಲಿ ವಿಪರೀತ ಮಳೆಯಲ್ಲಿ ಉಂಟಾದ ನೆರೆಯಿಂದಾಗಿ ಜನ ಕಾಂಗಾಲಾಗಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ, ಅವರನ್ನು ಕಾಡುವ ಕಷ್ಟಗಳಿಂದ ಮೇಲಕ್ಕೆತ್ತುವ ಕೆಲಸವನ್ನು ನಮ್ಮನ್ನಾಳುವ ಸರಕಾರಗಳು ಸಂಪೂರ್ಣವಾಗಿ ಕಡೆಗಣಿಸಿವೆ. ಡಿವೈಎಫ್‌ಐ ಈ ಬಾರಿ ನೆರೆ ಸಂತ್ರಸ್ತರುಗಳಿಗೆ ಪರಿಹಾರ ಕಾರ್ಯಗಳಲ್ಲಿ ಸಹಕರಿಸುವ ನಿಟ್ಟಿನಲ್ಲಿ ಎಲ್ಲಾ ಕಡೆಗಳಲ್ಲಿ ಸ್ವಾತಂತ್ರ್ಯ ದಿನವನ್ನು ನೆರೆ ಪರಿಹಾರ ಸಂಗ್ರಹಿಸುವ ಮೂಲಕ ಆಚರಿಸಬೇಕೆಂದು ತೀರ್ಮಾನಿಸಿವೆ ಎಂದರು.

ಈ ವೇಳೆ ಸ್ಥಳೀಯ ಮುಖಂಡರಾದ ನಾಗರಾಜ್ ಬಜಾಲ್, ದೀಪಕ್ ಬೊಲ್ಲ, ಅಶೋಕ್ ಎನೆಲ್ಮಾರ್ ಡಿವೈಎಫ್‌ಐ ಮುಖಂಡರಾದ ಧೀರಾಜ್, ನೂರುದ್ದೀನ್, ಪ್ರಕಾಶ್ ಶೆಟ್ಟಿ, ವರಪ್ರಸಾದ್, ಅಶೋಕ್ ಸಾಲ್ಯಾನ್ ಮುಂತಾದವರು ಉಪಸ್ಥಿತರಿದ್ದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೂತನ ರಾಜ್ಯ ಪಧಾಧಿಕಾರಿಗಳು

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 10 ನೇ ರಾಜ್ಯ ಸಮ್ಮೇಳನದಲ್ಲಿ ನೂತನ ರಾಜ್ಯ ಸಮಿತಿಗೆ **ಅಧ್ಯಕ್ಷ**ರಾಗಿ ದೇವಿ ಮಂಡ್ಯ, **ಕಾರ್ಯದರ್ಶಿ**ಯಾಗಿ ಗೌರಮ್ಮ ಬೆಂಗಳೂರು, ರಾಜ್ಯ ಖಜಾಂಚಿಯಾಗಿ ಲಲಿತಾ ಶೆಣೈ, **ಉಪಾದ್ಯಕ್ಷ**ರಾಗಿ ಡಾ. ಮೀನಾಕ್ಷಿ ಬಾಳಿ, ಕೆ.ಎಸ್. ವಿಮಲ, ಕೆ.ಎಸ್. ಲಕ್ಷ್ಮಿ, ಕೆ. ನೀಲಾ, ಗೀತಾ, **ಸಹ ಕಾರ್ಯದರ್ಶಿ**ಗಳಾಗಿ ಸುನೀತಾ, ಶೋಭಾ, ರೇಷ್ಮಾ, ವಿಜಯಕುಮಾರಿ ಹಾಗೂ ರಾಜ್ಯ ಸಮಿತಿ ಸದಸ್ಯರಾಗಿ 20 ಮಂದಿ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ನೂತನ ರಾಜ್ಯ ಸಮಿತಿಗೆ ಕ್ರಾಂತಿಕಾರಿ ಶುಭಾಶಯಗಳು.


ಅಧ್ಯಕ್ಷರು: ದೇವಿ


ಕಾರ್ಯದರ್ಶಿ: ಗೌರಮ್ಮ


ರಾಜ್ಯ ಖಜಾಂಚಿ: ಲಲಿತಾ ಶೆಣೈ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**